
ಮಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 20
ರೂ. 5/-
ಮೇ 17, 2009

ಜನಶಕ್ತಿ

ಕನ್ನಡ ವಾರಪತ್ರಿಕೆ





ಆರ್ಥಿಕ ಬಿಕ್ಕಟ್ಟಿನ ಕರಾಳ ಛಾಯೆ : ನಿಜವಾದ ಮಾರ್ಕ್ಸ್ ಭವಿಷ್ಯ






ಆಡಳಿತ ವಿರೋಧಿ ಅಲೆ ಕಾಣದ ಕೇರಳ

ಕೋಕಾ ಜಾರಿ ಅಪಾಯಕಾರಿ



ನೇಪಾಳದಲ್ಲಿ ಮತ್ತೆ ಬಿಕ್ಕಟ್ಟು

ಮೇ ದಿನಾಚರಣೆ : ನಿರಂತರ ಸಂಘರ್ಷದ ಸ್ಫೂರ್ತಿ



ಈ ಸಲ ಬೀದರ ಸಹ ಕಾದ ಕೆಂಡದಂತೆಯೇ ಚುರುಗುಟ್ಟುತ್ತಿದೆ. ಉರಿ ಬಿಸಿಲಲ್ಲಿ ಜನ ನಿಲ್ಲುವುದೆಲ್ಲಿ ಎಂಬ ಚಿಂತೆ ಇತ್ತು. ಮೇ ಒಂದರಂದು ಉರಿವ ಬಿಸಿಲು ಲೆಕ್ಕಿಸದೆ ಕೆಂಬಾವುಟ ಹಿಡಿದು ಕಾರ್ಮಿಕರು ನೆರೆಯತೊಡಗಿದರು. ಮಳೆ ಗಾಳಿ ಬಿಸಿಲೆನ್ನದೇ ರಸ್ತೆ ನಿರ್ಮಿಸಿದವರು, ಬಂಗಲೆ ಕಟ್ಟಿದವರು,ಕೆರೆ ಬಾವಿ ಹಳ್ಳ ತೋಡಿದವರು ಇವರೇ ಅಲ್ಲವೇ?.

ನಾವು ಮತ್ತೆ ಬೀದರ ನೆಲದಲ್ಲಿ ಬುಕೇಟಿನಂತ ಧೂಳನ್ನು ತುಳಿಯುತ ಖಡಿ ಬಿಸಿಲಲ್ಲಿ ಓಡಾಡುತ್ತಿದ್ದವು. ಉದ್ಯೋಗ ಖಾತ್ರಿಯ ಕೆಲಸ ಆರಂಭಗೊಂಡ ಮೇಲೆ ಏನೆಲ್ಲ ಮಾಡಬಹುದಾದ ಭರವಸೆ ಹುಟ್ಟಿತು. ಜಿಲ್ಲೆಯಾದ್ಯಂತ ಹೊಸ ಸಂಪರ್ಕದ ಕೊಂಡಿಗಳು ಬೆಸೆದುಕೊಂಡಿದ್ದವು. ಮೂವ್ವತ್ತು ವರ್ಷಗಳಷ್ಟು ಹಿಂದೆ ಡಿವೈಎಫ್ಐ ಚಟುವಟಿಕೆಗಳು ನಡೆದ ದಿನಗಳಲ್ಲಿನ ಸಂಗಾತಿಗಳ ಸಂಪರ್ಕ ಈವರೆಗೂ ಉಳಿಸಿಕೊಂಡ ಸಂಗಾತಿ ಜಿವಿಎಸ್ ಪ್ರಯತ್ನದಿಂದ ಮತ್ತೆ ಎಲ್ಲರೂ ಹೊಸ ಹುರುಪಿನಿಂದ ಕೂಡಿ ಕೆಲಸದಲ್ಲಿ ತೊಡಗಿಕೊಂಡಿದ್ದು ಖಂಡಿತ ಖುಷಿ ತರುವ ಸಂಗತಿಯಲ್ಲದೇ ಮತ್ತೇನು? ಆದೊಂದು ದಿನ ಕಟ್ಟಡ ಕಾರ್ಮಿಕರ ಸಭೆ ನಡೆಸಿದರು. ಮತ್ತೊಂದು ದಿನ ಅಂಗನವಾಡಿ, ಬಿಸಿಯೂಟ, ಉದ್ಯೋಗ ಖಾತ್ರಿಯ ಕಾರ್ಮಿಕರ ಸಭೆ. ಹೀಗೆ ಶ್ರಮಜೀವಿಗಳೆಲ್ಲ ಸಭೆ ಸೇರಿ ಈ ಬಾರಿ ಮೇ ದಿನಾಚರಣೆ ಸ್ಫೂರ್ತಿಯುತವಾಗಿ ಆಚರಿಸಲು ತೀರ್ಮಾನಿಸಿದರು.

ಐಕ್ಯಮಂತ್ರ

ಈ ಸಲ ಬೀದರ ಸಹ ಕಾದ ಕೆಂಡದಂತೆಯೇ ಚುರುಗುಟ್ಟುತ್ತಿದೆ. ಉರಿ ಬಿಸಿಲಲ್ಲಿ ಜನ ನಿಲ್ಲುವುದೆಲ್ಲಿ ಎಂಬ ಚಿಂತೆ ಇತ್ತು. ಮೇ ಒಂದರಂದು ಉರಿವ ಬಿಸಿಲು ಲೆಕ್ಕಿಸದೆ ಕೆಂಬಾವುಟ ಹಿಡಿದು ಕಾರ್ಮಿಕರು ನೆರೆಯತೊಡಗಿದರು. ಮಳೆ ಗಾಳಿ ಬಿಸಿಲೆನ್ನದೇ ರಸ್ತೆ ನಿರ್ಮಿಸಿದವರು, ಬಂಗಲೆ ಕಟ್ಟಿದವರು,ಕೆರೆ ಬಾವಿ ಹಳ್ಳ ತೋಡಿದವರು ಇವರೇ ಅಲ್ಲವೇ?. ಪ್ರಶ್ನೆಯನ್ನು ಮಣಿಸಿ ಹೆಗಲಿಗೇರಿಸಿದವರು ಇವರು. ಈ ಬಿಸಿಲು ಅವರಿಗೇನು ಮಾಡಿಯಾತು? ಮೆರವಣಿಗೆ ಹೊರಟಿತು. ಖಡಕ್ ಬಿಸಿಲಲ್ಲಿ ಘೋಷಣೆಗಳ ಕಹಳೆ. ಉರಿವ ಬಿಸಿಲಿಗೂ ಆಳುವ ವರ್ಗಕ್ಕೂ ಸವಾಲಿನಂತೆ ಬಾವುಟಗಳು ಮುಗಿಲಗಲ ಫಡಫಡಿಸುತ್ತಿದ್ದವು. ಮೆರವಣಿಗೆಯುದ್ದಕ್ಕೂ ಹಕ್ಕೊತ್ತಾಯಗಳ ಘೋಷಣೆಗಳು. ಉದ್ಯೋಗ ಖಾತ್ರಿಯ ಕಾರ್ಮಿಕರಿಗೆ 150 ರೂ ವೇತನ ಹೆಚ್ಚಳಕ್ಕಾಗಿ, ಅಂಗನವಾಡಿ ಅಕ್ಕಂದಿರರ ನೌಕರಿಯ ಖಾಯಮಾತ್ತಿಗಾಗಿ ಗ್ರಾಮಪಂಚಾಯತ್ ನೌಕರರ ಬೇಡಿಕೆಗಳಿಗಾಗಿ ಕಟ್ಟಡ ಕಾರ್ಮಿಕರ ಸೌಲಭ್ಯಗಳಿಗಾಗಿ



ಹೀಗೆ ಕಾರ್ಮಿಕರ ಜೀವನದ ಪ್ರಶ್ನೆಗಳು ರಸ್ತೆಯುದ್ದಕ್ಕೂ ಬರವಣಿಗೆ ಮೂಡಿಸುತ್ತಿದ್ದವು. ಜನತೆಯು ತಮ್ಮ ಜೀವನದ ಪ್ರಶ್ನೆಯಿಂದ ವಿಮುಖವಾಗಲೆಂದು ಕೋಮುವಾದಿಗಳು ಹಬ್ಬಿಸುತ್ತಿರುವ ದ್ವೇಷಸಂಸ್ಕೃತಿಯನ್ನು ಖಂಡಿಸಿದರು.ದುಡಿಯುವ ಜನರು ನಾವೆಲ್ಲ ಒಂದೇ ಎಂಬ ಐಕ್ಯ ಮಂತ್ರವನ್ನು ಸಾರಿದರು. ಸಾವಿರಾರು ಜನರು ಧೀಮಂತಿಕೆಯಿಂದ ಹೆಜ್ಜೆ ಹಾಕುತ್ತಿದ್ದರು.

ಜುಟ್ಟಿಗೆ ಮಲ್ಲಿಗೆ

ಜಾಗತಿಕ ಮಟ್ಟದ ಆರ್ಥಿಕ ಬಿಕ್ಕಟ್ಟು ಹುಟ್ಟು ಹಾಕಿದ ಬಂಡವಾಳಶಾಹಿಯು ದುಡಿಯುವ ವರ್ಗದ ನಡುವೆ ಅನೈಕ್ಯತೆ ತರಲು ಎಲ್ಲ ರೀತಿಯ ಷಡ್ಯಂತ್ರವನ್ನು ಹೆಣೆಯುತ್ತಿದೆ. ನವಉದಾರೀಕರಣ ನೀತಿಯ ದುಷ್ಪರಿಣಾಮವೇ ಇಂದಿನ ಆರ್ಥಿಕ ಬಿಕ್ಕಟ್ಟು. ಜಗತ್ತಿನಾದ್ಯಂತ ಕೋಟಿಗಟ್ಟಲೇ ನಿರುದ್ಯೋಗಿಗಳನ್ನು ಸೃಷ್ಟಿಸಲಾಗುತ್ತಿದೆ. ಬಡತನ ಹೆಚ್ಚುತ್ತಿದೆ. ಶೇಕಡ 70 ರಷ್ಟು ಜನತೆಯ ಜೀವನದ ದಿನನಿತ್ಯದ ಆದಾಯವು ಕೇವಲ ರೂ20. ದುಡಿಯುವ ವರ್ಗವನ್ನು ವಿಶ್ವ ಆರ್ಥಿಕ ಬಿಕ್ಕಟ್ಟಿಗೆ ಬಲಿ ಮಾಡಲು ಹೊರಟಿದೆ ಆಳುವ ವರ್ಗ. ಲೇಆಫ್ ರಿಟ್ರೆಂಚ್‌ಮಂಟ್,ವೇತನ ಸ್ಥಂಭನ ಸಾಮಾಜಿಕ ಭದ್ರತಾ ಕ್ರಮಗಳ ಕಡಿತ ಅಥವ ರದ್ದತಿ ಇವೆಲ್ಲವೂ ದುಡಿಯುವ ಜನರನ್ನು ಅಪಾಯದಂಚಿಗೆ ತಳ್ಳುವ ಕ್ರಮಗಳಾಗಿವೆ. ಆದರೆ ಇದೇ ಸಂದರ್ಭದಲ್ಲಿ ಈ ಆರ್ಥಿಕ ಬಿಕ್ಕಟ್ಟಿಗೆ ಕಾರಣರಾದವರನ್ನು ರಕ್ಷಿಸಲು ಸರಕಾರಗಳು ಶ್ರಮಿಸುತ್ತಿವೆಯೇ ಹೊರತು ಜನತೆಯನ್ನು ರಕ್ಷಿಸಲು ಯಾವ ಬದ್ಧತೆಯು ತೋರುತ್ತಿಲ್ಲ, ಈ ಬಾರಿಯ ಲೋಕಸಭಾ ಚುನಾವಣೆ ಯಲ್ಲಿಯು ಸಹ ಇದೇ ನೀತಿ ಢಾಳಾಗಿ ಕಂಡು ಬಂದಿದೆ. ಎಡ ಪಕ್ಷಗಳನ್ನು ಹೊರತು ಪಡಿಸಿದರೆ ಭೂಮಾಲಿಕ ಬಂಡವಾಳಶಾಹಿ ಪಕ್ಷಗಳು ದುಡಿಯುವ ಜನರ ಸಮಸ್ಯೆಯನ್ನು ಕಡೆಗಣಿಸಿವೆ. ಕೋಮುವಾದಿ ಬಿಜೆಪಿಯಂತೂ ಜನತೆ ಹಸಿವಿನಿಂದ ನರಳುವಾಗ ಮೊಬೈಲ್ ಉಚಿತವಾಗಿ ಕೊಡುವುದಾಗಿ ಹೇಳಿ ಬಡತನವನ್ನು ವ್ಯಂಗ್ಯಗೊಳಿಸಿ ಬಡವರನ್ನು ಅಪಮಾನಗೊಳಿಸಿದೆ. ಮಾತ್ರವಲ್ಲ ಕೈಗಾರಿಕೆ ಕೃಷಿ ಬಿಕ್ಕಟ್ಟಿನಲ್ಲಿರುವಾಗ ನಿರುದ್ಯೋಗ ಬಡತನ ತಾರಕಕ್ಕೇರಿರುವಾಗ ಅದರ ಚುನಾವಣೆಯ ಅಜೆಂಡಾ ಹಿಂದುತ್ವವಾಗಿತ್ತು. ರಾಮನ ಮಂದಿರದ ನಿರ್ಮಾಣ ತಮ್ಮ ಗುರಿಯೆಂದು ಮತ್ತೆ ಸಾರಿತು. ದೇಶವನ್ನು ಧರ್ಮದ ಹೆಸರಿನಲ್ಲಿ ವಿಭಜನಗೊಳಿಸುವ ದೇಶದ್ರೋಹಿ ಗುಣವನ್ನು ಮತ್ತೆ ಜಾಹಿರುಗೊಳಿಸಿತು. ಇನ್ನು ಕಾಂಗ್ರೆಸ್ ಸಹ ಮೇಲ್ಪದರಿನಲ್ಲಿ ಜನರ ಕಷ್ಟಗಳ ಬಗ್ಗೆ ಕಣ್ಣೀರು ಹರಿಸಿದ ನಾಟಕವಾಡಿತಷ್ಟೆ. ನಿಜಾರ್ಥದಲ್ಲಿ ಮನಮೋಹನಸಿಂಗ್ ಅವರ ನವಉದಾರವಾದಿ ನೀತಿಯೇ ಇಂದಿನ ಈ ಸಂಕಟಗಳ ಕಾರಣ. ಜಗತ್ತಿನ ಮೂರನೆ ದೇಶಗಳನ್ನು ನುಂಗಿ ನೊಣೆಯುವ ಹುನ್ನಾರು ಹೊಂದಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಅಣು ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ ದೇಶದ ಸಾರ್ವಭೌಮತೆಗೆ ಧಕ್ಕೆ ತಂದಿದೆ. ಭೂಮಾಲಿಕ ಬಂಡವಾಳಶಾಹಿ ಪಕ್ಷಗಳನ್ನೇ ಜನತೆ ಆರಿಸಿ ಕಳಿಸಿದರೆ ಕೊಲುವವನ ಕೈಗೆ ಚೂರಿ ಕೊಟ್ಟಂತೆ. ಆದ್ದರಿಂದ ದುಡಿಯುವ ವರ್ಗದ ರಕ್ಷಣೆಗೆ ಸಂಘಟಿತ ಹೋರಾಟ ಒಂದೇ ದಾರಿ ಇದೆ. ಉಳ್ಳವರ ಪರ ಇರುವ ಪ್ರಭುತ್ವವನ್ನು ಬದಲಾಯಿಸಿ. ದುಡಿಯುವ ಜನತೆಯ ಹಿತದ ಸರಕಾರದ ಜರೂರಿ ಇದೆ ಎನ್ನುವುದನ್ನು ಬಹುಸಂಖ್ಯಾತರಾಗಿರುವ ಶ್ರಮಜೀವಿಗಳು



ಅರಿಯಬೇಕಿದೆ. ಮೇ ದಿನಾಚರಣೆಯು ನಿರಂತರ ಹೋರಾಟದ ಸ್ಫೂರ್ತಿಯ ಸಂಕೇತವಾಗಿದೆ. ರಕ್ತದಲ್ಲಿದ ಶ್ರಮಿಕರ ತ್ಯಾಗ ಬಲಿದಾನದ ಗಾಥೆ ಸಾರುವ ಬಾವುಟವಿದು. ಶ್ರಮಿಕರು ಸಂಘಟಿತರಾಗಿ ಹೋರಾಟಕ್ಕಿಳಿದರೆ ಕಳೆದುಕೊಳ್ಳುವುದು ಗುಲಾಮಗಿರಿಯ ಸಂಕೋಲೆಗಳನ್ನು. ಗೆಲ್ಲಲಿಕ್ಕಿರುವುದು ಇಡೀ ಜಗತ್ತನ್ನೇ.

ಈ ಮಾತುಗಳನಾಡಿರುವುದು ವೇದಿಕೆ ಮೇಲಿರುವ ಅತಿಥಿ ಸಂಗಾತಿ ಜಿ ವಿ ಶ್ರೀರಾಮರೆಡ್ಡಿ ನೀಲಾ.ಕೆ ಮತ್ತು ಮೀನಾಕ್ಷಿ ಬಾಳಿ. ವೇದಿಕೆಯ ಮೇಲೆ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಮುಖಂಡರಾದ ಕಾ. ಶ್ರೀದೇವಿ ಚಿವುಡೆ,ಗ್ರಾಮ ಪಂಚಾಯತ್ ನೌಕರರ ಸಂಘದ ಮುಖಂಡರಾದ ಕಾ.ವಿಜಯಕುಮಾರ ಜಾಂಗಲೇರಾ, ಕಟ್ಟಡ ಕಾರ್ಮಿಕ ಸಂಘದ ಮುಖಂಡರಾದ ಕಾ.ವೀರಶೆಟ್ಟಿ ವಟ್ಟಾಂಬೆ, ಕಾ.ಶಿವರಾಜ ಪಾಟಿಲ ವಿಮಾ ನೌಕರರ ಸಂಘದ ಮುಖಂಡರಾದ ಕಾ.ಬಸವರಾಜ ಮಾಳಗೆ ಬಿಜಿವಿಎಸ್‌ನ ಕಾ.ಎಂ ಎಸ್ ಮನೋಹರ ಕೃಷಿಕೂಲಿಕಾರ ಸಂಘದ ಮುಖಂಡರಾದ ಕಾ.ಇಸಾಮೊದ್ದಿನ್ ಕಾ.ದೇವಾನಂದ ಜನವಾದಿ ಮಹಿಳಾ ಸಂಘಟನೆಯ ಮೀನಾಕುಮಾರಿ, ಕಾ.ಬಾಬು ದಾನಿ ಸಮುದಾಯ ಸಂಘಟನೆಯ ಗೌರವಾಧ್ಯಕ್ಷರಾದ ಶಂಭುಲಿಂಗ ವಾಲದೊಡ್ಡಿ ಎಸ್‌ಎಫ್‌ಐನ ಕಾ.ವಿಜಯಕುಮಾರ ಸೋನಾರೆ, ನೌಕರರ ಒಕ್ಕೂಟದ ಜಿಲ್ಲಾ ಮುಖಂಡರಾದ ಕಾ.ಕಪಲಾಪುರ,ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಮುಖಂಡರಾದ ಕಾ.ಸಂಗಶೆಟ್ಟಿ ಪಾಟೀಲ ಅವರು. ಆರಂಭದಲ್ಲಿ ಪ್ರಸ್ತಾವನೆ ಮಾತನಾಡಿದರು. ಸಮುದಾಯದ ಸಂಗಾತಿಗಳಾದ ಯೇಸುದಾಸ್ ಯಶವಂತ ಎಸ್‌ಪಿ ಮುಂತಾದವರು ಶಂಭುಲಿಂಗ ಅವರ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಭಗತ್‌ಸಿಂಗ್ ಟ್ರಸ್ಟಿಗೆ ಎರಡು ಎಕರೆ ಭೂಮಿಯನ್ನು ದೇಣಿಗೆಯಾಗಿ ಕೊಟ್ಟ ಕ್ರಾಂತಿಯ ನಡೆಗೆ ಚೈತನ್ಯದ ಪರಂಪರೆ ಮುನ್ನಡೆಸಿದ ಸಂಗಾತಿ ಗುರಲಿಂಗಪ್ಪ ಅವರನ್ನು ಮತ್ತು ಒಂದು ನಿವೇಶನವನ್ನು ಕೊಟ್ಟ ಕಾ.ಶಿವರಾಜ ಪಾಟಿಲ ಅವರನ್ನು ಹಾರ್ದಿಕವಾಗಿ ಸನ್ಮಾನಿಸಲಾಯಿತು.

ಎರಡು ವರ್ಷದಿಂದ ಪಾವತಿಯಾಗದ ವೇತನಕ್ಕಾಗಿ ಹೋರಾಟ ರೂಪಿಸಲು ಗ್ರಾಮಪಂಚಾಯತ್ ನೌಕರರು ಮುಂದಾದರು. ಉದ್ಯೋಗ ಖಾತ್ರಿ ಕಾಯ್ದೆಯ ಜಾರಿಗಾಗಿ ಹೋರಾಟ ಕಟ್ಟಲು ಗ್ರಾಮದ ಶ್ರಮಿಕರು ತೀರ್ಮಾನಿಸಿದರು. ಇದೇ 11 ಮೇ ರಂದು ಜಿಲ್ಲಾ ಪಂಚಾಯತ್ ಮುತ್ತಿಗೆ ತಯಾರಿ ನಡೆಸಲು ಯೋಜನೆ ಮಾಡಿದರು. ಕಟ್ಟಡ ಕಾರ್ಮಿಕರು ಸಂಘಟನೆಯನ್ನು ಗಟ್ಟಿಗೊಳಿಸಲು ಚಿಂತನೆಗಿಳಿದರು.

ಹೀಗೆ ಮೇ ದಿನಾಚರಣೆ ಎಂಬುದು ಬೀದರ ಜಿಲ್ಲೆಯ ಶ್ರಮಿಕರಿಗೆ ಹೋರಾಟದ ಸಂಘರ್ಷದ ಸ್ಫೂರ್ತಿಯ ದಿನವಾಗಿ ಬಂದಿತು. ಮೊಟ್ಟ ಮೊದಲ ಬಾರಿಗೆ ಜಿಲ್ಲೆಯ ನಾನಾ ಮೂಲೆಗಳಿಂದ ಬಂದ ಕಾರ್ಮಿಕರು ಕನಿಷ್ಠ ಎರಡು ಸಾವಿರದಷ್ಟು ಸೇರಿದ್ದರು. ಬೀದರ ನಗರದ ಜನತೆ ಹೀಗೆ ಏಕಾಏಕಿ ಹರಿದು ಬಂದ ಕೆಂಪು ಜನಪ್ರವಾಹವನ್ನು ಕಂಡು ಬೆರಗಾಗಿದ್ದೂ ಖರೆ. ಮೆರವಣಿಗೆ ಕಾರ್ಯಕ್ರಮವೆಲ್ಲವೂ ಶ್ರಮಸಂಸ್ಕೃತಿ ಮತ್ತು ಹೋರಾಟದ ಪರಂಪರೆಗೆ ಸಾಕ್ಷಿಯಾಯಿತು.

'ನಾವು ಬೆವರನು ಸುರಿಸಿ ದುಡಿಯುವ ಜನ ನಮ ಬೆವರಿನ ಪಾಲನು ಕೇಳುವೆವು. ತುಂಡು ಭೂಮಿಯಲ್ಲ ಒಂದು ದೇಶವಲ್ಲ ಇಡೀ ಭೂಗೋಳವನೇ ಕೇಳುವೆವು' ಹಾಡು ಇಡೀ ಸಭಾಗೃಹವನ್ನು ಆವರಿಸಿಕೊಂಡಿತು.

ಕಾಂ. ಎಸ್.ವೈ. ಗುರುಶಾಂತ್ ಹೃದಯ ಶಸ್ತ್ರಚಿಕಿತ್ಸಾ ನಿಧಿ

ಕಾಂ. ಎಸ್.ವೈ.ಗುರುಶಾಂತ್‌ರವರ ಹೃದಯ ಶಸ್ತ್ರಚಿಕಿತ್ಸೆಗೆ ಉದಾರವಾಗಿ ನೆರವು ನೀಡುತ್ತಿರುವ ಸಂಗಾತಿಗಳು, ಹಿತೈಷಿಗಳಿಗೆ ಧನ್ಯವಾದಗಳು. ಮೇ 8, 2009 ರವರೆಗೆ ಈ ನಿಧಿಗೆ 2,93,350 ರೂ.ಗಳ ನೆರವು ಬಂದಿದೆ. ಈಗಾಗಲೇ ತಿಳಿಸಲಾದಂತೆ ಒಟ್ಟು ವೆಚ್ಚ ಸುಮಾರು 4.5 ಲಕ್ಷ ದಾಟುವ ಸಂಭವವಿದೆ. ನೆರವು ಮುಂದುವರಿಯುತ್ತದೆ ಎಂಬ ನಿರೀಕ್ಷೆ ನಮ್ಮದು.

ಡಿಡಿ ಅಥವಾ ಚೆಕ್ಕುಗಳನ್ನು 'ಸಿಪಿಐ(ಎಂ) ರಾಜ್ಯ ಸಮಿತಿ' ಹೆಸರಿಗೆ ನೀಡಲು ವಿನಂತಿ.

-ವಿ.ಜೆ.ಕೆ.ನಾಯರ್
ಕಾರ್ಯದರ್ಶಿ, ಸಿಪಿಐ(ಎಂ)

ಸಂಪಾದಕೀಯ

ಕುಡಿಯುವ ನೀರಿನ ಪೂರೈಕೆಗೆ ಸರ್ಕಾರ ಗಮನ ನೀಡಲಿ

ರಾಜ್ಯದ ನಾಲ್ಕು ಜಿಲ್ಲೆಗಳ 64 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಕಂದಾಯ ಇಲಾಖೆಯ ಮೂಲಗಳು ತಿಳಿಸಿವೆ. ಕೋಲಾರ ಜಿಲ್ಲೆಯ 25, ವಿಜಾಪುರ ಜಿಲ್ಲೆಯ 35, ಗುಲ್ಬರ್ಗಾ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಯ ತಲಾ 2 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದರಿಂದ ಸದ್ಯ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ ಎನ್ನಲಾಗಿದೆ.

ಕಂದಾಯ ಇಲಾಖೆಯ ಈ ಮಾಹಿತಿಗಳು ತೀರಾ ಅಸಮರ್ಪಕವಾಗಿವೆ. ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಅಂತರ್ಜಲ ಕುಸಿತದಿಂದಾಗಿ ಕುಡಿಯುವ ನೀರಿನ ಕೊರತೆ ಗಂಭೀರವಾಗಿದೆ. ಮಹಿಳೆಯರು ದೂರ ದೂರದಿಂದ ಕುಡಿಯುವ ನೀರನ್ನು ಹೊತ್ತುತರುವ ದೃಶ್ಯ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಬಿಟ್ಟಿದೆ. ಸಕಾಲಕ್ಕೆ ಮಳೆಯಾಗದೆ ಹೋದರೆ ಪರಿಸ್ಥಿತಿ ಇನ್ನೂ ಗಂಭೀರವಾಗಲಿದೆ. ಕುಡಿಯುವ ನೀರಿಗಾಗಿ ಗ್ರಾಮೀಣ ಜನತೆ ದಂಗೆ ಏಳುವಂತಹ ಪರಿಸ್ಥಿತಿ ನಿರ್ಮಾಣವಾದರೆ ಆಶ್ಚರ್ಯವೇನಿಲ್ಲ.

ಸರ್ಕಾರವಾಗಲೀ, ಅಧಿಕಾರಿಗಳೇ ಆಗಲಿ, ಚುನಾವಣಾ ಜ್ವರದಿಂದ ಇನ್ನೂ ಹೊರಬಂದಂತೆ ಕಾಣುತ್ತಿಲ್ಲ. ಕುಡಿಯುವ ನೀರಿನ ಕೊರತೆ ಇರುವ ಗ್ರಾಮಗಳನ್ನು ಸಮರ್ಪಕವಾಗಿ ಗುರುತಿಸುವ ಕೆಲಸ ಕೂಡಲೇ ಆಗಬೇಕು. ಅಂತಹ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರನ್ನು ಒದಗಿಸಲು ಹಣದ ಕೊರತೆ ಅಡ್ಡಿಯಾಗಬಾರದು. ಸರ್ಕಾರ ಈ ಕೆಲಸಕ್ಕೆ ಪ್ರಥಮ ಆದ್ಯತೆ ನೀಡಬೇಕಾಗಿದೆ.

ರಾಜ್ಯದ ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಸನ, ಮಂಡ್ಯ, ರಾಯಚೂರು, ಕೊಪ್ಪಳ, ಬಳ್ಳಾರಿ, ಗುಲ್ಬರ್ಗಾ ಮೊದಲಾದ 15 ಜಿಲ್ಲೆಗಳ ಸುಮಾರು 1370 ಗ್ರಾಮಗಳ ನೀರಿನಲ್ಲಿ ಫ್ಲೋರೈಡ್ ಅಂಶ ಅಧಿಕವಾಗಿದ್ದು ಈ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆಗೆ ಸಚಿವ ಸಂಪುಟದ ಒಪ್ಪಿಗೆ ದೊರಕಿದೆ ಎಂದು ಹೇಳಲಾಗುತ್ತಿದೆ. ವಿಶ್ವಬ್ಯಾಂಕ್ ಮೂಲಕ ಈ ಯೋಜನೆಗಾಗಿ 1500 ಕೋಟಿ ರೂ. ಸಾಲ ಪಡೆಯಲಾಗುತ್ತಿದೆ ಎಂದು ವರದಿಯಾಗಿದೆ. ನದಿ ಮತ್ತು ಕೆರೆಗಳ ನೀರನ್ನು ಶುದ್ಧೀಕರಿಸಿ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆಯಂತೆ. ಜನರ ಒತ್ತಡವಿಲ್ಲದೆ ಸರ್ಕಾರ ಈ ಕೆಲಸಕ್ಕೆ ಆದ್ಯತೆ ನೀಡುವ ಸಾಧ್ಯತೆ ತೀರಾ ಕಡಿಮೆ. ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವುದೇ ಇದಕ್ಕೆ ಪರಿಹಾರವಾಗಬಹುದು.

ದ.ಕ. ಜಿಲ್ಲೆಯ ಮಂಗಳೂರಿನ ಕೆಲವು ಪ್ರದೇಶಗಳ ಕುಡಿಯುವ ನೀರಿನ ಬಾವಿಗಳಲ್ಲಿ ಪೆಟ್ರೋಲಿಯಂ ಅಂಶಗಳು ಕಂಡು ಬಂದಿವೆ ಎಂಬ ದೂರುಗಳಿವೆ. ಎಂಆರ್‌ಪಿಎಲ್ ಕಾರ್ಖಾನೆಯ ತ್ಯಾಜ್ಯ ನೀರು ಭೂಮಿಯೊಳಗೆ ಸೇರಿಕೊಂಡು ಆಸುಪಾಸಿನ ಬಾವಿಗಳಲ್ಲಿ ಸೋರುತ್ತಿದೆ ಎಂದು ಹೇಳಲಾಗುತ್ತಿದೆ. ಜಿಲ್ಲಾಡಳಿತ ಈ ದೂರುಗಳತ್ತ ತುರ್ತು ಗಮನ ಹರಿಸುವುದು ಆಗಬೇಕಾಗಿದೆ.

ಕೋಕಾ ಜಾರಿ ಅಪಾಯಕಾರಿ

ಈ ವಾರ

ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳನ್ನು ತಡೆಗಟ್ಟುವ ಹೆಸರಿನಲ್ಲಿ ಕೋಕಾ ಕಾಯ್ದೆಗೆ ಕೆಲವು ತಿದ್ದುಪಡಿಗಳನ್ನು ಮಾಡಿ, ಸುಗ್ರೀವಾಜ್ಞೆ ಮೂಲಕ ಅದನ್ನು ಜಾರಿಗೆ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ತಿಳಿದುಬಂದಿದೆ. ಮುಖ್ಯಮಂತ್ರಿ ಯಡಿಯೂರಪ್ಪನವರ ಅಧ್ಯಕ್ಷತೆಯಲ್ಲಿ ಮೇ 8 ರಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಯಿತೆಂದು ಸಭೆಯ ನಂತರ ನಡೆಸಲಾದ ಪತ್ರಿಕಾಗೋಷ್ಠಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಭಯೋತ್ಪಾದನಾ ಕೃತ್ಯಗಳು ಹೆಚ್ಚಾಗುತ್ತಿವೆ ಎಂದು ಹೇಳಿಕೊಂಡು ಕೋಕಾ ಜಾರಿಗೊಳಿಸುವುದಾಗಿ ಬಿಜೆಪಿ ಸರ್ಕಾರ ಹಲವು ಬಾರಿ ಪ್ರಸ್ತಾಪಿಸಿತ್ತು. ಅಂತಿಮವಾಗಿ ಬೆಳಗಾವಿಯಲ್ಲಿ ನಡೆಸಲಾದ ವಿಧಾನ ಮಂಡಲದ ಅಧಿವೇಶನದಲ್ಲಿ ಕೋಕಾ ಮಸೂದೆಯನ್ನು ಮಂಡಿಸಲಾಗಿತ್ತು. ಆದರೆ, ಈ ಕಾಯ್ದೆಗೆ ಇನ್ನಷ್ಟು ತಿದ್ದುಪಡಿ ಅಗತ್ಯವಿದೆ ಎಂದುಕೊಂಡು, ಸಚಿವ ಸಂಪುಟದ ಸಭೆಯಲ್ಲಿ ಅದನ್ನು ವಿವರವಾಗಿ ಚರ್ಚಿಸಿ ಅನಂತರ ಮತ್ತೆ ಸದನದಲ್ಲಿ ಮಂಡಿಸಲು ತೀರ್ಮಾನಿಸಲಾಗಿತ್ತು. ಈಗ ಸದನದಲ್ಲಿ ನಡೆಯಬೇಕಾದ ಚರ್ಚೆಯನ್ನು ಬದಿಗೊತ್ತಿ ಅವಸರವಸರದಿಂದ ಕೆಲವು ತಿದ್ದುಪಡಿಗಳೊಂದಿಗೆ ಕೋಕಾ ಜಾರಿಗೊಳಿಸಲು ಮುಂದಾಗಿದೆ.

ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ (ಕೋಕಾ) ಯನ್ನು ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಗಿನ ಕಾನೂನು ಮಂತ್ರಿ ಡಿ.ಬಿ.ಚಂದ್ರೇಗೌಡ ಅವರು ವಿಧಾನಮಂಡಲದಲ್ಲಿ ಮಸೂದೆಯನ್ನು ಮಂಡಿಸಿ ಅಂಗೀಕಾರ ಪಡೆದಿದ್ದರು. ಈ ಕಾಯ್ದೆಗೆ 2001ರಲ್ಲಿ ಅಂದಿನ ರಾಷ್ಟ್ರಪತಿಗಳಿಂದ ಅಂಗೀಕಾರ ದೊರೆತಿತ್ತು. 2002 ರ ಜನವರಿಯಲ್ಲಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಆದರೆ ಈ ಕಾಯ್ದೆಗೆ ನಿಯಮಾವಳಿಗಳನ್ನು ರೂಪಿಸಲು ಸಾಧ್ಯವಾಗದ ಕಾರಣ ಅದು ಜಾರಿಗೊಂಡಿರಲಿಲ್ಲ.



ಮೂಲ ಕಾಯ್ದೆಯಲ್ಲಿ ಭಯೋತ್ಪಾದನಾ ಕೃತ್ಯಗಳು ಸಂಘಟಿತ ಅಪರಾಧದ ವ್ಯಾಪ್ತಿಯಲ್ಲಿ ಬರುತ್ತಿರಲಿಲ್ಲ. ಆರ್ಥಿಕ ಲಾಭದ ಉದ್ದೇಶದಿಂದ ನಡೆಸಲಾಗುವ ಸಂಘಟಿತ ಅಪರಾಧ ಕೃತ್ಯವನ್ನು ಮಾತ್ರ ಕಾಯ್ದೆಯ ವ್ಯಾಪ್ತಿಯಲ್ಲಿ ಸೇರಿಸಲಾಗಿತ್ತು. ಭಯೋತ್ಪಾದನೆಯನ್ನು ಸಂಘಟಿತ ಅಪರಾಧದ ವ್ಯಾಖ್ಯೆಯಡಿ ತರುವ ಉದ್ದೇಶದಿಂದ 5 ತಿದ್ದುಪಡಿಗಳೊಂದಿಗೆ ಸುಗ್ರೀವಾಜ್ಞೆ ಹೊರಡಿಸಲು ಬಿಜೆಪಿ ಸರ್ಕಾರ ತೀರ್ಮಾನಿಸಿದೆ. ಹೊಸದಾಗಿ ಸೇರ್ಪಡೆಯಾಗಲಿರುವ ಅಂಶಗಳು: ಭಯೊತ್ಪಾದನೆಯನ್ನು ಸಂಘಟಿತ ಅಪರಾಧವೆಂದು ಪರಿಗಣಿಸುವುದು, ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾದ ಅಪರಾಧಿಗಳಿಗೆ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆ, ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗಿರುವವನು ಬಂಧನಕ್ಕೆ ಒಳಗಾದ ತಕ್ಷಣ ಆತನ ಆಸ್ತಿ ಮತ್ತು ಆದಾಯ ಮೂಲಗಳಿಗೆ ಮುಟ್ಟುಗೋಲು ಹಾಕಲು ಅವಕಾಶ, ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾದವರಿಗೆ 10 ಲಕ್ಷ ರೂ.ವರೆಗೆ ಮತ್ತು ನೆರವು ನೀಡಿದವರಿಗೆ 1 ರಿಂದ 2 ಲಕ್ಷ ದಂಡ ಹಾಗೂ ಪ್ರಕರಣದ ಕುರಿತು ತನಿಖೆ ನಡೆಸಿ ದೋಷಾರೋಪಣ ಪಟ್ಟಿ ಸಲ್ಲಿಸಲು 180 ದಿನಗಳ ಬದಲಾಗಿ 365 ದಿನಗಳ ಅವಧಿ.

ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾಗುವವರಿಗೆ ಕಠಿಣ ಶಿಕ್ಷೆಯಾಗಬೇಕಾಗಿರುವುದು ಅತ್ಯಗತ್ಯವಾಗಿದೆ. ಭಯೋತ್ಪಾದಕರಿಗೆ ಯಾವುದೇ ರೀತಿಯ ಅನುಕಂಪ ತೋರಿಸುವುದು ಸರಿಯಲ್ಲ. ಆದರೆ ಭಯೋತ್ಪಾದನೆಯನ್ನು ತಡೆಯುವ ಹೆಸರಿನಲ್ಲಿ ತರಲಾಗುತ್ತಿರುವ ಕೋಕಾದಂತಹ ಕರಾಳ ಕಾನೂನುಗಳಿಂದ ಭಯೋತ್ಪಾದನೆ ನಿಲ್ಲುವುದಿಲ್ಲ. ಭಯೋತ್ಪಾದಕರು ಇಂತಹ ಕಾನೂನುಗಳಿಗೆ ಅಂಜುವುದಿಲ್ಲ. ಇನ್ನೊಬ್ಬರನ್ನು ಸಾಯಿಸುವ ಸಲುವಾಗಿ ತಾವು ಸಾವನ್ನಪ್ಪಲು 'ಮಾನವ ಬಾಂಬು'ಗಳಾಗಿ ಧುಮುಕುವ ಈ ಭಯೋತ್ಪಾದಕರು ಕಾನೂನುಗಳಿಗೆ ಅಂಜುವರೇ? ಕೇಂದ್ರದ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ 'ಭಯೋತ್ಪಾದನಾ ಚಟುವಟಿಕೆಗಳ ನಿಯಂತ್ರಣಾ ಕಾಯ್ದೆ (ಪೋಟಾ) ಜಾರಿಯಲ್ಲಿ ಇರುವಾಗಲೇ ಸಂಸತ್ ಭವನದ ಮೇಲೆ, ಅಕ್ಷರಧಾಮ ದೇವಸ್ಥಾನದ ಮೇಲೆ ಮತ್ತು ಇತರ ಕಡೆ ಭಯೋತ್ಪಾದಕರ ದಾಳಿ ನಡೆದಿರಲಿಲ್ಲವೇ? ಇಂತಹ ಕರಾಳ ಕಾನೂನುಗಳಿಂದ ಭಯೋತ್ಪಾದನೆಯನ್ನು ತಡೆಗಟ್ಟಲು ಸಾಧ್ಯವಿಲ್ಲ.

ದೇಶದಲ್ಲಿ ಹಾಗೂ ಇಡೀ ವಿಶ್ವದಲ್ಲಿ ಭಯೋತ್ಪಾದನೆಯನ್ನು ತಡೆಯಲು ಬಯಸುವವರು ಅದರ ಮೂಲಕ್ಕೆ ಹೋಗಬೇಕು. ಯಾವುದೇ ಒಂದು ಸಮುದಾಯ ನಿರಂತರವಾಗಿ ದೌರ್ಜನ್ಯಕ್ಕೆ ಒಳಗಾಗುತ್ತಾ ಬಂದರೆ, ಆ ಸಮುದಾಯದ ನಡುವೆ ಭಯೋತ್ಪಾದಕರು ಹುಟ್ಟಿಕೊಳ್ಳುತ್ತಾರೆ. ಇಂದು ವಿಶ್ವದ ಹಲವು ದೇಶಗಳಲ್ಲಿ ಮುಸ್ಲಿಂ ಸಮುದಾಯದ ಯುವಕರು ಹೆಚ್ಚು ಹೆಚ್ಚಾಗಿ ಭಯೋತ್ಪಾದಕರಾಗುತ್ತಿದ್ದಾರೆ. ಅಫಘಾನಿಸ್ತಾನ, ಪಾಲಸ್ತೈನ್‌ನ, ಇರಾಕ್ ಮೊದಲಾದ ದೇಶಗಳಲ್ಲಿ ಮುಸ್ಲಿಂ ಸಮುದಾಯದವರ ಮೇಲೆ ಅಮೇರಿಕಾ, ಇಸ್ರೇಲ್ ಮತ್ತು ಅವುಗಳ ಮಿತ್ರ ದೇಶಗಳು ನಡೆಸ್ಸಿರುವ ದೌರ್ಜನ್ಯಗಳಿಗಾಗಿ ವಿಶ್ವದೆಲ್ಲೆಡೆ ಆ ಸಮುದಾಯದ ನಡುವೆ ಸೇಡಿನ ಕಿಚ್ಚು ಉರಿಯುವಂತಾಗಿದೆ. ಪ್ರಜಾಪ್ರಭುತ್ವ ಸ್ಥಾಪನೆಯ ಹೆಸರಿನಲ್ಲಿ ನಡೆಸಲಾಗುತ್ತಿರುವ ಈ ಜನಾಂಗೀಯ ಹತ್ಯಾಕಾಂಡವನ್ನು ನಿಲ್ಲಿಸದೆ ಭಯೋತ್ಪಾದನೆಯನ್ನು ನಿಲ್ಲಿಸಲು ಸಾಧ್ಯವಿಲ್ಲ.

ಭಾರತದಲ್ಲೂ ಮುಸ್ಲಿಂ ಭಯೋತ್ಪಾದನೆ ಬೆಳೆಯುತ್ತಿರುವುದಕ್ಕೆ ಹಿಂದೂ ಭಯೋತ್ಪಾದನೆಯೇ ಕಾರಣವಾಗಿದೆ. ಭಯೋತ್ಪಾದಕರಿಗೆ ಯಾವುದೇ ಧರ್ಮ ಇಲ್ಲ ಎಂಬುದು ನಿಜವಾಗಿದ್ದರೂ ಬೇರೆ ಬೇರೆ ಧರ್ಮಗಳ ಅನುಯಾಯಿಗಳ ನಡುವೆ ದ್ವೇಷವನ್ನು ಬೆಳೆಸಲಾಗುತ್ತಿರುವುದರಿಂದ ಭಯೋತ್ಪಾದಕರಿಗೆ ಆಯಾ ಧರ್ಮದ ಲೇಬಲ್ ಅಂಟಿಕೊಳ್ಳದೇ ಇರುವುದಿಲ್ಲ. ಭಾರತದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆಯನ್ನು ತಡೆಗಟ್ಟಬೇಕಾದರೆ ಎಲ್ಲ ವಿಧದ ಕೋಮುವಾದವನ್ನು ಮೊದಲು ತಡೆಗಟ್ಟಬೇಕು. ಕೋಮು ಹಿಂಸಾಚಾರದ ವಿರುದ್ಧ ವ್ಯಾಪಕವಾದ ಕಾನೂನನ್ನು ಜಾರಿಗೆ ತಂದು ಕೋಮು ಹಿಂಸಾಚಾರದ ಪಾತಕಿಗಳಿಗೆ ಕಠಿಣ ಶಿಕ್ಷೆ ನೀಡುವುದು ಮೊದಲು ಆಗಬೇಕು. ಕೋಮುಗಲಭೆಗಳ ಸಂತ್ರಸ್ತರಿಗೆ ಶೀಘ್ರ ನ್ಯಾಯ ಮತ್ತು ತೃಪ್ತಿಕರ ಪರಿಹಾರ ಸಿಗುವಂತಾಗಬೇಕು. ಕೋಮು ದ್ವೇಷವನ್ನು ಹರಡುವ ವ್ಯಕ್ತಿಗಳ ಹಾಗೂ ಸಂಘ ಸಂಸ್ಥೆಗಳ ವಿರುದ್ಧ ಕಾನೂನು ನಿಯಂತ್ರಣಗಳನ್ನು ಹೇರುವುದು ಆಗಬೇಕು. ಆಗ ಮಾತ್ರ ಭಯೋತ್ಪಾದನೆಯನ್ನು ತಡೆಗಟ್ಟಬಹುದು.

ಯಡಿಯೂರಪ್ಪನವರು ಜಾರಿಗೆ ತರಲು ಹೊರಟಿರುವ ಕೋಕಾ ಕಾಯ್ದೆಯಲ್ಲಿ ಅನೇಕ ಕರಾಳ ಅಂಶಗಳಿವೆ. ದೋಷಾರೋಪಣಾ ಪಟ್ಟಿ ಸಲ್ಲಿಸಲು ಅವಧಿಯಲ್ಲಿ 180 ದಿನಗಳಿಂದ 365 ದಿನಗಳಿಗೆ ವಿಸ್ತರಿಸಿರುವುದು ಅಮಾಯಕರನ್ನು ಬಂಧಿಸಿ, ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿ ವರ್ಷಗಟ್ಟಲೆ ಅವರು ಜೈಲಿನಲ್ಲಿ ಕೊಳೆಯುವಂತೆ ಮಾಡಲು ಪೋಲೀಸರಿಗೆ ಮತ್ತು ಪೋಲೀಸರ ಮೂಲಕ ಸರ್ಕಾರಕ್ಕೆ ಅವಕಾಶ ಒದಗಿಸಲಿದೆ. ಈಗಾಗಲೇ ರಾಜ್ಯದಲ್ಲಿ ಪೋಲೀಸರೇ ಕೊಲೆಗಡುಕರಾಗುತ್ತಿದ್ದಾರೆ. ಎನ್‌ಕೌಂಟರ್ ಹೆಸರಿನಲ್ಲಿ ತಮಗಾಗದವರನ್ನು ಸಾಯಿಸುತ್ತಾರೆ. ಕಾನೂನನ್ನು ಕೈಯಲ್ಲಿ ತೆಗೆದುಕೊಂಡು ಆರೋಪಿಗಳ ಬಾಯಿ ಬಿಡಿಸುವ ಹೆಸರಿನಲ್ಲಿ ಲಾಕ್‌ಅಪ್‌ನಲ್ಲಿ ಹೊಡೆದು ಜೀವ ತೆಗೆಯುತ್ತಾರೆ. ದೂರು ನೀಡಲು ಹೋದ ಅಮಾಯಕರ ಮೇಲೆ ಹಲ್ಲೆ ಮಾಡಿ ಅವರ ವಿರುದ್ಧವೇ ಪ್ರಕರಣ ದಾಖಲು ಮಾಡುತ್ತಾರೆ. ಅಂತವರ ಕೈಯಲ್ಲಿ ಈ ಕರಾಳ ಕಾಯ್ದೆ ಸಿಕ್ಕರೆ ಸರ್ಕಾರ ಪ್ರಾಯೋಜಿತ ಭಯೋತ್ಪಾದನೆಗೆ ಕುಮ್ಮಕ್ಕು ಸಿಕ್ಕಂತೆ ಆಗಲಿಕ್ಕಿಲ್ಲವೇ?

ಕಾಯ್ದೆಯ ದುರುಪಯೋಗ ತಡೆಯಲಿಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂಬ ಪ್ರಶ್ನೆಗೆ 'ಸಂಪುಟ ಸಭೆಯಲ್ಲಿ ಆ ವಿಚಾರ ಚರ್ಚೆಗೆ ಬರಲಿಲ್ಲ' ಎಂದು ಸಚಿವೆ ಶೋಭಾ ಕರಂದ್ಲಾಜೆ ಉತ್ತರಿಸಿದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಸರ್ಕಾರಕ್ಕೆ ಈ ಕಾಯ್ದೆಯ ದುರುಪಯೋಗ ಆಗುವುದನ್ನು ತಡೆಗಟ್ಟಬೇಕೆನ್ನುವ ಬಗ್ಗೆ ಯಾವುದೇ ಕಾಳಜಿ ಇದ್ದಂತಿಲ್ಲ ಎಂಬುದೇ ಆತಂಕದ ವಿಷಯವಾಗಿದೆ. ಚುನಾವಣೆಯ ಫಲಿತಾಂಶದ ನಂತರ ಯಾರ ಮೇಲೆ ಈ ಪೂರ್ವಾಗ್ರಹ ಪೀಡಿತ ಬಿಜೆಪಿ ಸರ್ಕಾರ ಸೇಡು ತೀರಿಸಿಕೊಳ್ಳಲು ಹೊರಟಿದೆ? ❍

ಮೇ ದಿನ : ಕುಂದಾಪುರದಲ್ಲಿ ಬೃಹತ್ ಮೆರವಣಿಗೆ - ಸಾರ್ವಜನಿಕ ಸಭೆ

ಮೇ 1 2009 ರಂದು ಸಿಐಟಿಯು ಸಂಘಗಳ ನೇತೃತ್ವದಲ್ಲಿ ಮೇ ದಿನಾಚರಣೆಯ ಅಂಗವಾಗಿ ವರ್ಣರಂಜಿತ ಬೃಹತ್ ಮೆರವಣಿಗೆ ಮಧ್ಯಾಹ್ನ 3 ಗಂಟೆಗೆ ಸರಿಯಾಗಿ ಕುಂದಾಪುರ ಶಾಸ್ತ್ರಿ ಸರ್ಕಲಿನಿಂದ ಹೊರಟು, ಪೇಟೆಯ ಒಂದು ಸುತ್ತು ಹೋಗಿ ಗಾಂಧಿ ಮೈದಾನದಲ್ಲಿ ಸಭಾ ಸ್ಥಳಕ್ಕೆ ತಲುಪಿತು. ಇನ್ನೊಂದು ಬೃಹತ್ ಮೆರವಣಿಗೆ ತಲ್ಲೂರಿನಿಂದ ಹೊರಟು ಒಂದು ಸಭಾ ಸ್ಥಳಕ್ಕೆ ತಲುಪಿತು. ಮೆರವಣಿಗೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಂಚು ಕಾರ್ಮಿಕರು, ಬೀಡಿ, ಕಟ್ಟಡ ನಿರ್ಮಾಣ ಕಾರ್ಮಿಕರು, ಯುವಕರು, ಕೃಷಿ ಕೂಲಿಕಾರರು ಭಾಗವಹಿಸಿದ್ದರು.



ಸಭೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಕಾಮ್ರೇಡ್ ನಿತ್ಯಾನಂದ ಸ್ವಾಮಿಯವರು ಮಾತನಾಡಿ, ಮೇ ದಿನದ ಮಹತ್ವ ಮತ್ತು ಕಾರ್ಮಿಕ ವರ್ಗದ ಕರ್ತವ್ಯವನ್ನು ವಿವರಿಸಿದರು. ಕಾರ್ಮಿಕ ವರ್ಗ ಅಂದರೆ ವಿಶ್ವದ ದೊಡ್ಡ ಕುಟುಂಬ. ಜಾತಿ, ಮತ, ಧರ್ಮ ಅಡ್ಡಿ ಬಾರದಂತೆ ನಮ್ಮಲ್ಲಿ ಒಗ್ಗಟ್ಟು ಮತ್ತು ಜಾಗತಿಕ ಐಕ್ಯತೆಯನ್ನು ಬಲಗೊಳಿಸಬೇಕು. ಎಂಟು ಗಂಟೆಗಳ ಕೆಲಸಕ್ಕಾಗಿ ಹೋರಾಟ ನಡೆದಿದೆ. 123 ವರ್ಷಗಳ ನಂತರವೂ ಬಹಳಷ್ಟು ಕಾರ್ಮಿಕರು 8 ಗಂಟೆಗಿಂತ ಹೆಚ್ಚು ದುಡಿಯುವ ಸ್ಥಿತಿಯಿದೆ. ದುಡಿಯುವ ಅವಧಿಯನ್ನು ಹೆಚ್ಚು ಮಾಡುವ ಯೋಚನೆಯಲ್ಲಿ ಬಂಡವಾಳಗಾರರು ಹಾಗೂ ಅವರ ಸರಕಾರವು ಇವೆ. ದುಡಿಯುವ ಜನರು ಸಂಘಟನೆ ಮತ್ತು ಹೋರಾಟವನ್ನು ಬೆಳೆಸಿದರೆ ಮಾತ್ರ ಸಿಗುವ ಸವಲತ್ತನ್ನು ಉಳಿಸಿಕೊಂಡು, ಹೊಸ ಸವಲತ್ತನ್ನು ಪಡೆಯಲು ಸಾಧ್ಯ. ನಮ್ಮ ವೈರಿಗಳು ಯಾರು ಎಂಬುದನ್ನು ತಿಳಿದುಕೊಳ್ಳುವುದು ತೀರಾ ಅವಶ್ಯ, ಯಾವುದೇ ಸಂದರ್ಭದಲ್ಲಿ ನಮ್ಮ ವೈರಿಗಳನ್ನು ಬೆಂಬಲಿಸಬಾರದು. ವೈರಿಗಳನ್ನು ಬೆಂಬಲಿಸಿದರೆ ನಮ್ಮದೇ ಆದ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ಸಾಧ್ಯವಾಗದು. ಶೋಷಣೆಯಿಂದ ಮುಕ್ತವಾದ ಒಂದು ಸಮಾಜವನ್ನು ತರುವ ಗುರಿಸಾಧನೆಗೆ ನಮ್ಮನ್ನು ಸಮರ್ಪಿಸಿಕೊಳ್ಳುವ ಎಂದು ವಿವರಿಸಿದರು.



ಸಿಐಟಿಯು ರಾಜ್ಯ ಮುಖಂಡರಾದ ಬಾಲಕೃಷ್ಣ ಶೆಟ್ಟಿಯವರು ಸಭೆಯನ್ನುದ್ದೇಶಿಸಿ ಮಾತನಾಡಿ, ಜಗತ್ತಿನಾದ್ಯಂತ ಜನರು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಭಾರತ ದೇಶದಲ್ಲಿ ಕೂಡಾ ಎಲ್ಲಾ ವಿಭಾಗದ ಜನರು ಸಮಸ್ಯೆ ಗಳ ಪರಿಹಾರಕ್ಕಾಗಿ ಸಂಘಟಿತ ಹೋರಾಟ ನಡೆಸು ತ್ತಿದ್ದು ಮುಂದಕ್ಕೆ ಅದನ್ನು ತೀವ್ರಗೊಳಿಸಬೇಕೆಂದರು.

ಸಿಐಟಿಯು ವಿನ ಜಿಲ್ಲಾ ಅಧ್ಯಕ್ಷರಾದ ಕೆ.ಶಂಕರ್‌ರವರು ಮಾತನಾಡಿ ರಾಜ್ಯವ್ಯಾಪಿ ಕಾರ್ಮಿಕರು ಕನಿಷ್ಟ ಕೂಲಿ ಹೆಚ್ಚಳಕ್ಕೆ ಹಾಗೂ ಇತರ ಬೇಡಿಕೆಗಳಿಗಾಗಿ ಸಂಘಟನೆಯನ್ನು ಬೆಳೆಸಲು, ನಿರ್ಣಾಯಕ ಹೋರಾಟಕ್ಕೆ ಸಿದ್ಧತೆ ಮಾಡಬೇಕೆಂದು ವಿವರಿಸಿದರು.

ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ ಅಧ್ಯಕ್ಷರು ಹಾಗೂ ಮಾಜಿ ಪುರಸಭಾ ಅಧ್ಯಕ್ಷರಾದ ವಿ.ನರಸಿಂಹ ನವರು ಸಾರ್ವಜನಿಕ ಸಭೆಯ ಅ[ಧ್ಯಕ್ಷತೆ] ವಹಿಸಿದರು. ಆರಂಭದಲ್ಲಿ ಸಿಐಟಿಯು ಮು[ಖಂಡ]ರಾದ ಮಹಾಬಲ ವಡೇರಹೋಬಳಿ ಯ[ವರು] ಸ್ವಾಗತಿಸಿ ಮೇ ದಿನದ ಮಹತ್ವವನ್ನು ಹೇಳಿ[ದರು]. ಎಚ್.ನರಸಿಂಹನವರು ಎಲ್ಲರಿಗೂ ಧನ್ಯ[ವಾದ] ಅರ್ಪಿಸಿದರು.

● ಕೆ.ಶ

ಗದಗ್ : ವಿಶ್ವ ಕಾರ್ಮಿಕ ದಿನಾಚರಣೆ

ಉದಾರೀಕರಣ ನೀತಿ ರದ್ದಾಗ

- ಬಿ.ಎಸ್. ಸೊಪ್ಪಿ

ಗದಗ ಜಿಲ್ಲೆಯ ಲಕ್ಷೇಶ್ವರದಲ್ಲಿ ಪ್ರಥಮ ಬಾರಿಗೆ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಎ.ಪಿ.ಎಂ.ಸಿ ಹಮಾಲರ ಸಂಘ, ಅಕ್ಷರದಾಸೋಹ ನೌಕರರ ಸಂಘ, ಕಟ್ಟಡ ಕಾರ್ಮಿಕರ ಸಂಘದ ಆಶ್ರಯದಲ್ಲಿ ಜಂಟಿಯಾಗಿ ಎ.ಪಿ.ಎಂ.ಸಿ ಸಭಾ ಭವನದಲ್ಲಿ ಆಚರಿಸಲಾಯಿತು. ಈ ಸಂದರ್ಭಧಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕರಾದ ಬಿ.ಎಸ್.ಸೊಪ್ಪಿನ ಮಾತನಾಡಿ ಮೇ 1 ವಿಶ್ವಕಾರ್ಮಿಕ ದಿನಾಚರಣೆಯ ಐತಿಹಾಸಿಕ ಹಿನ್ನೆಲೆಯನ್ನು ವಿವರಿಸಿ, ಅದರ ಮಹತ್ವವನ್ನು ತಿಳಿಸಿದರು. "90ರ ದಶಕದಿಂದ" ಆಡಳಿತ ನಡೆಸಿದ ಸರಕಾರಗಳು ಅನುಸರಿಸಿದ ಉದಾರವಾದಿ ಉಳ್ಳವರ ಪರವಾದ ಆರ್ಥಿಕ ನೀತಿಯನ್ನು ಅನುಸರಿಸುತ್ತಾ ಬಂದಿದ್ದು, ಸಣ್ಣ ಮತ್ತು ಮಧ್ಯಮ ತರಗತಿಯ ಕೈಗಾರಿಕೆಗಳಿಗೆ ನೀಡುತ್ತಿದ್ದ ಪ್ರೋತ್ಸಾಹವನ್ನು ನಿಲ್ಲಿಸಿದ್ದರಿಂದಾಗಿ ಬೃಹತ್ ಸಂಖ್ಯೆಯ ಕೈಗಾರಿಕೆಗಳು ಮುಚ್ಚಿಹೋಗಿವೆ. ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಹೀಗಾಗಿ ಇಂದು ಅಸಂಘಟಿತ ಕಾರ್ಮಿಕ ವಲಯ ವಿಸ್ತರಿಸುತ್ತಾ ನಡೆದಿದೆ. ಅಸಂಘಟಿತ ಕಾರ್ಮಿಕರಿಗೆ ಕೆಲಸದ ಭದ್ರತೆ ಇಲ್ಲ, ನೆಮ್ಮದಿಯ ಬದುಕಿಗಾಗಿ ಸೌಲತ್ತುಗಳು ಇಲ್ಲ. ಅವರ ಪ್ರಮುಖ ಬೇಡಿಕೆಯಾದ "ಕಲ್ಯಾಣ ಮಂಡಳಿ ರಚನೆ ಇನ್ನೂ ಕನಸಾಗಿ ಉಳಿದಿದೆ" ಹಮಾಲ ಕಾರ್ಮಿಕರೆ ಇರಲಿ, ಬಿಸಿಯೂಟ ಕಾರ್ಮಿಕರೆ ಇರಲಿ ಒಂದು ಸಂಘಟಿತ ಶಕ್ತಿಯಾಗಿ ಹೋ[ರಾಟ] ಮಾಡಿದಾಗ ಬೇಡಿಕೆ ಈಡೇರಲು ಸಾಧ್ಯವೆಂ[ದರು]. ಇಲ್ಲಿಯವರೆಗೆ ಆಳಿದ ಯು.ಪಿ.ಎ ಹ[ಾಗೂ] ಎನ್.ಡಿ.ಎ. ನೇತೃತ್ವದ ಸರ್ಕಾರಗಳು ಒ[ಂದೇ] ರೀತಿಯ ಆರ್ಥಿಕ ನೀತಿಯನ್ನು ಅನುಸರಿಸಿಕೊ[ಂಡು] ಬಂದಿವೆ ಎಂಬುದಕ್ಕೆ ಎ.ಪಿ.ಎಂ.ಸಿ ತಿದ್ದುಪ[ಡಿ] 2003 ಖಾಸಗೀಕರಣ ಇತ್ಯಾದಿಗ[ಳನ್ನು] ನೋಡಬಹುದು ಎಂದರು.

ಬಿಸಿಯೂಟ ಸಂಘಟನೆಯ ತಾಲ[ೂಕು] ಕಾರ್ಯದರ್ಶಿ ನಾಗರತ್ನ ಚಕ್ರಸಾಲಿ, ಅ[...] ಹೀರೇಮಠ, ಕಟ್ಟಡ ಕಾರ್ಮಿಕ ಸಂಘಟ[ನೆಯ] ಶೇಖಪ್ಪ ಟಿ.ನಾಯ್ಕ ಮಾತನಾಡಿದರು. ವೇದಿ[ಕೆ] ಮೇಲೆ ಅಮರಪ್ಪ ಗುಡಗಂಟಿ, ಹನುಮಪ್ಪ ಶಿರಸ[ೂರಿ], ಹೊನಕೇರಪ್ಪ, ಶಿರಸೂರಿ, ಅಕ್ಕಮಹಾ[...] ಹಿರೇಮಠ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆ[ಯನ್ನು] ಗೋವಿಂದಪ್ಪ ಶಿರಸೂರಿ ವಹಿಸಿದ್ದರು, ಸಮಾರೋ[ಪ] ಭಾಷಣ ಮಾಡುತ್ತಾ ನಾವೆಲ್ಲ ಒಟ್ಟಾಗಿ ಸಂಘ[ಟಿತ] ಹೋರಾಟ ಮಾಡಬೇಕೆಂದು ತಿಳಿಸಿದರು. ಕಾ[...] ಮುಖಂಡರಾದ ವಿಠ್ಠಲ ನಾಯಕ, ಪ್ರಾಸ್ತಾವಿಕ[ವಾಗಿ] ಮಾತನಾಡಿ ಎಲ್ಲರನ್ನು ಸ್ವಾಗತಿಸಿದರು, ಕೊನೆ[ಯಲ್ಲಿ] ಮಲ್ಲಪ್ಪ ಗದ್ದಿ ವಂದನಾರ್ಪಣೆ ಮಾಡಿದರು.

'ಬಾಕಿ ಹಣ' ಕೇಳಿದರೆ ಬಡಿತ : ಇದು ಬಿಜೆಪಿ ಸಂಸ್ಕೃತಿ

ಸಂಸ್ಕೃತಿಯ ಗುತ್ತಿಗೆಯ ರಕ್ಷಕರು ಬಾರಿ ದೇಶ ಪ್ರೇಮಿ ನಾವು ಎಂದು ಬಾಯಿ ಬಡಿದುಕೊಳ್ಳುವ ಸಂಘ್ ಪರಿವಾರ ಬಿಜೆಪಿಯ ಈ ಚುನಾವಣೆಯಲ್ಲಿ ಪ್ರಚಾರ ಕಾರ್ಯಕ್ಕೆ ಬಳಸಿಕೊಂಡು ನಂತರ ಹಣ ಕೇಳಿದ ಸಾಮಾನ್ಯ ಮಹಿಳೆಯ ಜೊತೆ ನಡೆದು ಕೊಂಡ ರೀತಿ ಎಲ್ಲರೂ ತಲೆ ತಗ್ಗಿಸುವಂತಹದ್ದು.

ಎಂ.ವಿ.ಭಾಗ್ಯ ಎಂಬುವವರು ಬೆಂಗಳೂರಿನ ಗಂಗಾನಗರದ ಪಾಪಣ್ಣ ಬ್ಲಾಕ್‌ನ ನಿವಾಸಿ. ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಸ್ಥಳೀಯ ಬಿಜೆಪಿಯ ಪ್ರಧಾನ ಕಾರ್ಯದರ್ಶಿಯಾದ ಎಲ್.ಶ್ರೀನಿವಾಸ್ ಲೋಕಸಭಾ ಚುನಾವಣಾ ಪ್ರಚಾರಕ್ಕೆ ನಾಲ್ಕು ದಿನದ ಕೆಲಸಕ್ಕೆ ಇವರನ್ನು ನೇಮಿಸಿಕೊಂಡಿದ್ದರು. ಒಂದು ದಿನದ ಹಣ (ಇನ್ನೂರು ರೂಪಾಯಿ) ಕೊಟ್ಟಿದ್ದರು. ಉಳಿದ ಮೂರು ದಿನದ ಬಾಕಿ ಆರು ನೂರು ಪಡೆಯಲು ಮೇ 3 ರಂದು ಶ್ರೀನಿವಾಸರ ಮನೆ ತುಳಿದ ಭಾಗ್ಯರವರು ಹಣ ಕೇಳಿದಾಗ ಅವರ ಮೇಲೆ ಹಲ್ಲೆ ನಡೆಸಿದ ಶ್ರೀನಿವಾಸ್ ಜೀವ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಮತ್ತು ಕಪಾಳಕ್ಕೆ ಹೊಡೆದು ಕಳಿಸಿದ್ದಾರೆ. ಸಂಸ್ಕೃತಿ ವಕ್ತಾರರ ನಿಜ ಬಣ್ಣ ಬಯಲಾಗಿದೆ. ಮಹಿಳೆಯರನ್ನು ಸಹ ಗೌರವಿಸದ ಬಿಜೆಪಿ ನಿಜ ಸಂಸ್ಕೃತಿ ಜೊತೆಗೆ ಹಣ ಕೊಟ್ಟು ಚುನಾವಣಾ ಕೆಲಸ ಮಾಡಿಸಿಕೊಳ್ಳುವ ಸಂಸ್ಕೃತಿಯೂ ಬಯ[ಲಾಗಿದೆ].



ಎಷ್ಟೆಲ್ಲಾ ದೌರ್ಜನ್ಯ, ನಿಂದನೆ[ಗೆ] ಗುರಿಯಾದರೂ ಭಾಗ್ಯರವರು ಸ್ವಲ್ಪವೂ ಹೆದರ[ದೆ] ಕೂಡಲೇ ಆರ್.ಟಿ.ನಗರದ ಠಾಣೆಗೆ ಹೋ[ಗಿ] ದೂರು ದಾಖಲಿಸಲು ಪ್ರಯತ್ನಿಸಿದ್ದಾರೆ. ಆದ[ರೆ] ಈಗ ಮೊಕದ್ದಮೆ ದಾಖಲಿಸಿಲ್ಲ. ಸಂ[...] ವಿಚಾರಣೆಗೆಂದು ಕರೆದ ಠಾಣೆಯ ಇನ್ಸ್‌ಪೆಕ್ಟ[ರ್] ಬಿ.ಪಿ.ಪ್ರಸಾದ್‌ರವರು ದೂರನ್ನು ವಾಪಸ[್] ಪಡೆಯಬೇಕು ಎಂದು ತಾಕೀತು ಮಾಡಿರುವುದಲ್ಲದೇ, ಶ್ರೀನಿವಾಸ್‌ರವರ[ು] ಯಾರೂ ಏನು ಮಾಡಲು ಸಾಧ್ಯವಿಲ್ಲ ಎಂದ[ು] ಕೆರಳಿ ಬೈಯ್ದಿದ್ದಾರೆ. ಇದರ ಹಿಂದೆ ಕಾಣದ ಕೈಗಳ[ು] ಇವೆ. ಇಲ್ಲಿ ಗಮನಿಸಬೇಕಾದ ವಿಚಾರ ಸಂಸ್ಕೃತಿಯ ಸಂರಕ್ಷಕರು ಮಹಿಳೆಯನ್ನು ಗೌರವಿಸುವ ಪಾ[ಠ] ನೀಡುತ್ತಾ ಇರುವಾಗಲೇ ಅವರು ಅನುಸರಿಸು[ವ] ಮೌಲ್ಯಗಳ ಅಧಃಪತನ ಒಂದು ಕಡೆಯಾದ[ರೆ] ಇನ್ನೊಂದು ಕಡೆ ಜನತೆಯ ರಕ್ಷಣೆಗೆ

ಪುಟ 15ಕ್ಕೆ

ಮ ಪ್ರಕರಣ

ಸ್ಥಳೀಯ ಭತ್ತ ವ್ಯಾಪಾರಿ ಇಸ್ಮಾಯಿಲ್‌ರವರ ಅಕ್ಬರ್ ಹಾಗೂ ಸ್ಥಳೀಯ ಜೈನ ಸಮುದಾಯದ ಕುಟುಂಬದ ಯುವತಿ ಖುಷ್ಬೂರವರ ಕಳೆದ ನಾಲ್ಕಾರು ವರ್ಷಗಳ ಹಿಂದಿನಿಂದ ಮ ಪ್ರಕರಣ ಇತ್ತು ಎನ್ನಲಾಗುತ್ತಿದೆ. ಆ ವಯಸ್ಕ ವಕ ಯುವತಿಯರ ಪ್ರೇಮ ಪ್ರಕರಣಕ್ಕೆ ಹಿರಿಯರ ಮತ ಇರಲಿಲ್ಲ. ಈ ಮಧ್ಯದ ಅವಧಿಯಲ್ಲಿ 3-4 ರಿ ಆ ಜೋಡಿಗಳನ್ನು ಅಗಲಿಸುವ ಾಯಿತಿಗಳು ನಡೆದಿವೆ. ಒಮ್ಮೆ ಆ ಯುವತಿಯನ್ನು ವಂತವಾಗಿ ರಾಜಸ್ಥಾನಕ್ಕೆ ಕಳುಹಿಸಲಾಗಿದೆ. ಮತ್ತೆ ಪಸ್ಸಾದ ಆಕೆ ಅಕ್ಬರ್‌ನೊಂದಿಗೆ ತನ್ನ ದಲಿನಂತೆಯೇ ಪ್ರೀತಿ ಪ್ರೇಮಗಳಲ್ಲಿ ಕಳೆಯ ಸಿದ್ದಾಳೆ. ಕೊನೆಗೆ ಮನೆಯ ಹಿರಿಯರ ನೆಗಳಿಂದ ಬೇಸತ್ತ ಇಬ್ಬರೂ ಮದುವೆಗೆ ತಯಾರಿ ಸಿ ಏಪ್ರಿಲ್ 20, 2009ರಂದು ಒಟ್ಟಿಗೆ ಊರು ಬೆಂಗಳೂರು ಸೇರಿದ್ದಾರೆ. ಅದನ್ನು ಪತ್ತೆ ಹಚ್ಚಿದ ವತಿಯ ತಂದೆ-ತಾಯಿಯರು ಗಳೂರುವರೆಗೂ ಹೋಗಿ ಪ್ರೇಮಿಗಳಿಬ್ಬರನ್ನೂ ತಮ್ಮ ಮಗಳನ್ನು ರಾಜಸ್ಥಾನಕ್ಕೆ ಹಿಸಿದ್ದಾರೆ. ಅಷ್ಟೇ ಅಲ್ಲ. ಹಗರಿಬೊಮ್ಮನಹಳ್ಳಿಗೆ ಾಸಾಗಿ ಯುವಕನ ತಂದೆಯ ಹತ್ತಿರ ಊರಿನ ವು ಗಣ್ಯರೆನಿಸಿಕೊಂಡವರ ಸಮ್ಮುಖದಲ್ಲಿ ್ರಲ್ 30, 2009ರ ರಾತ್ರಿ ಪಂಚಾಯಿತಿ ಡಿದ್ದಾರೆ. ಯುವಕ ಅಕ್ಬರ್‌ನಿಗೆ ಅವನ ತಂದೆ ಿ ಬೇರೆ ಮದುವೆ ಮಾಡಬೇಕು. ಯುವತಿ ಷ್ಬೂಗೆ ಅವಳ ತಂದೆ-ತಾಯಿ ಬೇರೆ ಸಂಬಂಧ ೋಡಿ ಮದುವೆ ಮಾಡಬೇಕೆಂದೂ, ಇಬ್ಬರಿಗೂ ್ನ ಮುಂದೆ ಯಾವುದೇ ರೀತಿಯ ಸಂಬಂಧ ವೆಂದೂ ಪಂಚಾಯಿತಿ ತೀರ್ಮಾನ ಮಾಡಿ ತರ್ ಧರ್ಮಿಯ ಪ್ರೇಮ ಪ್ರಕರಣವೊಂದನ್ನು ಸಕಿ ಹಾಕಿದ್ದಾರೆ.

ಎಂಎಸ್ ವದಂತಿ

ೋಮು ಗಲಭೆಗೆ ನಾಂದಿ

ಏಪ್ರಿಲ್ 30,2009ರ ರಾತ್ರಿ ಪ್ರೇಮಿ ಅಕ್ಬರ್‌ನು ತಿ ಮಾಡಿ ಪ್ರೇಮ ಪ್ರಕರಣವನ್ನು ರಿದವರಲ್ಲಿ ಒಂದಿಬ್ಬರಿಗೆ ಎಸ್‌ಎಂಎಸ್ ನೆಂದೂ, ಅದರಲ್ಲಿ ಹಿಂದೂಗಳನ್ನು ಂಡಾಗಳೆಂದೂ ಹಿಂದಿ ಭಾಷೆಯ ಸಂದೇಶವನ್ನು ್ಲೀಷ್ ಲಿಪಿಯಲ್ಲಿ ಕಳುಹಿಸಿದ್ದಾನೆಂದು ವದಂತಿ ಡಿದೆ. ಆತ ಕಳಿಸಿದ್ದು ಎಂದು ಹೇಳಲಾದ ದೇಶವನ್ನು ಪ್ರಿಂಟ್‌ಔಟ್ ಮಾಡಿಸಿ ಕ್ಸ್ ಮಾಡಿಸಿ ಹಂಚುವುದರ ಮೂಲಕ ಪ್ರೇಮ ಪ್ರಕರಣದಲ್ಲಿ ಚಡ್ಡಿಗಳು ಮೂಗು ರಿಸಿ ಇಡೀ ಊರೇ ಭಯದ ಾವರಣದಲ್ಲಿ ತೊಳಲಾಡುವಂತೆ ಮಾಡಿದ್ದಾರೆ. ಉದ್ರೇಕಗೊಂಡ ಹಿಂದೂ ಗುಂಪೊಂದು ಎಂಎಸ್ ಮಾಡಿದ ಅಕ್ಬರ್‌ನ ಮನೆಯ ಕಡೆಗೆ ೀಗುತ್ತಿರುವುದು ತಿಳಿದ ಸರ್ಕಲ್ ಇನ್ಸ್‌ಪೆಕ್ಟರ್ ್‌ನ ಮನೆಯ ಹತ್ತಿರವೇ ನಿಂತು ಆ ಗುಂಪಿನಲ್ಲಿನ ವರನ್ನು ಕರೆದು ಠಾಣೆಗೆ ಈ ಸಂಬಂಧ ದೂರು ಡುವಂತೆಯೂ ನಂತರ ತಾವೇ ಅಕ್ಬರ್‌ನನ್ನು ಗೆ ಕರೆಸಿ ಯಾರಿಗೆ ಬೇಕಾದರೂ ಅಪಾಲಜಿ ಸುವ ದಾಗಿಯೂ ತಿಳಿಸಿದ್ದಾರೆ ಎನ್ನಲಾಗಿದೆ. ತಮ್ಮ ಹಿಡನ್ ಅಜೆಂಡಾ ಹೊಂದಿದ್ದ ಗುಂಪು ಇನ್ಸ್‌ಪೆಕ್ಟರ್‌ರವರ ಸಲಹೆಯನ್ನು ತಿರಸ್ಕರಿಸಿ ್‌ನ ಮನೆಯ ಮುಂದೆ ಜಮಾಯಿಸಿದ್ದಾರೆ. ಈ ಗಾಗಲೇ ಹೊಸಪೇಟೆಯಿಂದ ಬೇರೆ ಬೇರೆ ಸಗಳಲ್ಲಿ 50-60 ಸಂಖ್ಯೆಯ ಭಜರಂಗದಳದ

ಹಗರಿಬೊಮ್ಮನ ಹಳ್ಳಿ

ಕೋಮುಗಲಭೆ ಬೆನ್ನ ಹಿಂದೆ ಚೆಡ್ಡಿಪಡೆ

ಪ್ರೇಮ ಪ್ರಕರಣವೊಂದನ್ನು ಕೋಮುಗಲಭೆಗೆ ಬಳಸಿಕೊಂಡು ಮನಸ್ಸುಗಳಿಗೆ ಮನೆಗಳಿಗೆ ಬೆಂಕಿ ಹಚ್ಚಿರುವ ಚಡ್ಡಿಗಳು ಚಳಿ ಕಾಯಿಸಿಕೊಳ್ಳುತ್ತಿರುವುದು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿಯಲ್ಲಿ ಮೇ 1ರಂದು ನಡೆದಿದೆ.

ರಂಜನಾ

ಕಾರ್ಯಕರ್ತರು ಅಲ್ಪಸಂಖ್ಯಾತ ಸಮುದಾಯದವರ ಆಸ್ತಿಪಾಸ್ತಿಗೆ ಬೆಂಕಿ ಹಚ್ಚಿ ಹಾಳು ಮಾಡಿ ಪರಾರಿಯಾಗಿದ್ದಾರೆ. ಈ ಕೆಲಸಕ್ಕೆ ಜೈನ್ ವ್ಯಾಪಾರಿಗಳ ಸಂಘದಿಂದ 1.50 ಲಕ್ಷ ರೂ. ಖರ್ಚಾಗಿದೆ ಎನ್ನುವುದು ಬಹಿರಂಗ ಚರ್ಚೆಯಾಗುತ್ತಿದೆ.

ಪರಿಸ್ಥಿತಿ ಹತೋಟಿಗೆ ತರುವಲ್ಲಿ ವಿಫಲವಾಗಿರುವ ಪೋಲೀಸರು ಅಶ್ರುವಾಯು ಸಿಡಿಸಿ, ಅಕ್ಬರ್ ಹಾಗೂ ಆತನ ತಂದೆ-ತಾಯಿಯನ್ನು ಅವರ ಮನೆಯಿಂದ ಬೇರೆಡೆಗೆ ಸಾಗಿಸಿಟ್ಟರೆ, ಈ ಮಧ್ಯೆ ಪ್ರಾರ್ಥನೆಗೆಂದು ತೆರಳಿದ ತಹಸೀಲ್ದಾರ್ ಸುಲ್ತಾನ್ ಮೆಹಮೂದ್ ಕೂಡಾ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ಪರಿಶೀಲಿಸಿ ಲಾಠಿಚಾರ್ಜ್‌ಗೆ ಆದೇಶಿಸಿದ್ದಾರೆ ಎನ್ನಲಾಗಿದೆ.

ಈ ವೇಳೆಗಾಗಲೇ ಸ್ಥಳೀಯ ಆರ್‌ಎಸ್‌ಎಸ್ ನವರ ಮಾರ್ಗದರ್ಶನ ದಂತೆ ನೆರೆ ತಾಲ್ಲೂಕಿನ ಭಜರಂಗಿಗಳು ಅಕ್ಬರ್‌ನ ತಂದೆ ಇಸ್ಮಾಯಿಲ್ ಸಾಹೇಬ್‌ರ ಕಾರು, ವೇ ಬ್ರಿಜ್‌ನಲ್ಲಿನ ಕಂಪ್ಯೂಟರ್‌ಗಳನ್ನು ಸುಟ್ಟು ಧ್ವಂಸ ಮಾಡಿದ್ದಾರೆ. ಅಲ್ಲದೇ ಅವರ ಸಹೋದರರ ಅಂಗಡಿಗಳಿಗೂ ಬೆಂಕಿ ಹಚ್ಚಿದ್ದಾರೆ. ಬೆಂಕಿ ನಂದಿಸಲು ಬಂದ ಅಗ್ನಿಶಾಮಕ ವಾಹನವನ್ನು ಬೆಂಕಿ ಹತ್ತಿದ ವಾಹನ ಹಾಗೂ ಸ್ಥಳಗಳ ಕಡೆಗೆ ಹೋಗದಂತೆ ಕೈಯಲ್ಲಿ ಕಲ್ಲು ಹಿಡಿದ ಭಜರಂಗಿಗಳು ಹಾಗೂ ಆರ್‌ಎಸ್‌ಎಸ್ ನವರು ತಡೆಹಿಡಿದು ಅದರ ಚಾಲಕನನ್ನು ಬೆದರಿಸಿದ್ದೇ, ಅಲ್ಲದೇ ಆ ವಾಹನಕ್ಕೂ ಕಲ್ಲು ತೂರಿ ಜಖಂಗೊಳಿಸಿದ್ದಾರೆ, ತಹಶೀಲ್ದಾರ್‌ರ ವಾಹನ, ಡಿವೈಎಫ್‌ಪಿಯವರ ವಾಹನ ಈ ಗದ್ದಲದಲ್ಲಿ ಜಖಂಗೊಂಡಿವೆ.

ಇವೆಲ್ಲವುಗಳ ಜೊತೆಗೆ ಈ ಪ್ರಕರಣಕ್ಕೆ ಯಾವುದೇ ರೀತಿಯ ಸಂಬಂಧವಿಲ್ಲದ ಅನೇಕರ ವಾಹನಗಳು ಸುಟ್ಟುಕರಕಲಾಗಿವೆ. ಅಂಗಡಿ ಮಾರುಕಟ್ಟೆಗಳು ಭಸ್ಮವಾಗಿವೆ. ಅವರು ದೈನಂದಿನ ಬದುಕು ದಯನೀಯವಾಗಿದೆ.

ಶಾಂತಿ ಸಭೆ

ಮೇ 2, 2009ರಂದು ಎಸ್‌ಪಿ, ತಾಲ್ಲೂಕು ಆಡಳಿತ ಹಾಗೂ ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳ ಮುಖಂಡರೊಂದಿಗೆ ತಾಲ್ಲೂಕು ಪಂಚಾಯಿತಿಯಲ್ಲಿ ಶಾಂತಿ ಸಭೆ ನಡೆಯಿತು. ಪೋಲೀಸ್ ವೈಫಲ್ಯ, ಅಮಾಯಕರ ಬಂಧನ ಕುರಿತು ಸಿಪಿಎಂ ಸೇರಿದಂತೆ ಅನೇಕರು ಪ್ರಸ್ತಾಪಿಸಿ ಚರ್ಚಿಸಿದರು. ಶಾಂತಿ ಸಭೆಯಲ್ಲಿನ ಪ್ರಸ್ತಾಪ ಕುರಿತಂತೆ ಎಸ್‌ಪಿ ಸೀಮಂತ್‌ಕುಮಾರ್ ಸಿಂಗ್ ತಪ್ಪೊಪ್ಪಿಕೊಂಡಿದ್ದಾರೆ.

ಸಂಘ ಪರಿವಾರವೇ ನೇರ ಹೊಣೆ

ಕೋಮುಗಲಭೆಯನ್ನು ಹುಟ್ಟು ಹಾಕಲಿಕ್ಕಾಗಿ ಕಾಯುತ್ತಿದ್ದ ಸಂಘ ಪರಿವಾರಕ್ಕೆ ಇಲ್ಲಿಯವರೆಗೆ ಯಾವ ರೀತಿಯಲ್ಲೂ ಕೋಮುಗಲಭೆಯನ್ನೂ ಹುಟ್ಟು ಹಾಕಲು ಸಾಧ್ಯವಾಗಿರಲಿಲ್ಲ. ಇಲ್ಲಿರುವ ಹಿಂದೂ-ಮುಸ್ಲಿಂ ಸಮುದಾಯ ಬಹಳಷ್ಟು ರೀತಿಯಲ್ಲಿ ಅನ್ಯೋನ್ಯತೆಯಿಂದ ಜೀವನ ನಡೆಸುತ್ತಿದ್ದಾರೆ. ಬಾಬರಿಮಸೀದಿ ಬೀಳಿಸಿದಂತಹ ಸಂದರ್ಭ ದಲ್ಲಿಯೂ, ದೇಶದಲ್ಲಾದ ಬೇರೆ ಬೇರೆ ಹಿಂದೂ-ಮುಸ್ಲಿಂ ಗಲಾಟೆಗಳ ಸಂದರ್ಭದಲ್ಲಿಯೂ ಇಲ್ಲಿಯ ಹಿಂದೂ-ಮುಸ್ಲಿಂ ಐಕ್ಯತೆಗೆ ಚ್ಯುತಿ ಬಂದೊದಗಿರಲಿಲ್ಲ! ಈಗ ಈ ಪ್ರಕರಣದ ಘಟನೆಯನ್ನು ಬಳಸಿಕೊಂಡ ಸಂಘ ಪರಿವಾರ, ದಿಢೀರನೇ ಮಧ್ಯಪ್ರವೇಶ ಮಾಡಿದೆ. ಹುಡುಗನ ಮನೆ ಮುಂದೆ ಗುಂಪು ಜಮಾಯಿಸಿದಾಗ ಆರ್‌ಎಸ್‌ಎಸ್‌ನ ಮುಖ್ಯಸ್ಥರಾದ ಡಾ: ವಿನಯಸಿಂಹ ಈ ಗುಂಪಿನಲ್ಲಿದ್ದುಕೊಂಡೇ ಇಡೀ ಪರಿಸ್ಥಿತಿಯನ್ನು ಕೋಮುವಾದಿಕರಿಸಿದ್ದಾರೆ. ಎಲ್ಲಿಂದಲೋ ಆರ್‌ಎಸ್‌ಎಸ್ ಬಾವುಟವನ್ನೂ ತರಿಸಿ ಸ್ಥಳದಲ್ಲಿ ವಿಜೃಂಭಿಸುವಂತೆ ಮಾಡಲಾಯಿತು. ಕೋಮುವಾದಿ ಮನಸುಗಳುಳ್ಳ ಮಧ್ಯಮ ಮೇಲ್ವರ್ಗದ ಹುಡುಗರ ಗುಂಪು, ಅಂಗಡಿ ಮುಗ್ಗಟ್ಟುಗಳಿಗೆ ಬೆಂಕಿ ಹಚ್ಚುವ ಕೆಲಸದಲ್ಲಿ ನಿರತವಾಯಿತು. ಬೇರೆ ತಾಲ್ಲೂಕಿನಿಂದ 8 ಟ್ರಕ್‌ನಲ್ಲಿ ಮತ್ತು 1 ಲಾರಿಯಲ್ಲಿ ಭಜರಂಗದಳದವರನ್ನು ಕರೆಯಿಸಲಾಗಿದೆ. ಇವರಿಗೆ ಲಕ್ಷಗಟ್ಟಲೇ ಹಣವನ್ನು ಕೊಟ್ಟು ಕರೆಯಿಸಲಾಗಿದೆ. ಬಂದವರೇ ಬೆಂಕಿ ಹಚ್ಚುವ ಕೃತ್ಯಕ್ಕೆ ಮತ್ತು ಕೋಮುಭಾವನೆ ಪ್ರಚೋದಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ.

ಶಿರಾಜ್‌ಶೇಖ್ ಬಂಡಾಯದ ಗುಂಪು

ಕಾಂಗ್ರೆಸ್‌ನ ಮಾಜಿ ಶಾಸಕ ಶಿರಾಜ್‌ಶೇಖ್ ಬಿಜೆಪಿಗೆ ಸೇರಿದ್ದು, ಇಲ್ಲಿಯ ಮೂಲ ಬಿಜೆಪಿ ಗುಂಪಿಗೆ ಇಷ್ಟವಿರಲಿಲ್ಲ. ಆದರೆ ಇಲ್ಲಿಯ ಆರ್‌ಎಸ್‌ಎಸ್ ಮೂಲ ಬಿಜೆಪಿ ಗುಂಪನ್ನು ಮತ್ತು ಶಿರಾಜ್‌ಶೇಕ್ ಬಿಜೆಪಿ ಗುಂಪಿನಲ್ಲಿ ಮ್ಯಾನೇಜ್ ಮಾಡಿಕೊಂಡೇ ಬಂದಿತ್ತು. ಇಲ್ಲಿಯ ಮುಸ್ಲಿಂ ಸಮುದಾಯಕ್ಕೆ ಶಿರಾಜ್ ಶೇಖ್ ಬಿಜೆಪಿಗೆ ಹೋಗಿರುವುದು ಇಷ್ಟವಿಲ್ಲದಿದ್ದರೂ 'ಒಲ್ಲದ ಗಂಡನೊಂದಿಗೆ ಬಾಳುವೆ' ಎನ್ನುವಂತೆ ಮುಸ್ಲಿಂ ಸಮುದಾಯ ಕೂಡ ಈ ಬಾರಿ ಬಿಜೆಪಿಯನ್ನು ಬೆಂಬಲಿಸಿದ್ದರು. ಶಿರಾಜ್ ಶೇಖ್ ಬಿಜೆಪಿ ಸೇರ್ಪಡೆಯಿಂದಾಗಿ ಅಕ್ಕಪಕ್ಕದ ತಾಲ್ಲೂಕು ಸೇರಿ 3-4 ಎಂ.ಎಲ್.ಎ. ಸ್ಥಾನಗಳು ಬಿಜೆಪಿ ಗೆಲ್ಲುವಂತಾಗಿದ್ದವು. ಈ ಎಲ್ಲಾ ಅವಕಾಶಗಳನ್ನು ಆರ್‌ಎಸ್‌ಎಸ್ ನಿಯಂತ್ರಿಸಿ ತಮ್ಮ ಆರ್‌ಎಸ್‌ಎಸ್ ಬೆಳವಣಿಗೆ ಮತ್ತು ಕ್ರೋಢೀಕರಣಕ್ಕೆ ಬಳಸಿಕೊಂಡಿವೆ. ಮೂಲ ಬಿಜೆಪಿ ಗುಂಪು ಸಂಘ ಪರಿವಾರ ಈ ಘಟನೆಯನ್ನೂ ಚೆನ್ನಾಗಿಯೇ ಕೋಮುವಾದೀಕರಿಸಿ, ಕೆಲಸ ಮಾಡಿದೆ. ಬಿಜೆಪಿಗೆ ಮತ ನೀಡಿದ ಮುಸ್ಲಿಂ ಸಮುದಾಯಕ್ಕೆ ಬಿಜೆಪಿ ಯಾವತ್ತೂ ಮುಸ್ಲಿಂ ಸಮುದಾಯದ ಪರವಾಗಿ ನಿಲ್ಲುವುದು ಎಂಬ ತಿಳುವಳಿಕೆ. ಈ ಸಮುದಾಯಕ್ಕೆ, ನಾಯಕರಿಗೆ ಈ ಘಟನೆಯಿಂದಾದರೂ ತಿಳಿಯಬೇಕಾಗಿದೆ.

ಭಯದ ವಾತಾವರಣ

ತಾಲ್ಲೂಕಿನಲ್ಲಿ ಸಂಪೂರ್ಣ ಭಯದ ವಾತಾವರಣ ನಿರ್ಮಾಣವಾಗಿದೆ. ಸಂಘ ಪರಿವಾರ ಈ ಪರಿಸ್ಥಿತಿಯ ದುರ್ಲಾಭ ಪಡೆಯುತ್ತಿದೆ. 105 ಜನರನ್ನು ಈ ಸಂದರ್ಭದಲ್ಲಿ ಬಂಧಿಸಲಾಗಿದೆ. ಬಂಧಿತರಲ್ಲಿಯೂ ಹಿಂದೂ-ಮುಸ್ಲಿಂ ಎಂದು ರಾಜಕೀಯವಾಗಿ ವಿಭಜನೆ ಮಾಡಲಾಗಿದೆ. ಸಂಘ ಪರಿವಾರ ಬಂಧಿತರಾಗಿರುವ ಹಿಂದುಗಳಿಗೆ ಬೇಕಾದ ಬೇಲ್ ವ್ಯವಸ್ಥೆಯನ್ನು ಮಾಡುತ್ತಿದ್ದು, ಆರ್‌ಎಸ್‌ಎಸ್‌ನ ಡಾ: ವಿಠ್ಠಲ್‌ನ ಮನೆಯೇ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿದೆ. ಜೈನ್ ಸಂಸ್ಥೆಯವರು ಇದಕ್ಕೆ 2 ಲಕ್ಷ ಹಣ ನೀಡಿದ್ದಾರೆ ಎಂಬ ಸುದ್ದಿ ಇದೆ. ಈ ರೀತಿ ಮಾಡುವುದರ ಮುಖಾಂತರ ಸಂಘ ಪರಿವಾರ ತನ್ನ ಕೋಮುವಾದಿ ನೆಲೆಯನ್ನು ಇನ್ನಷ್ಟು ಭದ್ರಪಡಿಸುತ್ತಿದೆ.

ತಾಲ್ಲೂಕಿನಲ್ಲಿ ಭಯದ ಆತಂಕದ ವಾತಾವರಣದ ಸ್ಥಿತಿ ಇದೆ. ಇಷ್ಟೆಲ್ಲಾ ಗಲಭೆ-ಗಲಾಟೆಯ ನಡುವೆಯೂ ದುಡಿಯುವ ಜನತೆ ತಮ್ಮ ದುಡಿಮೆಗಾಗಿ ಹೊರಗಡೆ ಬರುತ್ತಿದ್ದಾರೆ. ಜಾಗತೀಕರಣದ ದಿವಾಳಿ ನೀತಿ, ದುಡಿಯದಿದ್ದರೆ, ಒಪ್ಪತ್ತಿನ ಊಟಕ್ಕೂ ಕಷ್ಟಪಡುವ ಪರಿಸ್ಥಿತಿ, ಹೊರಗಡೆ ಬರುವುದು ಅನಿವಾರ್ಯವಾಗಿದೆ. ಸುಟ್ಟಿರುವ ಅಂಗಡಿ ಶೆಡ್‌ಗಳ ಮುಂದೆ ರೋಧಿಸುವ ಜನರ ಪರಿಸ್ಥಿತಿ ಹೇಳತೀರದಾಗಿದೆ ಸುಟ್ಟಿರುವ ಅಂಗಡಿ ಶೆಡ್‌ಗಳ ಜಾಗದಲ್ಲಿ ತಮ್ಮ ಕಾಯಕ ಶುರುವಾಗಿದೆ. ಸುಟ್ಟು ಕರಕಲಾಗಿರುವ ಜಾಗದಲ್ಲಿ ಮತ್ತೆ ತಮ್ಮ ಕಾಯಕವಾದ ಪಂಚರ್ ಹಾಕುವುದು, ತತ್ತಿ ಮಾರುವುದು, ಟೀ ಸೋಸುವುದನ್ನು ನೋಡಿದಾಗ ಎಂಥಹ ಮಾನವೀಯ ಮನುಷ್ಯನ ಕಣ್ಣಲ್ಲಿ ಕಣ್ಣೀರು ಬರದೇ ಇರುವುದು ಸಾಧ್ಯವಿಲ್ಲ. ಕಟ್ಟಡ ಕಟ್ಟುವ ಅಲ್ಪಸಂಖ್ಯಾತ ಸಮುದಾಯ ಬಿಜೆಪಿಯ ಟೋಪಿಗಳನ್ನು ಹಾಕಿಕೊಂಡು ತಮ್ಮ ರಕ್ಷಣೆ ಮಾಡಿಕೊಳ್ಳುತ್ತಾ ಕಟ್ಟಡ ಕಟ್ಟುವುದು, ಸಿಮೆಂಟ್ ಕಲಿಸುವುದನ್ನು ನೋಡಿದಾಗ, ಮನುಷ್ಯನ ವಿಕೃತ ಕೃತ್ಯಗಳಿಗೆ, ಪರಿಹಾರ ಹೇಗೆ,

ಪುಟ 10 ಕ್ಕೆ

ಭಜರಂಗಿ ಪೋಲೀಸ್ ಪುಂಡಾಟಿಕೆಗೆ ಅಮಾಯಕ ದಲಿತ ಬಲಿ

ದಕ್ಷಿಣ ಕನ್ನಡ ಜಿಲ್ಲೆಗೆ ಭಜರಂಗಿ, ಪೊಲೀಸ್ ಪುಂಡಾಟಿಕೆ ಹೊಸತೇನಲ್ಲ. ಕಳೆದ 15 ವರ್ಷಗಳಿಂದ ಇದು ಮಾಮೂಲು. ಭಜರಂಗ ದಳವೆಂದರೆ ಅದು ಸಂಘ ಪರಿವಾರದ ಕ್ರಿಮಿನಲ್‌ಗಳ ಕೂಟವೆಂಬುದು ಜನಜನಿತ. ಈ ಕೂಟದ ಬೆಳ್ತಂಗಡಿ ತಾಲ್ಲೂಕು ಸಂಚಾಲಕ ಭಾಸ್ಕರ ಧರ್ಮಸ್ಥಳ ಎಂಬಾತನ ರೌಡಿಗ್ಯಾಂಗ್ ಮೇ 1 ರ ಮಧ್ಯಾಹ್ನ ಆಂಧ್ರ ಮೂಲದ ಕೇಂದ್ರ ಮೀಸಲು ಪಡೆಯ ಪೊಲೀಸರೊಂದಿಗೆ ಘರ್ಷಣೆಗಿಳಿದ ಪರಿಣಾಮ ಸ್ಥಿಮಿತ ಕಳೆದುಕೊಂಡ ಆಂಧ್ರ ಪೊಲೀಸರು ಯದ್ವಾತದ್ವಾ ಹಾರಿಸಿದ ಗುಂಡು ಅಮಾಯಕ ದಲಿತ ಯುವಕನೋರ್ವನನ್ನು ಧರ್ಮಸ್ಥಳದಲ್ಲಿ ಬಲಿ ತೆಗೆದುಕೊಂಡಿದೆ.

ಘಟನೆಯ ವಿವರ :

ಏಪ್ರಿಲ್: 30 ರಂದು ನಡೆದ 3ನೇ ಹಂತದ ಮತದಾನಕ್ಕೆ ಭದ್ರತೆಗೆಂದು ಆಂಧ್ರಪ್ರದೇಶದ ಕೇಂದ್ರ ಮೀಸಲು ಪಡೆಯ ಪೊಲೀಸರು ಆಗಮಿಸಿದ್ದರು. ಹೀಗೆ ಆಗಮಿಸಿದ ಪೊಲೀಸರು ಕರ್ತವ್ಯ ನಿರ್ವಹಿಸಿದ ಬಳಿಕ ಮೇ 1 ರಂದು ಬೆಳಿಗ್ಗೆ ಧರ್ಮಸ್ಥಳಕ್ಕೆ ಆಗಮಿಸಿ ದೇವಸ್ಥಾನ ಪ್ರವೇಶಕ್ಕೆ ಸಂಬಂಧಿಸಿ ಗಲಾಟೆ ನಡೆಸಿ, ಮತ್ತೆ ಅನ್ನಪೂರ್ಣ ಛತ್ರದಲ್ಲೂ ಯಾವುದೋ ವಿಚಾರಕ್ಕೆ ಸಂಬಂಧಿಸಿ ಗಲಾಟೆ ನಡೆಸಿದರು. ಇದಾದ ಬಳಿಕ ಸ್ಥಳೀಯ ಯುವಕರು, ಭಜರಂಗಿಗಳು ಕ್ರಿಕೆಟ್ ಆಟವಾಡುತ್ತಿದ್ದ ಮೈದಾನದಲ್ಲಿ ವಿಶ್ರಾಂತಿಗೆಂದು ತೆರಳಿದರು. ಈ ಸಂದರ್ಭ ಚೆಂಡು ಪೊಲೀಸ್ ಬಸ್‌ಗೆ ತಾಗಿದ ವಿಚಾರಕ್ಕೆ ಸಂಬಂಧಿಸಿ ಭಜರಂಗಿಗಳು, ಪಾನಮತ್ತ ಪೊಲೀಸರು ಮಾತಿಗೆ ಮಾತು ಬೆಳೆಸಿ ಕಾದಾಟಕ್ಕಿಳಿದರು. ಭಜರಂಗಿಗಳಂತೂ ಬ್ಯಾಟ್, ವಿಕೆಟ್ ಗಳಲ್ಲಿ ಹೊಡೆದಾಟ ನಡೆಸಿದಾಗ ಪೊಲೀಸರು ಲಾಠಿ ಬೀಸಿದರು. ಇನ್ನೇನು ಹೊರಡಲು ತಯಾರಾದ ಪೊಲೀಸ್ ಬಸ್‌ಗೆ ಕಲ್ಲು ತೂರಿದ ಭಜರಂಗಿಗಳು, ರಸ್ತೆಯಲ್ಲಿ ಟಯರ್ ಹಾಕಿ ಬೆಂಕಿ ಹಚ್ಚಿ ಸ್ಥಳದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಿಸಿದರು. ಯಾವುದೇ ಕಾರಣಕ್ಕೂ ಸ್ಥಳ ಬಿಟ್ಟು ಕದಲದ ಈ ಭಜರಂಗಿ ಪಡೆ ಪೊಲೀಸರ ಮೇಲೆ ಧಾಳಿಗೆ ಅಣಿಯಾದರು. ಇತ್ತ ಕಡೆ ಪೊಲೀಸರೂ ಧಾಳಿ ಎದುರಿಸಲು ಮುಂದಾದಾಗ

ಭಜರಂಗಿ ದಳದ ಹೊಣೆಗೇಡಿತನ ಹಾಗೂ ಕೇಂದ್ರ ಮೀಸಲು ಪಡೆಯ ಉದ್ಧಟತನಗಳಿಗೆ ಅಮಾಯಕ ದಲಿತ ಯುವಕ ಬಲಿಯಾಗಿದ್ದು ನಿಜಕ್ಕೂ ದುರಂತವಾಗಿದೆ.

ಪರಿಸ್ಥಿತಿ ಇನ್ನೂ ಉಗ್ರ ರೂಪ ಪಡೆಯಿತು. ಭಜರಂಗಿಗಳ ದಂಡು ಕಂಡು ಆವೇಶಕ್ಕೊಳಗಾಗಿ ಆಕಾಶಕ್ಕೆ ಗುಂಡು ಹಾರಿಸಿದರೂ, ಚದುರದೆ ಇದ್ದಾಗ ಯದ್ವಾತದ್ವಾ ಭಜರಂಗಿಗಳತ್ತ ಪೊಲೀಸರು ಗುಂಡು ಹಾರಿಸಿದ್ದಾರೆ. ದುರದೃಷ್ಟವಶಾತ್ ಆ ಗುಂಡಿಗೆ ಅನ್ನಪೂರ್ಣ ಛತ್ರದಲ್ಲಿ ಕೆಲಸ ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದ ಅಮಾಯಕ ದಲಿತ ಯುವಕ ಐತಪ್ಪ ಬಲಿಯಾಗಿದ್ದಾರೆ. ಸ್ಥಳೀಯ ಪೊಲೀಸರ ಸಮ್ಮುಖದಲ್ಲಿ ಈ ದುರ್ಘಟನೆ ನಡೆದರೂ ಕೂಡ ಪೊಲೀಸರು ಮೂಖಪ್ರೇಕ್ಷಕರಾದುದು ವಿಪರ್ಯಾಸ.

ಪೊಲೀಸರು ಹಾರಿಸಿದ ಗುಂಡಿಗೆ ಓರ್ವ ಭಜರಂಗಿ ಸೇರಿದಂತೆ ಕೆಲವರು ಗಾಯಗೊಂಡಿದ್ದಾರೆ. ಅಮಾಯಕನ ಹತ್ಯೆಯ ವಿಷಯ ತಿಳಿಯುತ್ತಿದ್ದಂತೆ ವಿವಿಧ ಗ್ರಾಮಗಳ ಸಾವಿರಾರು ಜನರು ಜಮಾಯಿಸಿ ಸ್ಥಳದಲ್ಲಿ ಗಲಾಟೆ ಸ್ಫೋಟಗೊಳ್ಳುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿತ್ತು.

ಸುಮಾರು 3 ಗಂಟೆಗಳ ಕಾಲ ಜನರು ಮತ್ತು ಪೊಲೀಸರ ನಡುವೆ ವಾಗ್ವಾದ, ಘರ್ಷಣೆ ನಡೆದು ಹಲವು ಬಾರಿ ಲಾಠಿಚಾರ್ಜ್ ನಡೆದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಬ್ರಹ್ಮಣ್ಯೇಶ್ವರ ರಾವ್ ರವರ ಆಗಮನದ ಬಳಿಕ ಆರೋಪಿ ಪೊಲೀಸರನ್ನು ಬಂಧಿಸಲಾಯಿತು.

ಭಜರಂಗದಳ ಹಾಗೂ ಮೀಸಲು ಪೊಲೀಸರ ತಿಕ್ಕಾಟ



ಅನಾಥವಾದ ಕುಟುಂಬ

ಧರ್ಮಸ್ಥಳದ ಅಶೋಕ ನಗರದ ನಿವಾಸಿಯಾಗಿರುವ ಐತಪ್ಪ (35)ರವರು ಧರ್ಮಸ್ಥಳದ ಅನ್ನಪೂರ್ಣ ಛತ್ರದಲ್ಲಿ ಕೂಲಿ ಕೆಲಸ ನಿರ್ವಹಿಸುತ್ತಾ ತನ್ನ ಕುಟುಂಬವನ್ನು ಸಲಹುತ್ತಿದ್ದರು. ತಾಯಿ ಮೀನಾಕ್ಷಿ, ಪತ್ನಿ ವಿಮಲ ಇಬ್ಬರು ಮಕ್ಕಳಾದ ರಾಧಿಕ (14) ಆದಿತ್ಯ (4) ಮತ್ತು ಸಹೋದರ ಬಾಬು ಹಾಗೂ ಅವರ ಪತ್ನಿ ಮಕ್ಕಳು ಒಂದೇ ಮನೆಯಲ್ಲಿ ಜೀವಿಸುತ್ತಿದ್ದರು. ಯಾವುದೇ ತಪ್ಪನ್ನು ಮಾಡದ ಅಮಾಯಕ ದಲಿತ ಯುವಕ ಐತಪ್ಪ ಆಂಧ್ರ ಪೊಲೀಸರು ಹಾಗೂ ಭಜರಂಗಿಗಳ ಸಂಘರ್ಷಕ್ಕೆ ಬಲಿಯಾಗಿ ಅವರ ಕುಟುಂಬ ಅನಾಥವಾಗಿದೆ. ಘರ್ಷಣೆಗೆ ಕಾರಣವಾದವರು ಈ ಅನಾಥ ಕುಟುಂಬಕ್ಕೆ ನೆರವಾಗಲು ಮುಂದಾಗುವರೇ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿ ಉಳಿದಿದೆ.

ದಲಿತರ ಸಾವಿನಲ್ಲೂ ರಾಜಕೀಯ

ಭಜರಂಗಿಗಳ ಹಾಗೂ ಆಂಧ್ರ ಪೊಲಿಸರ ಪುಂಡಾಟಿಕೆ ಅಮಾಯಕನ ಬಲಿ ತೆಗೆದುಕೊಂಡಿರುವುದು ನಿಜವಾದರೂ ಅದನ್ನು ಮರೆಮಾಚಲು ಮತ್ತು ಒಟ್ಟು ಘರ್ಷಣೆಯಲ್ಲಿ ಭಜರಂಗಿ ಯುವಕರು ಗಾಯಗೊಂಡಿರುವುದನ್ನು ವಿರೋಧಿಸಿ ಭಜರಂಗದಳ ಕರೆ ನೀಡಿದ ತಾಲ್ಲೂಕು



ಭಜರಂಗ ದಳದ ಪುಂಡಾಟಿಕೆ

ಬಂದ್‌ಗೆ ಯಾವುದೇ ಪ್ರತಿಕ್ರಿಯೆ ಇರಲಿಲ್ಲವಾದರೂ ಸುಮಾರು 11 ಗಂಟೆ ಸುಮಾರಿಗೆ ತಮ್ಮ ಮುಖ ಉಳಿಸಿಕೊಳ್ಳಲು ಬೆಳ್ತಂಗಡಿ, ಉಜಿರೆ, ಗುರುವಾಯನಕೆರೆಗಳಲ್ಲಿ ಬಲಾತ್ಕಾರವಾಗಿ ಅಂಗಡಿ ಬಂದ್ ಮಾಡಿಸಲಾಯಿತು. ಧರ್ಮಸ್ಥಳದಲ್ಲಿ ಮಾತ್ರ ಅಮಾಯಕನ ಸಾವಿಗೆ ಸಂತಾಪ ಸೂಚಿಸಿ ವ್ಯಾಪಾರಿಗಳು ಸ್ವಯಂ ಪ್ರೇರಿತವಾಗಿ ತಮ್ಮ ವ್ಯಾಪಾರಗಳನ್ನು ಸ್ಥಗಿತಗೊಳಿಸಿದರು. ದಲಿತ ಯುವಕನ ಹತ್ಯೆಯಾದ ಕೂಡಲೇ ಆರೋಪಿ ಪೊಲೀಸರನ್ನು ಬಂಧಿಸಿದ್ದಲ್ಲದೆ ಜಿಲ್ಲಾಡಳಿತ 1 ಲಕ್ಷ ರೂಪಾಯಿ ತುರ್ತು ಪರಿಹಾರ ಘೋಷಿಸಿತು. ಇಷ್ಟಾಗಿ ಅಂತ್ಯಸಂಸ್ಕಾರಕ್ಕೆ ಬೇಕಾದ ಎಲ್ಲಾ ಏರ್ಪಾಡುಗಳನ್ನು ಮಾಡಲಾಗುವುದೆಂದು ಜಿಲ್ಲಾಧಿಕಾರಿ ವಿ.ಪೊನ್ನುರಾಜ್ ಘೋಷಿಸಿದ ಮೇಲೂ ಬಂದ್ ಮಾಡುವ ಅಗತ್ಯವೇನಿತ್ತು? ಬಂದ್ ಯಾಕೆ ನಡೆಸಲಾಯಿತು ಎಂಬುದೇ ಉತ್ತರವಿಲ್ಲದ ಪ್ರಶ್ನೆಯಾಗಿ ಉಳಿದಿದೆ. ಭಜರಂಗಿಗಳ ಮೇಲೆ ನಡೆದ ಹಲ್ಲೆಗಾಗಿಯೋ ಅಥವಾ ಅಮಾಯಕ ದಲಿತನ ಹತ್ಯೆಗಾಗಿಯೇ? ಯಾವುದಕ್ಕೂ ಉತ್ತರವಿಲ್ಲ.

ಆರೋಪಿಗಳು ಜೈಲಿಗೆ :

ಕೇಂದ್ರ ಮೀಸಲು ಪಡೆಯ ಇಬ್ಬರು ಆರೋಪಿ ಪೊಲೀಸರ ಮೇಲೆ ಸೆಕ್ಷನ್ 302 ರಂತೆ ಕೊಲೆ ಪ್ರಕರಣ ಹಾಗೂ ಸಶಸ್ತ್ರ ದುರುಪಯೋಗ ಕಾಯ್ದೆ ಅ
ಪ್ರಕರಣ ದಾಖಲಿಸಿ, ಬಂಧಿಸಿ ನ್ಯಾಯಾಲ
ಹಾಜರುಪಡಿಸಿದ್ದು ನ್ಯಾಯಾಲಯವು ಆರೋಪಿ
15 ದಿನಗಳ ನ್ಯಾಯಾಂಗ ಬಂಧನ ವಿ
ಆರೋಪಿಗಳನ್ನು ಹೆಡ್‌ಕಾನ್‌ಸ್ಟೇಬಲ್, ಬಿಕ್ಷಾ
(54) ಸುವರ್ಣರಾಜ್ (26) ಎ
ಗುರುತಿಸಲಾಗಿದೆ. ಇದೀಗ ಇವರಿಗೆ ಜಾಮೀ
ದೊರೆತಿದೆ. ಕೇಂದ್ರ ಮೀಸಲು ಪಡೆಯ ಪೋಲೀ
ಬಸ್ಸಿನಲ್ಲಿ 90 ಗನ್ನುಗಳು ಗ್ರೆನೆಡ್ ಮುಂ
ಶಸ್ತ್ರಗಳಿದ್ದು, ಅದು ನಕ್ಸಲ್ ವಿರೋಧಿ ಪಡೆಯಾ
ದುಷ್ಕರ್ಮಿಗಳು ದೊಣ್ಣೆ ಕಲ್ಲುಗಳೊಂದಿಗೆ
ನಡೆಸುತ್ತಿದ್ದರು. ಒಂದೊಮ್ಮೆ ಅವರು ಬಸ್ಸಿಗೆ
ಹಚ್ಚಲು ಅವಕಾಶ ಆಗಿದ್ದಿದ್ದಲ್ಲಿ
ಅನಾಹುತವಾಗುತ್ತಿತ್ತು. ಇಂತಹ ಸನ್ನಿವೇಶ
ಗುಂಡು ಹಾರಿಸಲಾಗಿದೆ ಎಂದು ಸರ್ಕಾರ ಕೋ
ಅಫಿಡವಿಟ್ ಸಲ್ಲಿಸಿದ್ದು, ರಾಜ್ಯ ಗೃಹವ
ಪೋಲೀಸರ ಕ್ರಮ ಸಮರ್ಥಿಸಿಕೊಂಡಿದ್ದಾರೆ.
ಭಜರಂಗಿಗಳನ್ನು ಬರೀ ದುಷ್ಕರ್ಮಿಗಳು ಎನ್ನು
ಆದರೆ ಬಿಜೆಪಿ ಪಕ್ಷ ಹತ್ಯೆ ಸರಿಯಲ್ಲ ಎನ್ನು
ಮಧ್ಯೆ ದೊಂಬಿಗೆ ಪ್ರೇರಣೆ, ಹಲ್ಲೆ, ಜೀವ ಬೆದ
ಸರಕಾರಿ ಸ್ವತ್ತು ನಾಶ, ಪೊಲೀಸ್ ಕರ್ತ
ಅಡ್ಡಿ, ಪೊಲೀಸ್‌ರ ಸಮಕ್ಷಮದಲ್ಲಿ ದೊ
ನಡೆಸಿದ ಕಾರಣಕ್ಕಾಗಿ ಭಜರಂಗದಳದ ನಾ
ಭಾಸ್ಕರ ಧರ್ಮಸ್ಥಳ, ಆತನ ಸಹೋ
ಉದಯ ಸೇರಿದಂತೆ 250 ಜನರ ಮೆ
ಪ್ರಕರಣ ದಾಖಲಿಸಲಾಗಿದೆ ಮತ್ತು ಯಾ
ಮುನ್ಸೂಚನೆ ನೀಡದೆ ಲಾಠಿಚಾರ್ಜ್ ಮಾ
ಆಂಧ್ರಪಡೆಯ 15 ಪೊಲೀಸರ ಮೇಲೂ ಪ್ರ
ದಾಖಲಾಗಿದೆ.

ಮಧ್ಯಪ್ರವೇಶಿಸಿದ ಸಿಪಿಐ(ಎಂ)

ಘಟನೆ ನಡೆದ ದಿನವೇ ಬೆಳ್ತಂಗಡಿ
ರಾತ್ರಿ ಸಿಪಿಐ(ಎಂ) ಜಿಲ್ಲಾ ನಾಯಕ
ಬಿ.ಎಂ.ಭಟ್, ಶಿವಕುಮಾರ್ ಜಿಲ್ಲಾಧಿ
ವಿ.ಪೊನ್ನುರಾಜ್‌ರನ್ನು ಭೇಟಿ ಮಾಡಿ
ಕುಟುಂಬಕ್ಕೆ 10 ಲಕ್ಷ ರೂಪಾಯಿ, 5 ಎಕ್ರೆ
ಜಮೀನು, ಮನೆ ನಿರ್ಮಾಣ ಮತ್ತು ಮೃತರ
ಶಿಕ್ಷಣದ ಪೂರ್ಣ ಜವಾಬ್ದಾರಿಯನ್ನು
ನೋಡಿಕೊಳ್ಳಬೇಕು ಎಂದು ಒತ್ತಾಯಿಸಿ
ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಯವರು ಮರುದಿ
ತುರ್ತು ಪರಿಹಾರವಾಗಿ 1 ಲಕ್ಷ ರೂಪಾ
ನೀಡುತ್ತೇವೆಂದು ಮತ್ತು ಇನ್ನುಳಿದ ಬೇಡಿಕೆಗ
ತಕ್ಷಣ ಈಡೇರಿಸುವೆವೆಂದು ಭರವಸೆ ನೀಡಿ
ಬೇಡಿಕೆಗಳನ್ನು ಈಡೇರಿಸದಿದ್ದರೆ ಉಗ್ರ ಪ್ರತಿಭಟ
ಎಚ್ಚರಿಕೆ ನೀಡಲಾಯಿತು. ಮೇ 3 ರಂದು ಮೃ
ಮನೆಗೆ ಸಿಪಿಐ(ಎಂ) ನಿಯೋಗವೊಂದು ಭೇಟಿ
ಕುಟುಂಬಕ್ಕೆ ಸಾಂತ್ವನ ಹೇಳಿತು. ಮೃ
ಕುಟುಂಬದೊಂದಿಗೆ ನಿರಂತರ ಸಂಪ
ಇಟ್ಟುಕೊಳ್ಳುವ ಭರವಸೆ ನೀಡಲಾಯಿ
ನಿಯೋಗದಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕ
ಬಿ.ಎಂ.ಭಟ್, ಹರಿದಾಸ್ ತಾಲ್ಲೂ
ಮುಖಂಡರಾದ ಸುಕನ್ಯ ಡಿವೈಎಫ್‌ಐ ತಾಲ
ಕಾರ್ಯದರ್ಶಿ ಶೇಖರ.ಎಲ್, ಎಸ್‌ಎಫ್
ತಾಲ್ಲೂಕು ಕಾರ್ಯದರ್ಶಿ ಸುಜೀತ್ ಮ
ಉಪಸ್ಥಿತರಿದ್ದರು.

ಕಾವ್ಯ, ಬೆಳ್ತಂ

ಮೂರನೆ ಹಂತದ ಮತದಾನ ಮುಗಿಯುತ್ತಿದ್ದಂತೆ ಕಾಂಗ್ರೆಸ್ ಪಕ್ಷ ಚುನಾವಣೆ ನಂತರ ಎಡಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆಗಳ ಕುರಿತು ಮಾತನಾಡುತ್ತಿದೆ. ಅಂದರೆ ಇದರರ್ಥ ಚುನಾವಣೆ ಫಲಿತಾಂಶಗಳ ನಂತರ ಈಗಿರುವ ಮೈತ್ರಿ ಪಕ್ಷಗಳೊಂದಿಗೆ ಸರ್ಕಾರ ರಚಿಸಲು ಸಾಧ್ಯವಿಲ್ಲ ಎಂಬುದು ಗೋಡೆ ಮೇಲೆ ಬರೆದಷ್ಟೇ ಸ್ಪಷ್ಟವಾಗಿದೆ.

ಜಾತ್ಯಾತೀತ ಪರ್ಯಾಯ ಸರ್ಕಾರವೇ ದಾರಿ

ಭಾರತದ ರಾಜಕಾರಣ ಎರಡು ಧೃವಗಳಲ್ಲಿ ಕೇಂದ್ರೀಕೃತವಾಗಿದೆ. ಸಣ್ಣಪುಟ್ಟ, ಪ್ರಾದೇಶಿಕ ರಾಜಕೀಯ ಪಕ್ಷಗಳು ಎರಡು ಕೂಟಗಳಲ್ಲಿ ಸೇರಿ ರಾಜಕಾರಣ ಮಾಡುವುದು ಅಗತ್ಯ ಎಂದು ...ಯಿ ಕೊಚ್ಚಿಕೊಳ್ಳುವ ಮೂಲಕ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಈ ಬಾರಿ ಚುನಾವಣೆ ಪ್ರಚಾರ ಆರಂಭಿಸಿದವು. ಆದರೆ ಬಹುವೈವಿಧ್ಯತೆಯಿಂದ ಕೂಡಿರುವ ಭಾರತೀಯ ಸಮಾಜ ಈ ಧೋರಣೆಯನ್ನು ಮತ್ತೆ ಮತ್ತೆ ಸುಳ್ಳಾಗಿಸಿದೆ. ದೇಶದ ರಾಜಕಾರಣ ಎರಡು ಧೃವಗಳಿಂದಲ್ಲ, ಬಹುಧೃವದಿಂದ ಕೂಡಿದೆ ಎಂಬುದನ್ನು ಮತ್ತೆ ಮತ್ತೆ ಸಾಬೀತುಪಡಿಸಿದೆ.


ಬಹಳ ವರ್ಷಗಳಿಂದ ಬಿಜೆಪಿಯೊಂದಿಗೆ ನಿಕಟ ಮೈತ್ರಿ ಹೊಂದಿದ್ದ ಪಕ್ಷಗಳು ಎನ್‌ಡಿಎ ಕೂಟವನ್ನು ತ್ಯಜಿಸುವ ಮೂಲಕ ಇದು ರುಜುವಾತಾಗಿದೆ. ಒರಿಸ್ಸಾದಲ್ಲಿ ಬಿಜು ಜನತಾದಳ ಎನ್‌ಡಿಎ ತ್ಯಜಿಸಿದ್ದು ಬಿಜೆಪಿಗೆ ದಿಗ್ಭ್ರಮೆ ಹುಟ್ಟಿಸುವಂತಹ ಬೆಳವಣಿಗೆ. ಯುಪಿಎ ಮೈತ್ರಿಕೂಟದ ಹಲವು ಪಕ್ಷಗಳ ನಾಯಕರು ಕೇಂದ್ರದಲ್ಲಿ ಸಚಿವರಾಗಿ ಮುಂದುವರೆದಿದ್ದರೂ ...ಗ್ರೆಸ್ ನೇತೃತ್ವದ ಕೂಟವನ್ನು ತ್ಯಜಿಸಿ ಹೊಸ ...ಪುಗಳನ್ನು ಮಾಡಿಕೊಂಡಿದ್ದಾರೆ. ಹಲವರು ವಿಶ್ಲೇಷಿಸುವಂತೆ ಈ ಬೆಳವಣಿಗೆಗಳು ಪ್ರಾದೇಶಿಕ ಪಕ್ಷಗಳ ಅವಕಾಶವಾದಿ ರಾಜಕಾರಣವಲ್ಲ. ಬದಲಾಗಿ ತನ್ನದೇ ಜನಸಮುದಾಯ ಪ್ರಸಕ್ತ ಆರ್ಥಿಕ ಹೊರೆಯಿಂದ ಹೊರಬರಲು ಪ್ರಯತ್ನಿಸುತ್ತಿರುವುದರ ಪ್ರತಿಬಿಂಬವಾಗಿದೆ. ಅಂದರೆ ಜನತೆ ಪರ್ಯಾಯ ಜನಪರ ನೀತಿಗಳಿಗಾಗಿ ಹುಡುಕಾಟ ನಡೆಸುತ್ತಿರುವುದರ ಫಲವಾಗಿದೆ ಎಂಬುದನ್ನು ತೋರಿಸುತ್ತದೆ. ಹಾಗಿದ್ದ ಮೇಲೆ ಪರ್ಯಾಯ ಎಂದರೇನು. ಭಾರತದ ರಾಜಕೀಯ ಪಕ್ಷಗಳು ಇದನ್ನು ಸಮಗ್ರವಾಗಿ ಅರ್ಥೈಸುವ ಅಗತ್ಯವಿದೆ.

ನೀತಿಯೇ ನೈಜ ಪರ್ಯಾಯ

ಭಾರತದಲ್ಲಿ ಎಡಪಕ್ಷಗಳು ಮಾತ್ರ ಪರ್ಯಾಯ ನೀತಿಯನ್ನು ...ಸುವುದರೊಂದಿಗೆ ಅನುಸರಿಸುತ್ತಾ ಬಂದಿವೆ. ಈ ಹಿಂದಿನ ಅನುಭವವನ್ನು ಒಮ್ಮೆ ...ಲುಕು ಹಾಕಿದರೆ ಇಂತಹ ಪರ್ಯಾಯ ...ಗಳು ಮಾತ್ರವೇ ಕಾಂಗ್ರೆಸ್ ಮತ್ತು ಬಿಜೆಪಿಯೇತರ ರಾಜಕೀಯ ಪರ್ಯಾಯಗಳನ್ನು ನೀಡಲು ಸಾಧ್ಯವಾಗಿರುವುದನ್ನು ಕಾಣಬಹುದು. ಇದು ಇಂದಿನ ಅಗತ್ಯವೂ ಆಗಿದೆ. ಹಾಗಾಗಿ ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸೇತರ ಜಾತ್ಯತೀತ ಪಕ್ಷ ಸರ್ಕಾರ ರಚಿಸುವುದು ತುಂಬಾ ಅಗತ್ಯ. ಈ ಗುರಿ ಸಾಧನೆಗಾಗಿ ಎಡಪಕ್ಷಗಳು ತಮ್ಮ ಗಮನ ಕೇಂದ್ರೀಕರಿಸಿವೆ.

ಮೂರನೆ ಹಂತದ ಮತದಾನ ಮುಗಿಯುತ್ತಿದ್ದಂತೆ ಕಾಂಗ್ರೆಸ್ ಪಕ್ಷ ಚುನಾವಣೆ ನಂತರ ಎಡಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಾಧ್ಯತೆಗಳ ಕುರಿತು ಮಾತನಾಡುತ್ತಿದೆ. ಅಂದರೆ ಇದರರ್ಥ ಚುನಾವಣೆ ಫಲಿತಾಂಶಗಳ ನಂತರ ಈಗಿರುವ ಮೈತ್ರಿ ಪಕ್ಷಗಳೊಂದಿಗೆ ಸರ್ಕಾರ ರಚಿಸಲು ಸಾಧ್ಯವಿಲ್ಲ ಎಂಬುದು ಗೋಡೆ ಮೇಲೆ ಬರೆದಷ್ಟೇ ಸ್ಪಷ್ಟವಾಗಿದೆ.

ಭಾರತದ ಪ್ರಸಕ್ತ ರಾಜಕೀಯ ಸನ್ನಿವೇಶದಲ್ಲಿ ಎಡಪಕ್ಷಗಳ ಪಾತ್ರದ ಕುರಿತು ಇತರ ವಲಯಗಳಲ್ಲೂ ಹೆಚ್ಚಿನ ಚರ್ಚೆಗಳು ಮೂಡಿಬರುತ್ತಿವೆ. ಬಿಜೆಪಿಯ ಈಗಿನ ಮೈತ್ರಿ ಪಕ್ಷವಾದ ಜೆಡಿ(ಯು) ಮತ್ತು ಕಾಂಗ್ರೆಸ್ ಮೈತ್ರಿ ಪಕ್ಷವಾದ ಎನ್‌ಸಿಪಿ ಸೇರಿದಂತೆ ಹಲವಾರು ಪಕ್ಷಗಳು ಎಡಪಕ್ಷಗಳ ಮಹತ್ವದ ಪಾತ್ರದ ಕುರಿತು ಹೇಳುತ್ತಿವೆ. ಇದರರ್ಥ ಭವಿಷ್ಯದಲ್ಲಿ ರಾಜಕೀಯ ಪಕ್ಷಗಳ ನಡುವೆ ಮರು ಹೊಂದಾಣಿಕೆ ಏರ್ಪಟ್ಟು ಹೊಸ ಜಾತ್ಯತೀತ ಸರ್ಕಾರ ರಚನೆಗೆ ನಾಂದಿಯಾಗಲಿದೆ ಎಂಬುದಾಗಿದೆ. ದೇಶದ ಸಮಕಾಲೀನ ರಾಜಕಾರಣದಲ್ಲಿ ಇದು ಹೊಸದೇನೂ ಅಲ್ಲ. ಇದೇ ಸಂಪಾದಕೀಯದಲ್ಲಿ ಈ ಹಿಂದೆ ಉಲ್ಲೇಖಿಸಿದಂತೆ 1996ರ ಚುನಾವಣೆಗಳ ನಂತರ ಸಂಯುಕ್ತ ರಂಗವನ್ನು ರಚಿಸಲಾಗಿತ್ತು. 1998ರ ಚುನಾವಣೆಗಳ ನಂತರ ಎನ್‌ಡಿಎ ಮತ್ತು 2004ರ ಚುನಾವಣೆಗಳ ನಂತರ ಯುಪಿಎ ರಚನೆಗೊಂಡಿವೆ. ಹಾಗಾಗಿ 2009ರ ಚುನಾವಣೆಗಳ ನಂತರವೂ ಇಂತದೇ ಮೈತ್ರಿ ಅಸ್ತಿತ್ವಕ್ಕೆ ಬರಲಿದೆ.



ಅಣು ಒಪ್ಪಂದದ ಹೂರಣ ಬಯಲಾಗಿದೆ

ಅಮೆರಿಕ-ಭಾರತದ ನಡುವಣ ಅಣು ಒಪ್ಪಂದ ದೇಶದ ಹಿತಾಸಕ್ತಿಯಿಂದ ಪ್ರಮುಖವಾಗಿದೆ ಎಂದು ಸಮರ್ಥಿಸಿಕೊಳ್ಳುತ್ತಾ ಕಾಂಗ್ರೆಸ್ ಪಕ್ಷ ಎಡಪಕ್ಷಗಳೊಂದಿಗೆ ಸಂಧಾನವನ್ನೂ ಮುಂದುವರೆಸಿತ್ತು. ಆದರೂ ಯುಪಿಎ ಏಕಪಕ್ಷೀಯವಾಗಿ ಅಣು ಒಪ್ಪಂದಕ್ಕೆ ಸಹಿ ಹಾಕಲು ಮುಂದಾಯಿತು. ಇದು ದೇಶದ ಹಿತಾಸಕ್ತಿಗೆ ಮಾರಕವಾಗಿದೆ ಎಂಬ ಕಾರಣದಿಂದಾಗಿ ಎಡಪಕ್ಷಗಳು ನೀಡಿದ್ದ ಬಾಹ್ಯ ಬೆಂಬಲವನ್ನು ಹಿಂಪಡೆದವು. ನಂತರದಲ್ಲಿ ಅಣು ಒಪ್ಪಂದಕ್ಕೆ ಸಂಬಂಧಿಸಿದಂತೆ ಅಮೆರಿಕ ನೀಡಿದ ಹೇಳಿಕೆಗಳು ಎಡಪಕ್ಷಗಳು ಬಾಹ್ಯ ಬೆಂಬಲ ಹಿಂಪಡೆದ ಕ್ರಮ ಸರಿ ಎಂಬುದನ್ನು ಪುಷ್ಠೀಕರಿಸಿವೆ. ಎಡಪಕ್ಷಗಳು ಸುದ್ದಿಗೋಷ್ಠಿಯಲ್ಲಿ ಮಾತನಾಡುವ ಮೊದಲೇ ಭಾರತ, ಇಸ್ರೇಲ್, ಪಾಕಿಸ್ತಾನ ಮತ್ತು ಉತ್ತರ ಕೊರಿಯಾ ಸೇರಿದಂತೆ ಇಡೀ ಜಗತ್ತು 2010ರ ಅಣ್ವಸ್ತ್ರ ಪ್ರಸರಣ ನಿಷೇಧ (ಎನ್‌ಪಿಟಿ) ಒಪ್ಪಂದಕ್ಕೆ ಬದ್ಧವಾಗಿರಬೇಕೆಂಬುದೇ ಅಮೆರಿಕದ ಮುಖ್ಯ ಗುರಿಯಾಗಿದೆ ಎಂದು 2010ರ ಎನ್‌ಪಿಟಿ ಪರಿಶೀಲನಾ ಸಭೆಯಲ್ಲಿ ಅಮೆರಿಕ ವಿದೇಶಾಂಗ ಸಹಾಯಕ ಕಾರ್ಯದರ್ಶಿ ರೋಸ್ ಗೋಟೆಮೊಲರ್ ಪ್ರತಿಪಾದಿಸಿದ್ದರು. ಭಾರತ ಇತ್ತೀಚಿನ ದಿನಗಳಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದ್ದರೂ ಎರಡೂ ದೇಶಗಳ ನಡುವಿನ ಅಣು ಒಪ್ಪಂದ ಭಾರತವನ್ನು ಎನ್‌ಪಿಟಿ ಸನಿಹಕ್ಕೆ ತಂದಿದೆ. ಭಾರತವನ್ನು ಎನ್‌ಪಿಟಿ ಸನಿಹಕ್ಕೆ ತರುವುದೇ ಅಮೆರಿಕ ವಿದೇಶಾಂಗ ನೀತಿಯ ಪ್ರಮುಖ ಗುರಿಯಾಗಿದೆ



ಎಂದು ರೋಸ್ ಹೇಳಿದ್ದರು. ಫಿಸೈಲ್ ಮೆಟೀರಿಯಲ್ ಸರಬರಾಜು ನಿಷೇಧ ಒಪ್ಪಂದ ಮತ್ತು ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದ (ಸಿಟಿಬಿಟಿ) ಮತ್ತು ಅಣ್ವಸ್ತ್ರ ಸಾಧನಗಳ ಸರಬರಾಜು ನಿಷೇಧದಂತಹ ಒಪ್ಪಂದಗಳ ಪರಿಶೀಲನೆಗೆ ಭಾರತ ಬದ್ಧವಾಗಿರುವುದನ್ನು ಆಕೆ ಮುಕ್ತ ಕಂಠದಿಂದ ಶ್ಲಾಘಿಸಿದ್ದರು.

ಈಗಾಗಲೇ ಅಣ್ವಸ್ತ್ರಗಳನ್ನು ಹೊಂದಿರುವ ಅಮೆರಿಕ, ಬ್ರಿಟನ್, ರಷ್ಯಾ, ಫ್ರಾನ್ಸ್ ಮತ್ತು ಚೀನಾ (ಪಿ-5) ದೇಶಗಳ ಏಕಸ್ವಾಮ್ಯಕ್ಕೆ ಯಾವುದೇ ಧಕ್ಕೆಯಾಗದಿರುವ ಮತ್ತು ಇತರ ಎಲ್ಲ ದೇಶಗಳು ಅಣ್ವಸ್ತ್ರ ಹೊಂದುವುದನ್ನು ನಿಷೇಧಿಸುವ ಎನ್‌ಪಿಟಿ ಮತ್ತು ಸಿಟಿಬಿಟಿ ಒಪ್ಪಂದಗಳನ್ನು ಭಾರತ ದೀರ್ಘಕಾಲದಿಂದಲೂ ವಿರೋಧಿಸುತ್ತಾ ಬಂದಿದೆ.

ವಾಜಪೇಯಿ ಅಧಿಕಾರದ ಅವಧಿಯಲ್ಲಿ ಭಾರತದ ಅಂದಿನ ವಿದೇಶಾಂಗ ಸಚಿವರು ಅಮೆರಿಕದ ವಿದೇಶಾಂಗ ಖಾತೆ ರಾಜ್ಯ ಸಚಿವರೊಂದಿಗೆ ಹಲವಾರು ಸುತ್ತಿನ ಮಾತುಕತೆಗಳನ್ನು ನಡೆಸುವ ಮೂಲಕ ಸಿಟಿಬಿಟಿಗೆ ಅನುಮೋದನೆ ನೀಡುವ ಕುರಿತು ಭಾರತ ಹೊಂದಿದ್ದ ನಿಲುವನ್ನು ದುರ್ಬಲಗೊಳಿಸಲಾಗಿತ್ತು. ಅದೃಷ್ಟವಶಾತ್ ಅಮೆರಿಕ ಸಂಸತ್ ಇದಕ್ಕೆ ಅನುಮೋದನೆ ನೀಡದಿದ್ದರಿಂದ ಒಪ್ಪಂದ ಏರ್ಪಡಲಿಲ್ಲ.

ನಿಶಸ್ತ್ರೀಕರಣದ ಆಶಯಕ್ಕೆ ವಿರುದ್ಧ

ಈಗ ಪರಿಸ್ಥಿತಿ ತುಂಬಾ ಸ್ಪಷ್ಟವಾಗಿದೆ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಭಾರತ-ಅಮೆರಿಕ ನಡುವಣ ಅಣು ಒಪ್ಪಂದಕ್ಕೆ ಸಹಿ ಮಾಡುವ ಮೂಲಕ ಅಮೆರಿಕದ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ಮಣಿದಿದ್ದು ಎನ್‌ಪಿಟಿಗೆ ಬದ್ಧವಾಗಿರುವಂತೆ ಮಾಡಲಾಗಿದೆ. ಇಡೀ ಜಗತ್ತನ್ನು ಅಣ್ವಸ್ತ್ರ ಮುಕ್ತಗೊಳಿಸಬೇಕೆಂಬ ಭಾರತದ ದೀರ್ಘಕಾಲೀನ ಆಶಯಕ್ಕೆ ಇದು ಸಂಪೂರ್ಣ ವಿರೋಧವಾಗಿದೆ. ಪಿ-5 ದೇಶಗಳು ಅಣ್ವಸ್ತ್ರಗಳ ಮೇಲೆ ಸಂಪೂರ್ಣ ಏಕಸ್ವಾಮ್ಯ ಸಾಧಿಸುವುದಕ್ಕೆ ವ್ಯಕ್ತಪಡಿಸುತ್ತಿದ್ದ ವಿರೋಧಕ್ಕೆ ತದ್ವಿರುದ್ಧವಾಗಿದೆ.

ವಾಸ್ತವವಾಗಿ ರಾಜೀವ್ ಗಾಂಧಿ ಅಧಿಕಾರ ಅವಧಿಯಲ್ಲಿ ಇಡೀ ವಿಶ್ವದಿಂದಲೇ ಅಣ್ವಸ್ತ್ರಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕಾಲಾವಧಿಯನ್ನು ನಿಗದಿಪಡಿಸಿ ವಿಶ್ವಸಂಸ್ಥೆಯ ಮುಂದಿಟ್ಟಿದ್ದರು. ಈ ಗುರಿ ಸಾಧಿಸುವ ತನಕ ಭಾರತ ಯಾವುದೇ ಕಾರಣಕ್ಕೂ ಎನ್‌ಪಿಟಿ ಮತ್ತು ಸಿಟಿಬಿಟಿಗೆ ಅನುಮೋದನೆ ನೀಡುವುದಿಲ್ಲ ಎಂತಲೂ ಪ್ರಕಟಿಸಿದ್ದರು. ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರ ಭಾರತದ ಈ ನಿಲುವಿಗೆ ತಿಲಾಂಜಲಿ ಕೊಟ್ಟಿತು. ಭಾರತವನ್ನು ಅಮೆರಿಕದ ಸಹ ಪಾಲುದಾರ ದೇಶವನ್ನಾಗಿ ಮಾಡಿ ಕಾರ್ಯತಂತ್ರ ಒಪ್ಪಂದಕ್ಕೆ ಮುಂದಾಯಿತು.

ಈಗಲೂ ಸಹ ಭಾರತ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುವ ಮೂಲಕ ಅಂತಾರಾಷ್ಟ್ರೀಯ ಸಮುದಾಯದಲ್ಲಿ ತನ್ನ ಘನತೆಯನ್ನು ರಕ್ಷಿಸಿಕೊಳ್ಳಬೇಕಾಗಿದೆ. ಹಾಗಾಗಿ ಈ ಚುನಾವಣೆಗಳ ನಂತರ ಕೇಂದ್ರದಲ್ಲಿ ಜಾತ್ಯತೀತ ಸರ್ಕಾರ ರಚಿಸುವುದು ತುಂಬಾ ಮುಖ್ಯವಾಗಿದೆ. ಪರ್ಯಾಯ ಆರ್ಥಿಕ ನೀತಿಗಳನ್ನು ಪಾಲಿಸುವುದರೊಂದಿಗೆ, ಪರಿಣಾಮಕಾರಿಯಾದ ಸಾಮಾಜಿಕ ನ್ಯಾಯವನ್ನು ಸ್ಥಾಪಿಸಲು, ಕೋಮವಾದಿ ಮತ್ತು ಭಯೋತ್ಪಾದಕ ಶಕ್ತಿಗಳನ್ನು ನಿಗ್ರಹಿಸಲು ಕೇಂದ್ರದಲ್ಲಿ ಕಾಂಗ್ರೆಸ್ಸೇತರ ಜಾತ್ಯತೀತ ಸರ್ಕಾರವನ್ನು ರಚಿಸುವುದು ಪ್ರಸಕ್ತ ಸಂದರ್ಭದ ಪ್ರಮುಖ ಗುರಿಯಾಗಿದೆ. ○

ತಿದ್ದುಪಡಿ

ಕಳೆದ ವಾರದ ಪತ್ರಿಕೆಯಲ್ಲಿ ಪುಟ 10 ರಲ್ಲಿ ಪ್ರಕಟವಾದ 'ಹೇಳಿ ಪಾಪಿ ದೇಹದಲ್ಲಿರುವ ದೇವರುಗಳ ಸಂಖ್ಯೆ ಎಷ್ಟು' ಬರಹದ ಲೇಖಕರು ಯು.ಬಸವರಾಜು.

ಗುರುಶಾಂತ್ ಶಸ್ತ್ರಚಿಕಿತ್ಸಾ ನಿಧಿಯ ಮೊತ್ತ ಮತ್ತು ದಿನಾಂಕ ಎರಡರಲ್ಲೂ ತಪ್ಪುಗಳಾಗಿದ್ದು, ...ಗಿನ ಸಂಚಿಕೆಯಲ್ಲಿ ಸರಿಯಾದ ವಿವರ ನೀಡಲಾಗಿದೆ.


- ಸಂ.

ಜನಶಕ್ತಿ ಕನ್ನಡ ವಾರಪತ್ರಿಕೆ

ಮೇ 17, 2009

ಕಾರ್ಲ್‌ಮಾರ್ಕ್ಸ್ ನುಡಿದ ಭವಿಷ್ಯ ನಿಜವಾಗುತ್ತಿದೆ

ನಿತ್ಯಾನಂದಸ್ವಾಮಿ



ಇಂದು ಅತ್ಯಂತ ಆತಂಕಕಾರಿಯಾಗಿ ಹಬ್ಬುತ್ತಿರುವ ವಿಶ್ವ ಆರ್ಥಿಕ ಬಿಕ್ಕಟ್ಟಿನಲ್ಲಿ ಕಾರ್ಲ್ ಮಾರ್ಕ್ಸ್ ಸುಮಾರು 150ವರ್ಷಗಳ ಹಿಂದೆ ನುಡಿದ ಭವಿಷ್ಯ ಇಂದು ನಿಜವಾಗುತ್ತಿದೆ. ಮಾರ್ಕ್ಸ್ ಬರೆದ 'ಬಂಡವಾಳ' ಮತ್ತು 'ಕಮ್ಯೂನಿಸ್ಟ್ ಪ್ರಣಾಳಿಕೆ' ಎಂಬ ಎರಡು ಗ್ರಂಥಗಳ ಮಾರಾಟ ಹಲವು ಪಟ್ಟು ಹೆಚ್ಚಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ.

'ವಿಶ್ವದ ಕಾರ್ಮಿಕರೇ, ಒಗ್ಗಟ್ಟಾಗಿ, ಶೋಷಣೆಯ ಸಂಕೋಲೆಗಳನ್ನು ಬಿಟ್ಟು ನಿಮಗೆ ಕಳೆದುಕೊಳ್ಳಲು ಬೇರೇನೂ ಇಲ್ಲ' ಎಂದು ಶ್ರಮ ಜೀವಿಗಳಿಗೆ ವಿಮೋಚನೆಯ ದಾರಿಯನ್ನು ಹುಡುಕಿಕೊಟ್ಟ ಕ್ರಾಂತಿಕಾರಿ ಸಮಾಜ ವಿಜ್ಞಾನಿ ಕಾರ್ಲ್‌ಮಾರ್ಕ್ಸ್ ಹುಟ್ಟಿದ್ದು 1818 ರ ಮೇ 5 ರಂದು, ಮುಂದೆ 1883 ರ ಮಾರ್ಚ್ 14 ರಂದು ಅವರು ನಿಧನರಾದರು. ಲಂಡನ್‌ನ ಹೈಗೇಟ್ಸ್ ಸ್ಮಶಾನದಲ್ಲಿ ಮಾರ್ಕ್ಸ್ ಅವರ ಕಳೇಬರವನ್ನು ಅವರ ಪತ್ನಿ ಜೆನ್ನಿ ಅವರ ಸಮಾಧಿಯ ಸಮೀಪದಲ್ಲೇ ಮಣ್ಣು ಮಾಡಲಾಯಿತು. ಮಾರ್ಕ್ಸ್‌ವಾದದೊಂದಿಗೆ ಕಾರ್ಲ್‌ಮಾರ್ಕ್ಸ್ ವಿಶ್ವದ ಕಾರ್ಮಿಕರ ನಡುವೆ ಜೀವಂತವಾಗಿರುವುದನ್ನು ಕಂಡು ವಿಶ್ವ ಬಂಡವಾಳಗಾರರು ಹತಾಶರಾಗಿದ್ದರು. ಮುಂದೆ 1991ರಲ್ಲಿ ಸೋವಿಯತ್ ಯೂನಿಯನ್ ಪತನಗೊಂಡಾಗ 'ಮಾರ್ಕ್ಸ್‌ವಾದ ಸತ್ತು ಹೋಯಿತು. ಬಂಡವಾಳಶಾಹಿ ವ್ಯವಸ್ಥೆಯೇ ಮಾನವ ಇತಿಹಾಸದ ಅಂತಿಮಘಟ್ಟ' ಎಂದು ಬಂಡವಾಳಶಾಹಿ ಸಿದ್ಧಾಂತಿಗಳು ಕುಣಿದಾಡಿದ್ದರು. ಆದರೆ ಈಗ ಮತ್ತೆ ವಿಶ್ವ ಬಂಡವಾಳಶಾಹಿ ವ್ಯವಸ್ಥೆ ಹಿಂದೆಂದು ಕಂಡರಿಯದ ಬಾರಿ ಬಿಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿರುವ ಅಮೇರಿಕ, ಯುರೋಪ್ ಮೊದಲಾದ ದೇಶಗಳಲ್ಲಿ ಜನ ಕಾರ್ಲ್ ಮಾರ್ಕ್ಸ್ ಬರಹಗಳಿಗೆ ಹಿಂತಿರುಗುತ್ತಿದ್ದಾರೆ.

ಜರ್ಮನಿಯಲ್ಲಿ ಕಾರ್ಲ್ ಮಾರ್ಕ್ಸ್ ಅವರ ಪುಸ್ತಕಗಳ ಮಾರಾಟ ಶೇ.300 ರಷ್ಟು ಹೆಚ್ಚಾಗಿದೆ. ಮಾರ್ಕ್ಸ್ ಅವರ ಮೇರುಕೃತಿ 'ಬಂಡವಾಳ' ದ 1500 ಪ್ರತಿಗಳು 2008ರಲ್ಲಿ ಮಾರಾಟವಾಗಿವೆ ಎಂದು ವರದಿಯಾಗಿದೆ. ಮಾರ್ಕ್ಸ್‌ರವರ ಹುಟ್ಟೂರು ಟ್ರಾಯರ್ ಅನ್ನು ನೋಡಲು ಬರುತ್ತಿರುವ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಏರುತ್ತಿದೆ. ಒಬ್ಬ ಚಲನಚಿತ್ರ ನಿರ್ಮಾಪಕ ಅಲೆಕ್ಸಾಂಡರ್ ಕ್ಲೂಗೆ ಎಂಬುವರು ಮಾರ್ಕ್ಸ್ 'ಬಂಡವಾಳ' ಕೃತಿಯನ್ನು ಚಲನಚಿತ್ರವಾಗಿ ಪರಿವರ್ತಿಸಲು ಹೊರಟಿದ್ದಾರೆ. ಕ್ಯಾಂಟರ್‌ಬರಿಯ ಆರ್ಚ್ ಬಿಷಪ್ ರೋವನ್ ವಿಲಿಯಮ್ಸ್ ಅವರು ಮಾರ್ಕ್ಸ್‌ರವರ ಬಂಡವಾಳದ ವಿಮರ್ಶೆಯನ್ನು ಕೊಂಡಾಡುತ್ತಾ 'ಅನಿಯಂತ್ರಿತ ಬಂಡವಾಳವು ಎಷ್ಟೊಂದು ಅನಾಹುತಕಾರಿಯಾಗಿದೆ ಎಂಬುದನ್ನು ಮಾರ್ಕ್ಸ್ ಬಹಳ ಹಿಂದೆಯೇ ಗುರುತಿಸಿದ್ದಾರೆ' ಎಂದು ಹೇಳಿದ್ದಾರೆ. ಪೋಪ್‌ಸಹ ಬಂಡವಾಳದ ಮಹಾನ್ ವಿಮರ್ಶಾತ್ಮಕ ಗುಣವನ್ನು ಹೊಗಳಿದ್ದಾರೆ. ಮುಕ್ತ ಮಾರುಕಟ್ಟೆಯ ಪರವಾಗಿರುವ 'ದಿ ಟೈಮ್ಸ್' ಮತ್ತು 'ದ ಡೈಲಿ ಟೆಲಿಗ್ರಾಫ್' ಎಂಬ ಬ್ರಿಟಿಷ್ ಪತ್ರಿಕೆಗಳು ಸಹ ಒಮ್ಮಿಂದೊಮ್ಮೆಲೆ ಮಾರ್ಕ್ಸ್‌ರವರ ಕುರಿತು ಆಸಕ್ತವಾಗಿವೆ.

ಪ್ರಸಕ್ತ ಕಾಲಘಟ್ಟದಲ್ಲಿ ವಿಶ್ವ ಹಣಕಾಸು ಬಂಡವಾಳದ ಕೇಂದ್ರವಾಗಿರುವ ಅಮೇರಿಕಾದಲ್ಲಿ ಸ್ಫೋಟಗೊಂಡು ವಿಶ್ವದಾದ್ಯಂತ ಹರಡುತ್ತಿರುವ ವಿಶ್ವ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಿಶ್ವದ ಗಮನ ಕಾರ್ಲ್‌ಮಾರ್ಕ್ಸ್‌ರವರ ಬರಹಗಳ ಹೊರಳುತ್ತಿದೆ. 'ಮಾರ್ಕ್ಸ್ ಅಂದು ಸರಿಯಾಗಿಯೇ ಹೇಳಿರಬಹುದಾ' ಎಂಬ ಆತ್ಮಾವಲೋಕನಕ್ಕೆ ಇದು ಎಡೆ ಮಾಡಿಕೊಟ್ಟಿದೆ.


"ಬಂಡವಾಳಶಾಹಿ ಪದ್ಧತಿ ಬಿಕ್ಕಟ್ಟುಗ್ರಸ್ತವಾಗಿದೆ"

ಇಂದು ಅತ್ಯಂತ ಆತಂಕಕಾರಿಯಾಗಿ ಹಬ್ಬುತ್ತಿರುವ ವಿಶ್ವ ಆರ್ಥಿಕ ಬಿಕ್ಕಟ್ಟಿನಲ್ಲಿ ಕಾರ್ಲ್ ಮಾರ್ಕ್ಸ್ ಸುಮಾರು 150ವರ್ಷಗಳ ಹಿಂದೆ ನುಡಿದ ಭವಿಷ್ಯ ಇಂದು ನಿಜವಾಗುತ್ತಿದೆ. ಮಾರ್ಕ್ಸ್ ಬರೆದ 'ಬಂಡವಾಳ' ಮತ್ತು 'ಕಮ್ಯೂನಿಸ್ಟ್ ಪ್ರಣಾಳಿಕೆ' ಎಂಬ ಎರಡು ಗ್ರಂಥಗಳ ಮಾರಾಟ ಹಲವು ಪಟ್ಟು ಹೆಚ್ಚಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಆಧುನಿಕ ಸಮಾಜದ ಚಲನೆಯ ಆರ್ಥಿಕ ನಿಯಮವನ್ನು ಕಂಡು ಹುಡುಕಿದ್ದು ಕಾರ್ಲ್ ಮಾರ್ಕ್ಸ್‌ರವರ ಅತಿ ದೊಡ್ಡ ಕೊಡುಗೆಯಾಗಿದೆ. ಆಧುನಿಕ ಸಮಾಜವೆಂದರೆ ಬಂಡವಾಳಶಾಹಿ ಸಮಾಜ, ಮಾರ್ಕ್ಸ್‌ರವರು 'ಬಂಡವಾಳ' ಎಂಬ ತಮ್ಮ ಮೇರು ಕೃತಿಯಲ್ಲಿ ಬಂಡವಾಳದ ಉಗಮ, ಅದರ ಬೆಳವಣಿಗೆ, ಬಿಕ್ಕಟ್ಟು ಮತ್ತು ವಿನಾಶದ ನಿಯಮಗಳನ್ನು ಬಿಚ್ಚಿಟ್ಟರು. ಆ ಮೂಲಕ ಬಂಡವಾಳಶಾಹಿ ಪದ್ಧತಿಯು ಶಾಶ್ವತವಲ್ಲವೆಂದೂ ಸಮಾಜವಾದವು ಅದನ್ನು ಸ್ಥಾನಪಲ್ಲಟ ಮಾಡಲಿದೆ ಎಂದು ಅವರು ಸಾಬೀತುಪಡಿಸಿದರು.

'ಬಂಡವಾಳ' ಮಾರ್ಕ್ಸ್‌ರವರ ಇಡೀ ಬದುಕಿನ ಸಾಧನೆಯಾಗಿದೆ. ಇದರ ರಚನೆಗಾಗಿ 1840 ರಿಂದ ಸುಮಾರು 43 ವರ್ಷ ಅವರು ಶ್ರಮಿಸಿದ್ದಾರೆ. ಅವರ ಸ್ನೇಹಿತ ಫ್ರೆಡ್ರಿಕ್ ಏಂಗೆಲ್ಸ್ ಸತತ ನೆರವು ನೀಡಿದ್ದಾರೆ. ಲೆನಿನ್ ಅವರ ಪ್ರಕಾರ 'ಬಂಡವಾಳ' ಅವರಿಬ್ಬರ ಅಮರ ಕೃತಿ. ಶೋಷಕ ಬಂಡವಾಳಗಾರರ ಮೇಲೆ ಎಸೆಯಲಾದ ಅತ್ಯಂತ ಭಯಂಕರವಾದ ಕ್ಷಿಪಣಿ ಅದು ಎಂದು ಏಂಗೆಲ್ಸ್ ಅದನ್ನು ವರ್ಣಿಸಿದ್ದಾರೆ. ಬಂಡವಾಳಶಾಹಿ ಶೋಷಣೆಯನ್ನು ಅತ್ಯಂತ ಪ್ರಬುದ್ಧವಾಗಿ ಅದು ಬಯಲಿಗೆಳೆಯುತ್ತದೆ. 'ಬಂಡವಾಳಶಾಹಿ ಉತ್ಪಾದನೆಯ ಪರಾಮರ್ಶೆ' ಎಂಬ ಉಪಶೀರ್ಷಿಕೆಯನ್ನು ಅದು ಹೊಂದಿದೆ. ಬಂಡವಾಳಗಾರರ ಶೋಷಣೆಯ ವಿರುದ್ಧ ಹೋರಾಡುತ್ತಿರುವ ಕಾರ್ಮಿಕ ವರ್ಗಕ್ಕೊಂದು ಸೈದ್ಧಾಂತಿಕ ಅಸ್ತ್ರವನ್ನು ಅದು ಒದಗಿಸಿತು.

ಮಾರ್ಕ್ಸ್‌ರವರ ವಿಶ್ಲೇಷಣೆಯ ಪ್ರಕಾರ ಬಂಡವಾಳಶಾಹಿ ಪದ್ಧತಿಯು ಬಿಕ್ಕಟ್ಟು ಗ್ರಸ್ತವಾಗಿದೆ. ಈ ಬಿಕ್ಕಟ್ಟಿಗೆ ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ಅಂತರ್ಗತವಾಗಿರುವ ವೈರುಧ್ಯಗಳು, ವಿರೋಧಾಭಾಸಗಳೇ ಕಾರಣವಾಗಿವೆ. ಬಂಡವಾಳಶಾಹಿಯ ಬೆಳವಣಿಗೆಯೊಂದಿಗೆ ಅದರೊಳಗಿನ ವೈರುಧ್ಯಗಳೂ ಬೆಳೆಯುತ್ತವೆ. ಉತ್ಪಾದನೆಯ ಸಾಮಾಜಿಕ ಸ್ವರೂಪ ಮತ್ತು ಸೊತ್ತುಗಳ ಖಾಸಗಿ ವಿನಿಯೋಗವೇ ಬಂಡವಾಳಶಾಹಿ ಪದ್ಧತಿಯ ಪ್ರಮುಖ



ವೈರುಧ್ಯವಾಗಿದೆ. ಈ ವೈರುಧ್ಯವು ಬಂಡವಾಳಶಾಹಿ ಪದ್ಧತಿಯನ್ನು ಆಗಾಗ ಅಸ್ವಸ್ಥಗೊಳಿಸುತ್ತದೆ.

ಮಾರ್ಕ್ಸ್ ಮತ್ತು ಏಂಗೆಲ್ಸ್‌ರು ಬಂಡವಾಳಶಾಹಿ ಬಿಕ್ಕಟ್ಟುಗಳ ಬಗ್ಗೆ ಅಧ್ಯಯನ ನಡೆಸುತ್ತಿರುವಾಗಲೇ ಅವುಗಳನ್ನು ಕಣ್ಣಾರೆ ಕಂಡಿದ್ದರು. 1857 ರಲ್ಲಿ ಉಂಟಾದ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಮಾರ್ಕ್ಸ್ ಅವರು ಏಂಗೆಲ್ಸರಿಗೆ ಪತ್ರವೊಂದನ್ನು ಬರೆಯುತ್ತಾ 'ಅಮೇರಿಕಾದ ಆರ್ಥಿಕತೆಯ ಬಿಕ್ಕಟ್ಟು ನೋಡಲು ಸಂತಸಕರವಾಗಿದೆಯಲ್ಲದೆ ಅದು ಇಲ್ಲಿಗೆ ಮುಗಿಯಲಾರದು' ಎನ್ನುತ್ತಾರೆ.

ಹಣಕಾಸು ಬಂಡವಾಳದ ಸಟ್ಟಾಕೋರ ಪ್ರವೃತ್ತಿ

ಮಾರ್ಕ್ಸ್‌ರವರು ತಮ್ಮ 'ಬಂಡವಾಳ' ಕೃತಿಯಲ್ಲಿ ಹಣಕಾಸು ಬಂಡವಾಳದ ಬೆಳವಣಿಗೆಯನ್ನು ವಿಶ್ಲೇಷಿಸುತ್ತಾ ಸಟ್ಟಾಕೋರ ಪ್ರವೃತ್ತಿಗಳ ಬೆಳವಣಿಗೆಯನ್ನು ಗುರುತಿಸುತ್ತಾರೆ. ಭೌತಿಕ ಸಂಪತ್ತಿನ ಬೆಳವಣಿಗೆಯೊಂದಿಗೆ ಹಣಕಾಸು ಬಂಡವಾಳದ ವರ್ಗ ಬೆಳೆಯುತ್ತಿದೆ. ಸಾಲ ನೀಡಿಕೆಯ ವ್ಯವಸ್ಥೆಯ ಬೆಳವಣಿಗೆಯೊಂದಿಗೆ ಬ್ಯಾಂಕರುಗಳು, ಲೇವಾದೇವಿಗಾರರು, ಹಣಕಾಸು ವಹಿವಾಟುದಾರರು ಬೆಳೆದು ಬರುತ್ತಾರೆ. ಇದರೊಂದಿಗೆ ಹಣಕಾಸು ಮಾರುಕಟ್ಟೆಯಲ್ಲಿ ಸಟ್ಟಾಕೋರ ಪ್ರವೃತ್ತಿ ಉದಯವಾಗುತ್ತದೆ. ಸಾಲ ವ್ಯವಸ್ಥೆಯ ಬೆಳವಣಿಗೆಗೆಯೊಂದಿಗೆ ಬೃಹತ್ ಹಣಕಾಸು ಮಾರುಕಟ್ಟೆಗಳ ಸೃಷ್ಟಿಯಾಗುತ್ತವೆ. ಬ್ಯಾಂಕರುಗಳು ದೊಡ್ಡ ಮೊತ್ತದ ಸಾರ್ವಜನಿಕ ಹಣಕಾಸು ಬಂಡವಾಳವನ್ನು ಸಟ್ಟಾಕೋರರ ಗ್ಯಾಂಗುಗಳಿಗೆ ಒದಗಿಸುತ್ತವೆ. (ಬಂಡವಾಳ-ಸಂಪುಟ3, ಭಾಗ 5, ಅಧ್ಯಾಯ 32)

ಸಾಲ ವಹಿವಾಟಿನ ಬಿಕ್ಕಟ್ಟಿಗೆ ಬಂಡವಾಳದ ಅರಾಜಕ ಸ್ವರೂಪವೇ ಕಾರಣ ಎಂದು ಗುರುತಿಸುವ ಮಾರ್ಕ್ಸ್ ಬಿಕ್ಕಟ್ಟನ್ನು ತೀವ್ರಗೊಳಿಸುವಲ್ಲಿ ಸಟ್ಟಾಕೋರ ಪ್ರವೃತ್ತಿಯ ಪಾತ್ರವನ್ನು ಎತ್ತಿ ತೋರಿಸಿದ್ದರು. ಒಂದು ಉತ್ಪಾದನಾ ಪದ್ಧತಿಯು ಇಡಿಯಾಗಿ ಸಾಲದ ಮೇಲೆ ಅವಲಂಬಿತವಾದರೆ, ಅಲ್ಲಿ ಬಿಕ್ಕಟ್ಟು ಸಹಜವಾಗಿರುತ್ತದೆ. ಸಾಲದ ಈ ವಹಿವಾಟನ್ನು ಬಲವಂತದ ವಿಸ್ತರಣೆಯ ಒಂದು ಕೃತಕವಾದ ವ್ಯವಸ್ಥೆಯೆಂದು ಮಾರ್ಕ್ಸ್ ಗುರುತಿಸಿರುವುದು, ಇಲ್ಲಿ ವಿನಿಮಯದ ಬಿಲ್ಲುಗಳನ್ನು ಹಣವಾಗಿ ಪರಿವರ್ತಿಸುವುದರಲ್ಲಿಯೇ ಇಡೀ ಬಿಕ್ಕಟ್ಟಿನ ಮೂಲ ಅಡಕವಾಗಿದೆ ಎಂದು ಅವರು ಸ್ಪಷ್ಟಪಡಿಸಿರುವುದು ಮತ್ತು ಇನ್ನೊಬ್ಬರ ಬಂಡವಾಳದೊಂದಿಗೆ ಸಟ್ಟಾ ವಹಿವಾಟು ನಡೆಸುವ ಮೋಸದ ಆಟ ಯಶಸ್ವಿಯಾಗಲಾರದು ಎಂದು ಅವರು ಹೇಳಿರುವುದು ಬಂಡವಾಳದ ಬಗ್ಗೆ ಅವರಿಗಿದ್ದ ಆಳವಾದ ತಿಳುವಳಿಕೆಯನ್ನು ತೋರಿಸುತ್ತದೆ ಮಾತ್ರವಲ್ಲ ಇಂದಿನ ವಿಶ್ವ ಆರ್ಥಿಕ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಲು ತುಂಬಾ ಪ್ರಸ್ತುತವಾಗಿದೆ.

ಇಂದು ಬಂಡವಾಳಶಾಹಿ ಶೋಷಣಾ ವ್ಯವಸ್ಥೆ ಜಾಗತೀಕರಣಗೊಂಡಿದೆ. ಇದರ ಪರಿಣಾಮವಾಗಿ ಶ್ರೀಮಂತರು ಮತ್ತು ಬಡವರ ನಡುವೆ, ಶ್ರೀಮಂತ ದೇಶಗಳು ಮತ್ತು ಬಡ ದೇಶಗಳ ನಡುವೆ ಆರ್ಥಿಕ ಅಸಮಾನತೆ ತೀವ್ರಗೊಂಡಿದೆ. 'ಉದ್ಯೋಗರಹಿತ ಬೆಳವಣಿಗೆ' ಇಂದಿನ ಆತಂಕದಾಯಕ ವಿದ್ಯಮಾನವಾಗಿದೆ. ಇದಕ್ಕೆ ಕಾರಣ, ಬಂಡವಾಳಶಾಹಿಯು ಅಧಿಕಲಾಭದ ಆಸೆಗಾಗಿ, ಮಾನವ ಸಂಪನ್ಮೂಲ ಸಾಮರ್ಥ್ಯವನ್ನು ಹೆಚ್ಚಿಸಲು ಆದ್ಯತೆ ನೀಡುವ ಬದಲಾಗಿ ತಂತ್ರಜ್ಞಾನ ಅಭಿವೃದ್ಧಿಯತ್ತ ಹೆಚ್ಚು ಆಸಕ್ತಿ ತೋರುತ್ತಿರುವುದೇ ಆಗಿದೆ. ಪರಿಣಾಮವಾಗಿ ವಿಶ್ವದ ಬಹುಸಂಖ್ಯಾತ ಜನರ ಕೊಳ್ಳುವ ಸಾಮರ್ಥ್ಯ ಕುಸಿದಿದೆ. ಹಾಗಾಗಿ ಈಗ ಉತ್ಪಾದನೆಯಾಗುವ ಸರಕುಗಳು ಮಾರಾಟವಾಗದಂತಹ ಬಿಕ್ಕಟ್ಟು ಉಂಟಾಗುತ್ತದೆ. ಈ ಪರಿಸ್ಥಿತಿಯಲ್ಲಿ ಬಂಡವಾಳಶಾಹಿಯು ತನ್ನ ಲಾಭದ ಮಟ್ಟವನ್ನು ಉಳಿಸಿಕೊಳ್ಳಲು ಜನರಿಗೆ ಸುಲಭ ಸಾಲದ ಆಮಿಷವನ್ನು ಒಡ್ಡುತ್ತದೆ. ಆದರೆ ಈ ಸಾಲಗಳನ್ನು ಮರುಪಾವತಿ ಮಾಡುವುದು ಸಾಧ್ಯವಾಗದೆ ಸುಸ್ತಿ ಸಾಲದ ಬಿಕ್ಕಟ್ಟು ಉದ್ಭವಿಸುತ್ತದೆ. ಅಮೇರಿಕಾದ ಇಂದಿನ ಆರ್ಥಿಕ ಬಿಕ್ಕಟ್ಟಿಗೆ ಇಂತಹ ಭದ್ರತೆ ಇಲ್ಲದ ಸಾಲದ ಸಮಸ್ಯೆಯೇ ಕಾರಣವಾಗಿದೆ.

ಆರ್ಥಿಕ ಲಾಭಕ್ಕಾಗಿ ಬಂಡವಾಳಶಾಹಿ ನಿರಂತರವಾಗಿ ಹೊಸ ಸರಕುಗಳನ್ನು ಉತ್ಪಾದನೆ

ಪುಟ 10ಕ್ಕೆ



ಮುಂದುವರಿದ ಆರ್ಥಿಕ ಬಿಕ್ಕಟ್ಟಿನ ಛಾಯೆ

ಮತ್ತೆ ಭಾರತದ ಐಟಿ ವಲಯದಲ್ಲಿ ತಳಮಳ- 'ಹಿಂಜರಿತ' ಎಂದು ಹೇಳಲೊಲ್ಲದ ಬೌದ್ಧಿಕ ಹಿಂಜರಿತ ಕೂಡಾ-ಅಮೆರಿಕಾದಲ್ಲೆಲ್ಲಾ ಸಂಬಳ ಕಡಿತದ ಕಾಯಿಲೆ-ಫ್ರಾನ್ಸಿನಲ್ಲಿ ವ್ಯಾಪಕ ಪ್ರತಿಭಟನೆ-ಐಸ್‌ಲ್ಯಾಂಡಿನಲ್ಲಿ ಉದಾರೀಕರಣವಾದಿಗಳಿಗೆ ಮತದಾರರ ಪಾಠ-ಚೀನಾದಲ್ಲಿ ಜನಪರ ಭಿನ್ನಹಾದಿಯ ಫಲ- ಜಿ20 ರ ಮೂಲಕ ಐಎಂಎಫ್ ಗೆ ಪುನರ್ಜನ್ಮ, ಮಾಹಿತಿ ತಂತ್ರಜ್ಞಾನ; ಇನ್ನಷ್ಟು ಉದ್ಯೋಗ ಕಡಿತದ ಕರಾಳ ಛಾಯೆ

ಒಂದು ವಾರದ ಹಿಂದೆ ಭಾರತದ ಐಟಿ ವಲಯದಲ್ಲಿ ಮುಂದಿನ ಆರು ತಿಂಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಉದ್ಯೋಗಾವಕಾಶಗಳು ನಾಶವಾಗಬಹುದು ಎಂಬ ತಜ್ಞರ ಅಭಿಪ್ರಾಯ ದೊಡ್ಡ ಸುದ್ದಿ ಮಾಡಿತ್ತು. ಈ ಕ್ಷೇತ್ರದಲ್ಲಿ 5ಶೇಕಡಾದವರೆಗೂ ಉದ್ಯೋಗ ಕಡಿತವಾಗಬಹುದು ಎಂಬುದು ಈ ತಜ್ಞರ ಅಂದಾಜು.

ವಿಪ್ರೊ ಮುಂತಾದ ಪ್ರಮುಖ ಐಟಿ ಕಂಪನಿಗಳು ಸಂಬಳ ಏರಿಕೆಗಳನ್ನು ಸದ್ಯಕ್ಕೆ ನಿಲ್ಲಿಸಿವೆ. ಅಲ್ಲದೆ ಎಂಜಿನಿಯರಿಂಗ್ ಕಾಲೇಜುಗಳಿಗೆ ಹೋಗಿ ಹೊಸಬರ ನೇಮಕಾತಿ ಮಾಡಿಕೊಳ್ಳುವುದನ್ನೂ ನಿಲ್ಲಿಸಿವೆ.

ಈಗ ಮೇ 5ರಂದು ಅಮೆರಿಕಾದ ಅಧ್ಯಕ್ಷ ಒಬಾಮಾ ಪ್ರಕಟಿಸಿದ ಹೊಸ ತೆರಿಗೆ ಕ್ರಮಗಳಿಂದಾಗಿ 10 ಲಕ್ಷ ಉದ್ಯೋಗಗಳಿಗೆ ಕುತ್ತು ಬಂದಿದೆ ಎಂದು ಹೇಳಲಾಗುತ್ತಿದೆ. ಬೇರೆ ದೇಶಗಳಲ್ಲಿ ಹೊರಗುತ್ತಿಗೆ ಕೊಡುವ ಅಮೆರಿಕಾದ ಕಂಪನಿಗಳಿಗೆ ಇದ್ದ ತೆರಿಗೆ ರಿಯಾಯ್ತಿಗಳನ್ನು ರದ್ದು ಮಾಡಿ ಅಮೆರಿಕಾದಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಕಂಪನಿಗಳಿಗೆ ಮಾತ್ರ ತೆರಿಗೆ ರಿಯಾಯ್ತಿಗಳನ್ನು ಕೊಡಲಾಗುವುದು ಎಂದು ಅಮೆರಿಕಾದ ಆಡಳಿತ ಪ್ರಕಟಿಸಿದೆ. ಇದು ಭಾರತ, ಚೀನಾ ಮತ್ತು ಫಿಲಿಪ್ಪೈನ್ಸ್ ನಂತಹ ದೇಶಗಳಲ್ಲಿ ಹೊರಗುತ್ತಿಗೆಗಳ ಮೇಲೆ ತೀವ್ರ ಪರಿಣಾಮ ಬೀರಬಹುದು ಎಂದು ವಿಶ್ಲೇಷಿಸಲಾಗಿದೆ.


ಜಗತ್ತಿಗೆಲ್ಲಾ 'ಮುಕ್ತ ವ್ಯಾಪಾರ'ದ ಪ್ರವಚನ ನೀಡುತ್ತಿದ್ದ, ಅದರಿಂದಾಗಿಯೇ ಪ್ರಸಕ್ತ ಜಾಗತಿಕ ಹಿಂಜರಿತಕ್ಕೆ ನಾಂದಿ ಹಾಕಿದ ಅಮೆರಿಕಾದ ಹೊಸ ಅಧ್ಯಕ್ಷರ ಆಡಳಿತದಲ್ಲಿ ಈಗ 'ಬೆಂಗಳೂರು ಬೇಡ, ಬಫೆಲೋ ಬೇಕು' ಇದು ಹೊಸ ಮಂತ್ರವಂತೆ.

ಇದಕ್ಕೆ ಮೊದಲು ಅಮೆರಿಕಾದ ಸೆನೆಟ್‌ನಲ್ಲಿ ಹೆಚ್1ಬಿ ವೀಸಾ ಕುರಿತಂತೆ ಒಂದು ಮಸೂದೆಯನ್ನು ಮಂಡಿಸಿದ್ದು ಇದರ ಗುರಿ ಅಮೆರಿಕಾದಲ್ಲಿ ಸ್ಪರ್ಧಿಸುವ ಭಾರತೀಯ ಕಂಪನಿಗಳು ಎಂಬುದು ಸ್ಪಷ್ಟವಾಗಿದೆ. ನಿಪುಣ ವಿದೇಶಿ ವೃತ್ತಿಪರರನ್ನು ನೇಮಿಸಿಕೊಳ್ಳಬೇಕೆಂದಿರುವ ಕಂಪನಿಗಳು ಮೊದಲು ಅಮೆರಿಕಾದಲ್ಲಿಯೇ ಇಂತಹವರನ್ನು ಹುಡುಕಬೇಕು ಎಂದು ಅದು ವಿಧಿಸುತ್ತದೆ. ಇದು ಮುಕ್ತ ವ್ಯಾಪಾರದ ಪರಿಕಲ್ಪನೆಗೆ ವಿರುದ್ಧವಾದದ್ದು ಎಂದು ಇದುವರೆಗೆ ಅಮೆರಿಕಾ 'ಮುಕ್ತ ವ್ಯಾಪಾರ' ಮಾದರಿಯನ್ನು ಬಹಳವಾಗಿ ನಂಬುತ್ತಿದ್ದವರು, ಪ್ರಶಂಸಿಸುತ್ತಿದ್ದವರು ಈಗ ಟೀಕಿಸುತ್ತಿದ್ದಾರೆ.

ಭಾರತದಲ್ಲಿ ಬೌದ್ಧಿಕ ಹಿಂಜರಿತ ಕೂಡಾ!

ಹೀಗೆನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್. ನಮ್ಮ ಮಾಧ್ಯಮಗಳಲ್ಲಿ ನಮ್ಮ ದೇಶ ಕೂಡಾ ಈಗ ಕಳೆದ 80 ವರ್ಷಗಳಲ್ಲಿ ಜಗತ್ತು ಕಾಣುತ್ತಿರುವ ಅತಿ ಭೀಷಣ ಬಿಕ್ಕಟ್ಟಿನ ಭಾಗವಾಗಿದೆ ಎಂಬುದನ್ನು ಜನಗಳಿಗೆ ತಿಳಿಸುವ ಯಾವ ಪ್ರಯತ್ನವೂ ಇಲ್ಲ ಎಂದು ಅವರು ಹೇಳುತ್ತಾರೆ. ಬದಲಿಗೆ ನಮ್ಮ ದೊಡ್ಡ ಪತ್ರಿಕೆಗಳ ಸಂಪಾದಕೀಯ ಶಬ್ದ ಭಂಡಾರದಲ್ಲಿ 'ಹಿಂಜರಿತ' ಎಂಬ ಪದವನ್ನೇ ಕಿತ್ತು ಹಾಕಲಾಗಿದೆ, ಮೇಲೆ ಹೇಳಿದಂತಹ ಭೀಷಣ ಬೆಳವಣಿಗೆಯ ಬಗ್ಗೆ ಹೇಳುವಾಗಲೂ 'ನಿಧಾನಗತಿ', 'ಇಳಿಕೆ' ಮುಂತಾದ ಪದಗಳನ್ನು ಮಾತ್ರ ಬಳಸಬೇಕು, ಅದೂ ಬಹಳ ಅಗತ್ಯವಿದ್ದಾಗ ಮಾತ್ರ ಎಂದು ತಾಕೀತು ಮಾಡಲಾಗುತ್ತಿದೆಯಂತೆ!

ಆದರೂ ಸತ್ಯ ಅವರಿಗೆ ಅರಿವಿಲ್ಲದೇ ಹೊರಬರುತ್ತದೆ. ಇವೇ ಪತ್ರಿಕೆಗಳು ಕೆಲವೊಮ್ಮೆ 'ಕರಾಳ ದಿನಗಳು ಕೊನೆಗೊಳ್ಳುತ್ತಿವೆ' ಎಂದು ಸಾರುತ್ತವೆ. ಯಾವ ಕರಾಳ ದಿನಗಳು 'ಯಾವುದರಿಂದಾಗಿ ಕರಾಳ, ಹಿಂಜರಿತದಿಂದಾಗಿಯೆ' ಅವು ಹೇಳುವುದಿಲ್ಲ. ಆದರೆ ಹಿಂಜರಿತ ತಟ್ಟಿರುವುದು ಅಮೆರಿಕಾವನ್ನು ಮಾತ್ರವೇ, ಭಾರತವನ್ನಲ್ಲ ಎಂದು ಜನಗಳನ್ನು ನಂಬಿಸುತ್ತಿರುವ ಈ ಮಾಧ್ಯಮಗಳಲ್ಲೇ ನೌಕರರನ್ನು, ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲವೂ ಚೆನ್ನಾಗಿದೆ ಎಂದು ಬರೆಯಬೇಕಾಗಿರುವ ಪತ್ರಕರ್ತರನ್ನೂ ಕೂಡಾ ಲೇ-ಆಫ್ ಮಾಡಲಾಗುತ್ತಿದೆ!



ವಾಶಿಂಗ್ಟನ್ ನಲ್ಲಿ ಎಪ್ರಿಲ್ 25 ರಂದು ಐಎಂಎಫ್ ವಿರುದ್ಧ ಪ್ರತಿಭಟನೆ- 'ಬಂಡವಾಳಶಾಹಿ ಬೇಡ, ಅವರನ್ನು ಪಾರು ಮಾಡುವ ಯೋಜನೆಗಳು ಬೇಡ'

ಸಾರ್ವತ್ರಿಕ ಚುನಾವಣೆಗಳು ನಡೆಯುತ್ತಿವೆ. ಈ ದೇಶವನ್ನು ತಮ್ಮಿಬ್ಬರಲ್ಲಿ ಒಬ್ಬರು ಮಾತ್ರ ಆಳಲು ಸಾಧ್ಯ ಎನ್ನುವವರಿಗೆ ಇದು ಚುನಾವಣಾ ಪ್ರಶ್ನೆಯೆ ಅಲ್ಲ. ಆದರೆ ಗುಜರಾತದಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ದೇಶದ ಹಲವೆಡೆ ಕೆಲಸ ಹುಡುಕಿಕೊಂಡು ನಗರಗಳಿಗೆ ವಲಸೆ ಬಂದವರು ಕೆಲಸವಿಲ್ಲದ್ದರಿಂದ, ರಫ್ತು ಆರ್ಡರುಗಳು ಇಳಿಮುಖವಾದ್ದರಿಂದ ತಮ್ಮ ಊರುಗಳಿಗೆ ಮರಳುತ್ತಿದ್ದಾರೆ. ವಾರವಾರವೂ ಇಂತವರ ಸಂಖ್ಯೆ ಏರುತ್ತಿದೆ. ಆದರೆ ಅಲ್ಲಿಯಾದರೂ ಏನಿದೆ? ಬರೀ ಹತಾಶೆ. ಮಳೆಗಾಲ ಆರಂಭವಾಗುವ ವೇಳೆಗೆ ಪರಿಸ್ಥಿತಿ ಹದಗೆಡಲಿದೆ, ಇನ್ನು ಕೆಲವೇ ತಿಂಗಳಲ್ಲಿ ಪರಿಸ್ಥಿತಿ ತೀರಾ ಕೆಟ್ಟುಹೋಗಬಹುದು ಎಂದು ಅವರು ಆತಂಕ ವ್ಯಕ್ತಪಡಿಸುತ್ತಾರೆ. ಆದರೆ ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವೆಂದು ಬೀಗುವ ಮಾಧ್ಯಮಗಳಿಗೆ ಇದರ ಪರಿವೆಯೇ ಇದ್ದಂತಿಲ್ಲ.

ಇಳಿಯುತ್ತಿರುವ ಸಂಬಳ

ಇದು ಈಗ ಅಮೆರಿಕಾದಲ್ಲೆಲ್ಲ ವ್ಯಾಪಿಸಿರುವ ಕಾಯಿಲೆ .ಎಂದು ಪಾಲ್ ಕ್ರುಗ್‌ಮನ್ ಹೇಳುತ್ತಾರೆ. ಕ್ರೈಸ್ಲರ್ ಕಂಪನಿ ಬದುಕುಳಿಯಲು ಅಮೆರಿಕನ್ ಸರಕಾರದ ನೆರವು ಪಡೆದುದರ ಭಾಗವಾಗಿ ಅಲ್ಲಿಯ ಕಾರ್ಮಿಕರು ಸಂಬಳ ಇಳಿಕೆಗೆ ಒಪ್ಪಬೇಕಾಗಿ ಬಂತು. ಪ್ರಖ್ಯಾತ 'ಟೈಮ್ಸ್' ಪತ್ರಿಕೆಯಲ್ಲಿ ಆಡಳಿತ ಮತ್ತು ಕಾರ್ಮಿಕರ ನಡುವೆ ಈ ಬಗ್ಗೆ ಒಪ್ಪಂದವಾಗಿದೆ. ಹಣಕಾಸು ಬಂಡವಾಳಿಗರ ರಾಕ್ಷಸೀ ಪ್ರವೃತ್ತಿ ಹೇಗೆ ಒಂದು ದುರ್ಬಲ ಶ್ರಮ ಮಾರುಕಟ್ಟೆಯನ್ನು ಸೃಷ್ಟಿಸಿದೆ ಎಂಬುದನ್ನು ಇದು ತೋರಿಸುತ್ತಿದೆ ಎಂದು ಅವರು ಹೇಳುತ್ತಾರೆ. ಇದು ಒಂದು ರೋಗಗ್ರಸ್ತ

ಪುಟ 10ಕ್ಕೆ

ಚೀನಾದ್ದು ಮಾತ್ರ ಭಿನ್ನ ಅನುಭವ

ಇದನ್ನು ಈಗ ಬಂಡವಾಳಶಾಹೀ ದೇಶಗಳ ಆರ್ಥಿಕ ವೀಕ್ಷಕರೂ ಒಪ್ಪಿಕೊಳ್ಳುತ್ತಿದ್ದಾರೆ. ಪಾಶ್ಚಿಮಾತ್ಯ ದೇಶಗಳು, ಅವನ್ನು ಅನುಕರಿಸಿ ಭಾರತದಂತಹ ದೇಶಗಳು ಕೂಡಾ ದೊಡ್ಡ ಕಾರ್ಪೊರೇಟ್‌ಗಳನ್ನು ರಕ್ಷಿಸಲು ಧಾವಿಸಿ ಬಿಕ್ಕಟ್ಟು ಅತಿ ಹೆಚ್ಚಾಗಿ ಬಾಧಿಸುತ್ತಿರುವ ಜನಗಳನ್ನು ಅವರ ಪಾಡಿಗೆ ಬಿಡುವ ನೀತಿಗಳನ್ನು ಅನುಸರಿಸುತ್ತಿದ್ದರೆ ಈ ಬಿಕ್ಕಟ್ಟಿನಿಂದ ಹೊರಬರಲು ಚೀನಾ ಜನತಾ ಗಣತಂತ್ರ ತನ್ನ ಹೆಸರಿಗೆ ತಕ್ಕಂತೆ ಭಿನ್ನ ಹಾದಿ ಹಿಡಿಯಿತು. ಸವಾಲನ್ನು ಅವಕಾಶವಾಗಿ ಪರಿವರ್ತಿಸಲು ಮುಂದಾಯಿತು. ಮೂಲರಚನೆಗಳಲ್ಲಿ ಹೂಡಿಕೆಗಳನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿ ಜನಸಾಮಾನ್ಯರ ಜೀವನ ಮಟ್ಟವನ್ನು, ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಆಮೂಲಕ ಆರ್ಥಿಕಕ್ಕೆ ಹೊಸ ಚೈತನ್ಯ ತುಂಬುವ ನೀತಿಗಳನ್ನು ರೂಪಿಸಿತು. ಇದಕ್ಕಾಗಿ 586 ಶತಕೋಟಿ ಡಾಲರುಗಳ ಯೋಜನೆಯನ್ನು ಜಾರಿಗೊಳಿಸಿತು. ಇದರ ಪರಿಣಾಮಗಳು ಈಗ ಕಾಣ ಬರುತ್ತಿವೆ.



ಐಎಂಎಫ್ ಪ್ರಕಾರ ವಿಶ್ವದ ಆರ್ಥಿಕ ಬೆಳವಣಿಗೆ ಕುಂಠಿತಗೊಂಡಿರುವುದೇ ಅಲ್ಲದೆ ಈ ವರ್ಷ ಅದು 1.3 ಶೇ.ದಷ್ಟು ಕುಗ್ಗಲಿದೆ. ಆದರೆ ಇಂತಹ ಸನ್ನಿವೇಶದಲ್ಲೂ ಚೀನಾದ ಒಟ್ಟು ಆಂತರಿಕ ಉತ್ಪನ್ನ ಈ ಮೂರು ತಿಂಗಳಲ್ಲಿ 7.2 ಶೇ. ದರದಲ್ಲಿ, ಈ ವರ್ಷ 8ಶೇ. ದರದಲ್ಲಿ ಹೆಚ್ಚಲಿದೆ ಎಂದು ಮೆರಿಲ್ ಲಿಂಚ್ ಹೇಳಿದ್ದರೆ, ಇನ್ನೊಂದು ಬಂಡವಾಳಶಾಹೀ ಸಂಶೋಧನಾ ಸಂಸ್ಥೆ ಗೋಲ್ಡ್‌ಮನ್ ಸಾಕ್ಸ್ 8.3 ಶೇ. ದರದಲ್ಲಿ ಹೆಚ್ಚಬಹುದು ಎಂದಿದೆ. ಬೇರೆ ಎರಡು ಸಂಸ್ಥೆಗಳು ಕೂಡ ಸುಮಾರಾಗಿ ಇದೇ ರೀತಿ ಹೇಳಿವೆ. ಈ ಸಂಸ್ಥೆಗಳು ಈ ಹಿಂದೆ ತಾವು ನಿರೀಕ್ಷಿಸಿದ್ದಕ್ಕಿಂತ ಸುಮಾರು 2.3ಶೇ. ವರೆಗೆ ಹೆಚ್ಚಿನ ಬೆಳವಣಿಗೆಯನ್ನು ಚೀನಾ ಸಾಧಿಸಬಹುದು ಎಂದು ಈಗ ಹೇಳುತ್ತಿವೆ.

ಜಾಗತಿಕ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ಚೀನೀ ಜನಸಾಮಾನ್ಯರ ಜೀವನ ಮಟ್ಟವನ್ನು ಹೆಚ್ಚಿಸಲು 8ಶೇ. ಬೆಳವಣಿಗೆ ಅಗತ್ಯ ಎಂದು ಚೀನೀ ಸರಕಾರ 586 ಶತಕೋಟಿ ಡಾಲರುಗಳ ಈ ಯೋಜನೆಯನ್ನು ಜಾರಿಗೆ ತಂದಿತ್ತು. ಇದರಲ್ಲಿ ಉದ್ಯೋಗಾವಕಾಶ ನಿರ್ಮಾಣ ಮತ್ತು ವಸತಿ ಸೌಲಭ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ಪ್ರಾದೇಶಿಕ ಸರಕಾರಗಳೂ ಇದಕ್ಕೆ ಅನುಗುಣವಾಗಿ ತಮ್ಮದೇ ಯೋಜನೆಗಳನ್ನು ಕೂಡಾ ರೂಪಿಸಿದ್ದವು. ಈ ಯೋಜನೆಗಳು ಫಲ ಕೊಡುತ್ತಿವೆ. ಈ ಬಗ್ಗೆ ಪರಿಶೀಲನೆ ನಡೆಸಲು ಚೀನೀ ಅಧ್ಯಕ್ಷರು ಕಳೆದ ವಾರ ದೇಶದ ಪೂರ್ವ ಭಾಗಕ್ಕೆ ಭೇಟಿ ನೀಡಿದ್ದರು. ಈ ಅತ್ಯಂತ ಕಠಿಣವಾದ ದಿನಗಳಲ್ಲಿ ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲು, ಜೀವನ ಮಟ್ಟ ಹಾಗೂ ಸಾಮಾಜಿಕ ಸ್ಥಿರತೆಯನ್ನು ಹೆಚ್ಚಿಸಲು ಪ್ರಯತ್ನಗಳನ್ನು ಇಮ್ಮಡಿಗೊಳಿಸಲು ಅವರು ಕರೆ ನೀಡಿದರು. m

ಹಗರಿಬೊಮ್ಮನಹಳ್ಳಿ ಕೋಮುಗಲಭೆ....

ಪುಟ 5ಕ್ಕೆ

ಎಂಬ ಭಾವನೆ ಮೂಡಿಬಾರದಿರಲು ಸಾಧ್ಯವೇ ಇಲ್ಲ.

ಮುತಾಲಿಕ್ ಬರುತ್ತಾನೆ ಎಂಬ ಸುದ್ದಿ

ಮುತಾಲಿಕ್ ಬರುತ್ತಾನಂತೆ-ಬಹಿರಂಗ ಸಭೆ ನಡೆಸುತ್ತಾರಂತೆ ಎನ್ನುವ ಸುದ್ದಿಯಂತೂ, ಸಾಮಾನ್ಯ ಜನರನ್ನು ಮತ್ತಷ್ಟು ಆತಂಕಕ್ಕೆ ತಳ್ಳುವಂತೆ ಮಾಡಿತು. ಅಲ್ಪಸಂಖ್ಯಾತರ ಮನೋಸ್ಥಿತಿಯಂತೂ ಇನಷ್ಟು ಕುಗ್ಗಿತು. ಆದರೆ ಮುತಾಲಿಕ್ ಅಂತೂ ಬರಲಿಲ್ಲ. ರಾಷ್ಟ್ರೋತ್ಥಾನ ಶಾಲೆಯಲ್ಲಿ ನಡೆದ ಬಿಜೆಪಿ ಸಂಘ ಪರಿವಾರದ ಕಾರ್ಯಕರ್ತರ ಸಭೆಯಲ್ಲಿ ಧಾರವಾಡದ ಎಂಪಿ ಪ್ರಹ್ಲಾದ್‌ಜೋಶಿ ಆರ್‌ಎಸ್‌ಎಸ್ ಮುಖ್ಯಸ್ಥ ಗದುಗಿನ ಎಂಎಲ್‌ಎ ಶ್ರೀ ಶೈಲಪ್ಪ ಬೆಟ್ಟ ದೂರು ಭಾಗವಹಿಸಿ ಮಾತನಾಡಿ ಹೋಗಿದ್ದಾರೆ. ಸಭೆಯಲ್ಲಿ ಅಲ್ಪಸಂಖ್ಯಾತರ ವಿರುದ್ಧ ಬೆಂಕಿಯ ಉಂಡೆಗಳನ್ನೇ ಉಗಳಿ ಹೋಗಿರುವ ಇವರು, ಪ್ರಾರಂಭದ ಭಾಷಣದಲ್ಲಿಯೇ, ಹಗರಿಬೊಮ್ಮನಹಳ್ಳಿಯ ಜನತೆ, ಒಬ್ಬ ಹಿಂದೂ ಹುಡುಗಿ ಮುಸ್ಲಿಂ ಧರ್ಮಕ್ಕೆ ಮತಾಂತರಕ್ಕೆ ಒಳಗಾಗುವುದನ್ನು ತಪ್ಪಿಸಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸುವುದಾಗಿ ತಿಳಿಸಿದ್ದಾರೆ. ಈಗಾಗಲೇ ತಾಲ್ಲೂಕು ಬೆಂಕಿ ಹತ್ತಿ ಹುರಿಯುತ್ತಿರುವಾಗ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ವನ್ನೂ ಸಂಘ ಪರಿವಾರದ ನಾಯಕರು ಮಾಡುತ್ತಿರುವುದು, ಸಾಮಾನ್ಯ ನಾಗರೀಕರನ್ನೂ ಆತಂಕಕ್ಕೆ ತಳ್ಳಿದೆ.

ಈ ರಹಸ್ಯ ಸಭೆಯ ವೇದಿಕೆಯಲ್ಲಿ ಹಗರಿಬೊಮ್ಮನಹಳ್ಳಿ ಕ್ಷೇತ್ರದ ನೇಮಿರಾಜನಾಯ್ಕ, ಹಡಗಲಿ ಕ್ಷೇತ್ರದ ಶಾಸಕ ಚಂದ್ರನಾಯ್ಕ, ಆರ್‌ಎಸ್‌ಎಸ್‌ನ ಡಾ: ವಿಠ್ಠಲ್, ಡಾ: ವಿನಯ್ ಇದ್ದರು ಎಂಬುದು ಗೊತ್ತಾಗಿದೆ.

ಸಿಪಿಐ(ಎಂ) ನಿಲುವು:

ಮೇ 2, 2009ರಂದು ಎಸ್‌ಪಿ ನೇತೃತ್ವದ ಸಭೆಯಲ್ಲಿ ಸಿಪಿಐ(ಎಂ) ನಿಲುವನ್ನು ನಿಖರವಾಗಿ ಹೇಳಲು ಸಾಧ್ಯವಾಗಿದೆ. ಶಾಂತಿ ಸಭೆಯಲ್ಲಿ ಭಾಗವಹಿಸಿದ್ದ ಇತರೆ ರಾಜಕೀಯ ಪಕ್ಷಗಳೂ ನಿಖರವಾಗಿ ಮಾತನಾಡಲು ಹಿಂದೇಟು ಹಾಕಿದ್ದಾರೆ. ಕಾಂಗ್ರೆಸ್ ನಾಯಕರಂತೂ ಶಾಂತಿ ಸಭೆಯಲ್ಲಿ ಏನನ್ನೂ ಮಾತನಾಡದೆ, ಸಂಘ ಪರಿವಾರದ ಕೃತ್ಯಗಳಿಗೆ ಹೆದರಿದಂತೆ ಕಂಡು ಬಂದಿರುವುದನ್ನು ನೋಡಿದರೆ ಇವರು ಯಾವುದೇ ರೀತಿಯ ದೃಢ ಹೋರಾಟ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ ಎಂಬುದು ಇದರಿಂದ ಸಾಬೀತಾಗಿದೆ. ಸಿಪಿಐ(ಎಂ) ಮಾತ್ರ ಈ ಎಲ್ಲಾ ಘಟನೆಗಳನ್ನು ತನಿಖೆಗೊಳಪಡಿಸಬೇಕು, ಇದಕ್ಕಾಗಿ ಒಂದು ತನಿಖಾ ಸಮಿತಿಯನ್ನು ರಚನೆ ಮಾಡಬೇಕು. ಹೊರಗಿನ ಶಕ್ತಿಗಳು, ಈ ಕೋಮುಗಲಭೆಯಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದು, ಇದರ ಬಗ್ಗೆ ತನಿಖೆಗೊಳಪಡಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಬಡ, ಅಮಾಯಕ ಕುಟುಂಗಳ ಆಸ್ತಿಗಳೇ ಸಂಪೂರ್ಣ ಹಾನಿಯಾಗಿದ್ದು, ಇವುಗಳಿಗೆ ಪರಿಹಾರ ಕೊಡುವಂತಾಗಬೇಕು. ಎಸ್‌ಎಂಎಸ್ ವದಂತಿ, ಮತ್ತು ಪ್ರೇಮ ಪ್ರಕರಣವನ್ನು ಪ್ರಾರಂಭದ ಹಂತದಿಂದಲೇ ತನಿಖೆಗೊಳಪಡಿಸಬೇಕು ಎಂದೂ ಒತ್ತಾಯಿಸಿತು.

ಶಾಂತಿ ಸಭೆಯ ಈ ಸಂದರ್ಭದಲ್ಲಿ ಸಿಪಿಐ(ಎಂ)ನ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರ ಆರ್.ಎಸ್ ಬಸವರಾಜ, ಜಿಲ್ಲಾ ಸಮಿತಿ ಸದಸ್ಯರಾದ ಎಸ್.ಜಗನ್ನಾಥ, ಬಿ.ಮಾಳಮ್ಮ, ತಾಲ್ಲೂಕು ಕಾರ್ಯದರ್ಶಿ ಮಂಡಳಿ ಸದಸ್ಯರಾದ ಓ.ತಿಂದಪ್ಪ ಹೆಚ್.ಉಸ್ಮಾನ್‌ಬಾಷಾ ಹಾಜರಿದ್ದರು. ○

ಕಾರ್ಲ್‌ಮಾರ್ಕ್ಸ್ ನುಡಿದ ಭವಿಷ್ಯ...

ಪುಟ 8 ರಿಂದ

ಮಾಡುತ್ತದೆ. ವಿಶ್ವ ಹಣಕಾಸು ಬಂಡವಾಳವು ಹೊಸ ಆರ್ಥಿಕ ಸರಕುಗಳನ್ನು ಉತ್ಪಾದಿಸುತ್ತದೆ. ಇಂದು ಇಷ್ಟೊಂದು ಆರ್ಥಿಕ ಅನಾಹುತಕ್ಕೆ ಕಾರಣವಾಗಿರುವುದೇ 'ಡಿರ್‍ಯಾವೇಟಿವ್ಸ್' ಎಂದು ಕರೆಯಲ್ಪಡುವ ಇಂತಹ ಆರ್ಥಿಕ ಸರಕಾಗಿದೆ.

'ಬಂಡವಾಳ' ಕೃತಿಯ ಕೊನೆಯ ಅಧ್ಯಾಯದಲ್ಲಿ ಬಂಡವಾಳಶಾಹಿ ಬೆಳವಣಿಗೆಯನ್ನು ವಿವರಿಸುತ್ತಾ ಮಾರ್ಕ್ಸ್ ಹೀಗೆ ಹೇಳುತ್ತಾರೆ. 'ಬಂಡವಾಳವು ಬರುವಾಗ ಅದರ ತಲೆಯಿಂದ ಪಾದದವರೆಗೆ ರಕ್ತ ಹಾಗೂ ಕೊಳೆ ಸೋರುತ್ತಿರುತ್ತದೆ. ಸಾಕಷ್ಟು ಲಾಭದೊಂದಿಗೆ ಅದು ಬಹಳ ಧೈರ್ಯವನ್ನೂ ಪ್ರದರ್ಶಿಸುತ್ತಿರುತ್ತದೆ. ಶೇಕಡ ಹತ್ತರಷ್ಟು ಲಾಭ ಸಿಗುವುದಾದರೆ ಅದು ಎಲ್ಲಿ ಬೇಕಾದಲ್ಲಿ ಲಭ್ಯವಾಗುತ್ತದೆ. ಶೇಕಡಾ 20 ರಷ್ಟು ಲಾಭ ಅದರ ಆಸಕ್ತಿಯನ್ನು ವೃದ್ಧಿಸುತ್ತದೆ. ಶೇಕಡಾ 50 ರಷ್ಟು ಲಾಭ ಅವರ ಉದ್ಧಟತನವನ್ನು ಹೆಚ್ಚಿಸುತ್ತದೆ. ಶೇಕಡಾ 100 ರಷ್ಟು ಲಾಭಕ್ಕಾಗಿ ಅದು ಯಾವುದೇ ಕಾನೂನನ್ನು ತುಳಿದು ಹಾಕಲು ಮುಂದಾಗುತ್ತದೆ. ಶೇಕಡಾ 300 ರಷ್ಟು ಲಾಭ ಸಿಗುತ್ತದೆ ಎಂದರಂತೂ ಅದು ಮಾಡದ ಅಪರಾಧವಿಲ್ಲ, ಯಾವ ಕೇಡಿಗೂ ಅದು ಹೇಸುವುದಿಲ್ಲ. ತನ್ನ ಮಾಲಕನನ್ನೆ ನೇಣಿಗೇರಿಸುತ್ತಾರೆಂದರೂ, ಅದನ್ನು ಅದು ಲೆಕ್ಕಿಸುವುದಿಲ್ಲ' ಈ ಪ್ರಮಾಣದ ಲಾಭದ ದುರಾಸೆಯೇ ಬಂಡವಾಳಶಾಹಿ ಬಿಕ್ಕಟ್ಟಿನ ಮೂಲವಾಗಿದೆ.

ಇಂದಿನ ಆರ್ಥಿಕ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಲು ಕಾರ್ಲ್ ಮಾರ್ಕ್ಸ್‌ರವರ ವಿಚಾರಗಳು ನೆರವಿಗೆ ಬರುತ್ತವೆ ಮಾತ್ರವಲ್ಲ ಇಂದಿನ ಬಿಕ್ಕಟ್ಟಿಗೆ ಕೈ ಕೊಳ್ಳಲಾಗುತ್ತಿರುವ ಪರಿಹಾರ ಕ್ರಮಗಳೂ ಸಹ ಮಾರ್ಕ್ಸ್ ಸೂಚಿಸಿದ ಕ್ರಮಗಳಿಂದ ಆಯ್ದುಕೊಂಡವು ಗಳಾಗಿವೆ ಎಂಬುದು ಗಮನಾರ್ಹವಾಗಿದೆ.

ಉದಾರೀಕರಣದ ವಕ್ತಾರರು ಇದುವರೆಗೆ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಭುತ್ವದ ಮಧ್ಯಪ್ರವೇಶ ಇರಬಾರದು, ಸಾರ್ವಜನಿಕ ನಿಯಂತ್ರಣದ ಅಡೆತಡೆಗಳು ಇರಬಾರದು, ಸಾರ್ವಜನಿಕ ರಂಗವೇ ಇರಬಾರದು ಎಂದು ಪ್ರತಿಪಾದಿಸುತ್ತಿದ್ದರು. ಆದರೆ ಇಂದು ಪ್ರಸಕ್ತ ಬಿಕ್ಕಟ್ಟಿನಿಂದ ಪಾರಾಗಲು ಪ್ರಭುತ್ವ ಧಾರಾಳವಾಗಿ ಮಧ್ಯಪ್ರವೇಶಿಸುವಂತಾಗಿದೆ. ಖಾಸಗೀಕರಣದ ಬದಲು ರಾಷ್ಟ್ರೀಕರಣವನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.

ಮಾರ್ಕ್ಸ್ ಅವರು ತಮ್ಮ 'ಕಮ್ಯೂನಿಸ್ಟ್ ಪ್ರಣಾಳಿಕೆ' ಎಂಬ ಕೃತಿಯಲ್ಲಿ 'ಒಂದು ರಾಷ್ಟ್ರೀಯ ಬ್ಯಾಂಕಿನ ಮೂಲಕ ಎಲ್ಲ ಸಾಲ ವಹಿವಾಟನ್ನು ಪ್ರಭುತ್ವವೇ ಕೇಂದ್ರೀಕರಿಸಿ ನಿಯಂತ್ರಿಸಬೇಕು' ಎಂದು ಸ್ಪಷ್ಟಪಡಿಸಿದ್ದರು. ಇದೇ ಕಾರಣದಿಂದಾಗಿ 1930 ರ ಮಹಾ ಬಿಕ್ಕಟ್ಟಿಗೆ ಅಂದಿನ ಬಂಡವಾಳಶಾಹಿ ಜಗತ್ತು ಬಲಿಯಾದಾಗ ಸೋವಿಯತ್ ಯೂನಿಯನ್ ಸೇರಿದಂತೆ ಸಮಾಜವಾದಿ ದೇಶಗಳು ಸುರಕ್ಷಿತವಾಗಿದ್ದವು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಭಾರತದಲ್ಲೂ ಬ್ಯಾಂಕು, ವಿಮೆ ಮೊದಲಾದ ಹಣಕಾಸು ಸಂಸ್ಥೆಗಳ ಖಾಸಗೀಕರಣವನ್ನು ಬಲವಾಗಿ ವಿರೋಧಿಸುತ್ತಾ ಅವುಗಳನ್ನು ಸಾರ್ವಜನಿಕ ರಂಗದಲ್ಲಿ ಉಳಿಸಿಕೊಳ್ಳಲು, ಅವುಗಳಲ್ಲಿ ವಿದೇಶಿ ನೇರ ಬಂಡವಾಳದ ಮಿತಿಯನ್ನು ಹೆಚ್ಚಿಸುವ ಪ್ರಯತ್ನವನ್ನು ತಡೆಯಲು ಎಡಪಕ್ಷಗಳು ಅನುಸರಿಸಿದ ದೃಢವಾದ ಕ್ರಮಗಳಿಂದಾಗಿ ವಿಶ್ವ ಆರ್ಥಿಕ ಬಿಕ್ಕಟ್ಟಿಗೆ ಅವುಗಳು ಸಿಲುಕದೆ ಉಳಿಯುವಂತಾಗಿದೆ. ಈ ಸಂದರ್ಭದಲ್ಲಿ ರೋಹಿತ್ ಸ್ಚಿನಾ ಎಂಬ ಖ್ಯಾತ ಮಾರುಕಟ್ಟೆ ವಿಮರ್ಶಕನ ಕಾರ್ಲ್‌ಮಾರ್ಕ್ಸ್ 1848ರಲ್ಲೇ 'ಸಾಲ ವಹಿವಾಟನ್ನು ಪ್ರಭುತ್ವವೇ ನಿಯಂತ್ರಿಸಬೇಕು' ಎಂದು ಹೇಳಿರುವುದನ್ನು ನಾನು ಗಮನಿಸಿಯೇ ಇರಲಿಲ್ಲ' ಎಂಬ ಮಾತು ಗಮನಾರ್ಹವಾಗಿದೆ. ○

ಸುನಾಮಿಯ ಸುಳಿಯಲ್ಲಿ....

ಪುಟ 9 ರಿಂದ

ಆರ್ಥಿಕದ ಲಕ್ಷಣ ಎಂದೂ ಅವರು ವರ್ಣಿಸುತ್ತಾರೆ.

ಅಮೆರಿಕಾದ ಪ್ರಸಿದ್ಧ ಕಂಪನಿ ಮೈಕ್ರೊಸಾಫ್ಟ್‌ನ ವ್ಯವಹಾರ ಕಳೆದ 23 ವರ್ಷಗಳಲ್ಲಿ ಮೊದಲ ಬಾರಿಗೆ 6 ಶೇಕಡಾ ಇಳಿದಿದೆ. ಇದರಿಂದಾಗಿ ತನ್ನ ಲಾಭ ಉಳಿಸಿಕೊಳ್ಳಲು 'ಖರ್ಚು ಉಳಿಸುವ' ಕ್ರಮಗಳ ಬಗ್ಗೆ ಅದು ಯೋಚಿಸುತ್ತಿದೆಯಂತೆ. ಅಂದರೆ ಅದರಲ್ಲಿ ಪ್ರಮುಖವಾದದ್ದು ಕೆಲಸಗಾರರ ಸಂಬಳಗಳ ಇಳಿಕೆ ಮತ್ತು ಉದ್ಯೋಗಾವಕಾಶಗಳ ಕಡಿತ. ಈ ವರ್ಷದ ಆರಂಭದಲ್ಲಿ 1400 ಉದ್ಯೋಗಗಳ ಕಡಿತವಾಗಿತ್ತು. ಅದು ಬಹಳಷ್ಟು ಅಮೆರಿಕಕ್ಕೆ ಸೀಮಿತವಾಗಿತ್ತು. ಆದರೆ ಮೇ 6 ರಂದು ಇನ್ನೂ 3500 ಮಂದಿಗೆ 'ಪಿಂಕ್ ಸ್ಲಿಪ್' ನೀಡಿದ್ದು ಇವರಲ್ಲಿ ಹೆಚ್ಚಿನವರು ಭಾರತದಂತಹ ದೇಶಗಳಲ್ಲಿ ಅದು ನೇಮಿಸಿಕೊಂಡಿದ್ದವರು.

ಅತ್ತ ಫ್ರಾನ್ಸ್‌ನಲ್ಲಿ ಇತ್ತೀಚಿನ ಒಂದೆರಡು ವಾರಗಳಲ್ಲಿ 10 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಅಲ್ಲಿಯ ಅಧ್ಯಕ್ಷರ ಜನಪ್ರಿಯತೆ 65ಶೇ.ದಿಂದ 24ಶೇ.ಕ್ಕೆ ಇಳಿದಿದೆ. ಇದುವರೆಗೆ ಈ ವರ್ಷದಲ್ಲಿ ಎರಡೂವರೆ ಲಕ್ಷ ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ. ಯುರೋಪಿನ ಈ ಬಲಾಢ್ಯ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ 22ಲಕ್ಷಕ್ಕೇರಿದೆ.

ಈ ನಡುವೆ ಐಸ್ ಲ್ಯಾಂಡಿನಲ್ಲಿ ಎಡಪಕ್ಷಗಳು ಅಧಿಕಾರಕ್ಕೆ ಬಂದಿವೆ. ಈ ಹಿಂದೆ ಹಣಕಾಸು ಬಂಡವಾಳದ ತಾಳಕ್ಕೆ ಕುಣಿಯುತ್ತಾ ವಿಶ್ವದ ಅತೀ ಸಮೃದ್ಧ ದೇಶವೆನಿಸಿದ್ದ ಇದು ಏಳು ತಿಂಗಳ ಹಿಂದೆ ಹಣಕಾಸು ಸುನಾಮಿ ಅಪ್ಪಳಿಸಿದಾಗ ಸಂಪೂರ್ಣ ಕೊಚ್ಚಿಹೋಗಿತ್ತು. ಅಲ್ಲಿಯ ಜನ ಇದಕ್ಕೆ ಕಾರಣವಾದ ನೀತಿಗಳಿಗೆ ಈಗ ಸಂಪೂರ್ಣ ವಿರೋಧವನ್ನು ಅಭಿವ್ಯಕ್ತ ಪಡಿಸಿದ್ದಾರೆ.

ಲಂಡನಿನಲ್ಲಿ ಜಿ-20 ಸಾಧಿಸಿದ್ದೇನು?

ಜಾಗತಿಕ ಆರ್ಥಿಕ ಹಿಂಜರಿತವನ್ನು ಎದುರಿಸುವ ಬಗ್ಗೆ ಚರ್ಚಿಸಲು ಜಗತ್ತಿನ ಶ್ರೀಮಂತ ದೇಶಗಳು ಹಾಗೂ ಭಾರತ, ಚೀನಾ, ಬ್ರೆಜಿಲ್‌ನಂತಹ 'ಮೂಡಿ ಬರುತ್ತಿರುವ' ಆರ್ಥಿಕಗಳ ದೇಶಗಳು ಇರುವ ಜಿ-20 ಕೂಟದ ದೇಶಗಳ ಮುಖ್ಯಸ್ಥರ ಸಭೆ ಎಪ್ರಿಲ್ 2 ರಂದು ಲಂಡನಿನಲ್ಲಿ ನಡೆಯಿತು. ಇಲ್ಲಿ 1.1 ಟ್ರಿಲಿಯನ್(1.1 ಲಕ್ಷ ಕೋಟಿ) ಡಾಲರ್‌ಗಳ ನೆರವಿನ ಪ್ಯಾಕೆಜ್ ಸಂಗ್ರಹಿಸಲು ನಿರ್ಧರಿಸಲಾಯಿತು. ಈ ನೆರವು ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕಗಳಿಗೆ ಪ್ರಸಕ್ತ ಬಿಕ್ಕಟ್ಟನ್ನೆದುರಿಸಲು ನೆರವಾಗವಲೆಂದು ಕೊಡಲಾಗುವುದು ಎಂದು ಹೇಳಿದ್ದರೂ ನಿಜವಾಗಿ ಈ ಹಣ ಯಾವ ದೇಶಗಳಿಗೆ ಹೋಗುತ್ತದೆ ಎಂಬ ಬಗ್ಗೆ ಸ್ಪಷ್ಟವಿಲ್ಲ. ಇದರಲ್ಲಿ ಬಹುಪಾಲು ಪೂರ್ವ ಯುರೋಪಿನ ಮಾಜಿ ಸಮಾಜವಾದಿ ದೇಶಗಳಿಗೆ ಹೋಗಲಿದೆ, ಏಕೆಂದರೆ ಇವು ಈಗ ಯುರೋಪಿಯನ್ ಒಕ್ಕೂಟದ ಸದಸ್ಯರಾಗಿದ್ದು ಅಲ್ಲಿಂದ ಇವು ನೆರವು ನಿರೀಕ್ಷಿಸುತ್ತಿವೆ. ವಾಸ್ತವವಾಗಿ ಯುರೋಪಿಯನ್ ಒಕ್ಕೂಟ ಜಿ-20 ಸಭೆಯ ಈ ನಿರ್ಣಯದ ಮೂಲಕ ಈ ಜವಾಬ್ದಾರಿಯನ್ನು ದಾಟಿಸಿದೆ ಎಂದು ಹೇಳಲಾಗುತ್ತಿದೆ.

ಈ ಸಭೆ ಅಂತರ್‍ರಾಷ್ಟ್ರೀಯವಾಗಿ ಸಂಯೋಜಿತವಾದ ಪ್ರೋತ್ಸಾಹಕ ಕ್ರಮಗಳು, ಆರ್ಥಿಕದಲ್ಲಿ ಹೆಚ್ಚಿನ ಬೇಡಿಕೆಗಳ ಮೂಲಕ ಚೈತನ್ಯ ತುಂಬಲು ಜಗತ್ತಿನ ದೊಡ್ಡ ಆರ್ಥಿಕಗಳು ಸಾರ್ವಜನಿಕ ಖರ್ಚುಗಳನ್ನು ಹೆಚ್ಚಿಸುವುದು ಮುಂತಾದ ಅಗತ್ಯ ಕ್ರಮಗಳ ಬಗ್ಗೆ ಮೌನವಾಗಿಯೇ ಉಳಿದಿದೆ. ಅಂದರೆ ಜಾಗತಿಕ ಆರ್ಥಿಕ ಹಿಂಜರಿತವನ್ನು ಎದುರಿಸುವಲ್ಲಿ ಮಹತ್ವದ ಮುನ್ನಡೆಯೇನೂ ಆಗಿಲ್ಲ. ಬದಲಿಗೆ ತನ್ನ 'ಶರತ್ತುಗಳ' ಸಾಲಗಳ ಮೂಲಕ ಪ್ರಸಕ್ತ ಜಾಗತಿಕ ಹಣಕಾಸು ಬಿಕ್ಕಟ್ಟಿಗೆ ಕಾರಣ ವಾಗಿರುವ, ಅದರಿಂದಾಗಿ ಮೂಲೆಗುಂಪಾಗುತ್ತಿದ್ದ ಐಎಂಎಫ್‌ಗೆ ಈಗ ಹೊಸ ಜೀವ ಕೊಟ್ಟಂತಾಗಿದೆಯೆಂದು ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ವಿಶ್ಲೇಷಿಸಿದ್ದಾರೆ. ಕಳೆದ ಸಪ್ಟಂಬರ್‌ನ ಹಣಕಾಸು ಸುನಾಮಿಯ ನಂತರ ತನ್ನ ಯಜಮಾನಿಕೆಯನ್ನು ಕಳೆದುಕೊಳ್ಳಲಾರಂಭಿಸಿದ್ದ ಅಂತ್ರಾಷ್ಟ್ರೀಯ ಜಾಗತಿಕ ಬಂಡವಾಳ ಮತ್ತೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸುತ್ತಿದ್ದೆ ಈ ಭೀಷಣ ಬಿಕ್ಕಟ್ಟಿನ ಸಂದರ್ಭದಲ್ಲೂ ಅದು ಯಾವುದೇ ರಿಯಾಯ್ತಿಗಳನ್ನು ಕೊಡಲು ಸಿದ್ಧವಿಲ್ಲ ಎಂಬುದನ್ನು ಜಿ-20 ರ ಸಭೆ ತೋರಿಸುತ್ತಿದೆ ಎಂದು ಅವರು ಹೇಳುತ್ತಾರೆ.

ಭಾರತದಂತಹ ದೇಶಗಳು ಮೂರನೇ ಜಗತ್ತಿನ ಹಿತಾಸಕ್ತಿಗಳಿಗೆ ವಿಶ್ವಾಸಘಾತ ಬಗೆದಿರುವುದೇ ಇದಕ್ಕೆ ಕಾರಣ ಎಂದು ಅವರು ಹೇಳುತ್ತಾರೆ. ಮುಖ್ಯವಾಗಿ ಭಾರತ ಅಂತರ್‍ರಾಷ್ಟ್ರೀಯ ಬಂಡವಾಳದ ಪರವಾದ ನಿಲುವು ತಳೆಯಿತು, ಮೂರನೇ ಜಗತ್ತಿನ ದೇಶಗಳ ಹಿತಾಸಕ್ತಿಗಳಿಗಿಂತ ನಮ್ಮ ಪ್ರತಿನಿಧಿಗಳಿಗೆ ಅವರ ಹಿತಾಸಕ್ತಿಗಳೇ ಮುಖ್ಯವಾದವು. ನಮ್ಮ ಪ್ರಧಾನಿಗಳಂತೂ ಬ್ಯಾಂಕುಗಳಲ್ಲಿ ದೋಷ ಹುಡುಕುವು ದನ್ನು ನಿಲ್ಲಿಸಬೇಕು ಎಂದು ಎಚ್ಚರಿಸಿದರಂತೆ.

ಆದರೆ ಜಾಗತಿಕ ಬಿಕ್ಕಟ್ಟಿನ ತೀವ್ರತೆ ಎಷ್ಟಿದೆಯೆಂದರೆ ಅಂತರ್‍ರಾಷ್ಟ್ರೀಯ ಬಂಡವಾಳದ ಯಜಮಾನಿಕೆಯನ್ನು ಮತ್ತೆ ಸ್ಥಾಪಿಸುವ ಪ್ರಯತ್ನಗಳಿಗೆ ಬಲವಾದ ಪ್ರತಿರೋಧ, ಅಂತರ್‍ರಾಷ್ಟ್ರೀಯ ಹಣಕಾಸು ಸಂಸ್ಥೆಗಳನ್ನು ಪ್ರಜಾಪ್ರಭುತ್ವೀಕರಿಸುವ ಬೇಡಿಕೆ ಇನ್ನಷ್ಟು ಬಲಗೊಳ್ಳಲಿದೆ ಎಂದು ಪ್ರೊ: ಪ್ರಭಾತ್ ಪಟ್ನಾಯಕ್ ಹೇಳುತ್ತಾರೆ.

ಲೋಕಸಭಾ ಚುನಾವಣೆ 2009

ರಾಜ್ಯಗಳ ಸುತ್ತು — ಬಿಹಾರ

ಇಂಥಾ 'ದರೋಡೆಕೋರ'ನೊಬ್ಬ ಸಿಪಿಐ(ಎಂ) ಅಭ್ಯರ್ಥಿಯಾಗಿ.....


ರಾಜಕೀಯ ಅಪರಾಧೀಕರಣ ಅಂದರೆ ಎಷ್ಟೋ ಜನಕ್ಕೆ ತತ್‌ಕ್ಷಣ ನೆನಪಿಗೆ ಬರುವುದು ಬಿಹಾರ ರಾಜ್ಯ. ಸಿಪಿಐ(ಎಂ) ಶಾಸಕ ಅಜಿತ್ ಸರ್ಕಾರನ್ನು ಕೊಂದು ಜೈಲಿನಿಂದಲೇ ಲೋಕಸಭೆಗೆ ಗೆದ್ದ ಪಪ್ಪು ಯಾದವ್‌ನಂತಹ ಹಲವು ಕ್ರಿಮಿನಲ್‌ಗಳು ಚುನಾವಣಾ ಕಣದಲ್ಲೂ ಅಧಿಕಾರ ಸ್ಥಾನಗಳಲ್ಲೂ ಇರುವ ರಾಜ್ಯ ಬಿಹಾರ.

ಆದರೆ ಇಲ್ಲೊಂದು ಭಿನ್ನವಾದ ಕತೆ ಇದೆ. ಈ ಚಿತ್ರದಲ್ಲಿ ಕಬ್ಬಿಣದ ಸರಳುಗಳ ಹಿಂದೆ ನಿಂತಿರುವವರು ಬಲರಾಮ್ ಸಿಂಗ್ ಯಾದವ್.

ಸುಪೌಲ್ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಇವರು. ಏನು ಅಪರಾಧ ಮಾಡಿದ್ದಾರೆ ಇವರು. ದರೋಡೆಯಂತಹ ಕ್ರಿಮಿನಲ್ ಕೃತ್ಯ ಎಸಗಿದ್ದಾರೆ ಎಂದು ನಿತಿಶ್‌ಕುಮಾರ್ ಸರ್ಕಾರದ ಪೊಲೀಸರು ಇವರನ್ನು ಜೈಲಿನಲ್ಲಿಟ್ಟಿದ್ದಾರೆ.

'ದರೋಡೆ'ಯ ಕತೆ

ನೆರೆಯ ನೇಪಾಳ ದೇಶದಿಂದ ಬಿಹಾರಕ್ಕೆ ಹರಿದುಬರುವ ಕೋಸಿ ನದಿಯು ತನ್ನ ಪಾತ್ರ ಬದಲಿಸಿದ್ದರಿಂದ ಬಿಹಾರ 3, 4 ಜಿಲ್ಲೆಗಳಲ್ಲಿ ಉಂಟಾದ ಘೋರ ಪರಿಸ್ಥಿತಿಯ ಬಗೆಗೆ ದೇಶಕ್ಕೆ ಗೊತ್ತಿದೆ. ಪ್ರವಾಹ ಬಂದಾಗ ನಿರಾಶ್ರಿತರಿಗೆ ಒಂದು ವರ್ಷ ಆಹಾರಧಾನ್ಯ ನೀಡುವ ಭರವಸೆ ನೀಡಿದ ಜೆಡಿಯು ನೇತೃತ್ವದ ಸರ್ಕಾರ ಒಂದೇ ತಿಂಗಳಿಗೆ ಆಹಾರ ಧಾನ್ಯ ವಿತರಣೆ ಬಂದ್ ಮಾಡಿತು. ಇನ್ನೂ ಕೇಂದ್ರಸರ್ಕಾರವೂ ನಿರಾಶ್ರಿತರ ನೆರವಿಗೆ ಬರಲಿಲ್ಲ. ಭೀಕರ ಪ್ರವಾಹದ ಭಯಾನಕ ಪ್ರಹಾರಕ್ಕೆ ಸಿಲುಕಿ ಜನರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಜನಗಳನ್ನು ಸಂಘಟಿಸಿದ್ದು ಸಿಪಿಐ(ಎಂ) ಪಕ್ಷ. ಪ್ರವಾಹದ ಪ್ರಕೋಪದಿಂದ ಜನಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಹಾಗೂ ಪರಿಹಾರಕ್ಕಾಗಿ ಆಗ್ರಹಿಸುವ ಹೋರಾಟಗಳಿಗೆ ನೇತೃತ್ವ ನೀಡಿದವರಲ್ಲಿ ಬಲರಾಮ್‌ಸಿಂಗ್ ಯಾದವ್ ಸಹ ಒಬ್ಬ ಪ್ರಮುಖ ನಾಯಕರು.



ರಘೋಪುರ್ ಇಂತಹ ಒಂದು ಪ್ರದೇಶ. ಪರಿಹಾರದ ನ್ಯಾಯ ಸಿಗದ ಹತ್ತಾರು ಸಾವಿರ ಜನ ಸರ್ಕಾರ ಗೋದಾಮಿನ ಬಳಿ ಸೇರಿದರು. ಮುಖ್ಯಮಂತ್ರಿ ನೀಡಿದ ಭರವಸೆಯ ಜಾರಿಗೆ ಒತ್ತಾಯಿಸಿದರು. ಜನರ ಆಕ್ರೋಶ ಎದುರಿಸಲಾರದ ಅಧಿಕಾರಿಗಳು ಅಲ್ಲಿ ಓಟ ಕಿತ್ತರು. ಆಡಳಿತದಿಂದ ಸ್ಪಂದನ ಸಿಗದಿದ್ದರಿಂದ ಜನರು ಸರ್ಕಾರಿ ಗೋದಾಮಿನ ಬಾಗಿಲು ಒಡೆದು ಆಹಾರಧಾನ್ಯ ಹಂಚಿಕೊಂಡರು.

ಪ್ರಹಾರದಿಂದ ಕಂಗೆಟ್ಟು ಹಸಿವಿನಿಂದ ಕಂಗಾಲಾದ ಜನರ ಈ ಕ್ರಮದ ವಿರುದ್ಧ ಸರ್ಕಾರ ಜಿದ್ದಿಗೆ ಬಿದ್ದು 500ಕ್ಕೂ ಹೆಚ್ಚು ಜನರ ಮೇಲೆ ಡಕಾಯಿತಿ ಪ್ರಕರಣ ಹೂಡಿದೆ. ಹತ್ತಾರು ಸಿಪಿಐ(ಎಂ) ಮುಖಂಡರು ಕಾರ್ಯಕರ್ತರನ್ನು ಜೈಲಿಗೆ ಅಟ್ಟಲಾಗಿದೆ. ಘಟನೆ ನಡೆದ ದಿನ ದೂರದ ಊರಿನಲ್ಲೆಲ್ಲೋ ಇದ್ದ ಬಲರಾಮ್‌ಸಿಂಗ್ ಯಾದವ ಅವರನ್ನು ಪ್ರಕರಣದಲ್ಲಿ ಸೇರಿಸಲಾಗಿದೆ. ಸುಪೌಲ್ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿ ಕಛೇರಿಯಿಂದ ಹೊರಬಂದ ಕೂಡಲೇ ಬಲರಾಮ್ ಅವರನ್ನು ಬಂಧಿಸಲಾಗಿದೆ.

ರೈತಪರವಾದ ಪ್ರಚಂಡ ಹೋರಾಟಗಳಿಗೆ ಹೆಸರಾದ ಬಲರಾಮ್‌ಸಿಂಗ್ ಆಗಲಿ ಸಿಪಿಐ(ಎಂ) ಮುಖಂಡರು ಕಾರ್ಯಕರ್ತರೇ ಆಗಲಿ ಇದಕ್ಕೆಲ್ಲ ಜಗ್ಗುವ ಪೈಕಿ ಅಲ್ಲ. ಸಂಗಾತಿಗಳು ಜೈಲಿನೊಳಗಿದ್ದುಕೊಂಡು ಹೋರಾಟ ಸಾಗಿದೆ.

ಸಂಗಾತಿ ಬಲರಾಮ್‌ರವರ ಸ್ಪರ್ಧೆ ಪ್ರವಾಹ ಸಂತ್ರಸ್ತರಲ್ಲಿ ಅಪಾರ ಸ್ಫೂರ್ತಿ, ಧೈರ್ಯ ಮಾಡಿಸಿರುವುದಂತೂ ನಿಜ. ಫಲಿತಾಂಶ ಕಾದು ನೋಡೋಣ.

ಹೊಸ ಹುರುಪು

ಬಿಹಾರ ರಾಜ್ಯದಲ್ಲಿ ಸಿಪಿಐ(ಎಂ), ಸಿಪಿಐ ಹಾಗೂ ಸಿಪಿಐ(ಎಂ.ಎಲ್) ಪಕ್ಷಗಳು ಪರಸ್ಪರ ಹೊಂದಾಣಿಕೆಗೆ ಬಂದು ಕೈಜೋಡಿಸಿರುವುದು ಎಡಚಳುವಳಿಯ ಕಾರ್ಯಕರ್ತರು ಹಾಗೂ ಬೆಂಬಲಿಗರಲ್ಲಿ ಹೊಸ ಹುರುಪನ್ನು ಮೂಡಿಸಿದೆ. ಬೆಗುಸರೈ ಕ್ಷೇತ್ರದ ಸಿಪಿಐ ಅಭ್ಯರ್ಥಿಯು ಈ ಮೂರು ಪಕ್ಷಗಳ ಬೆಂಬಲದಿಂದಾಗಿ ಉಳಿದ ಬಿಜೆಪಿ, ಜೆಡಿಯು, ಆರ್.ಜೆಡಿ, ಎಲ್‌ಜೆಪಿ ಕೂಟಗಳ ಅಭ್ಯರ್ಥಿಗಳಿಗಿಂತಲೂ ಮುಂದಿದ್ದಾರೆಂಬ ವರದಿಯೂ ಇನ್ನಷ್ಟು ಹುರುಪು ತಂದಿದೆ.

ಬಗಲ್‌ಪುರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಮಾಜಿ ಸಂಸದ ಸುಭೋಧ್ ರಾಯ್ ಕಣದಲ್ಲಿದ್ದಾರೆ. 2004 ರ ಚುನಾವಣೆಯಲ್ಲಿ ಇವರು ಶೇ.30ರಷ್ಟು ಮತ ಪಡೆದು ಎರಡನೇ ಸ್ಥಾನದಲ್ಲಿದ್ದರು. ಇದೂ ಭೂಮಿ ಹೋರಾಟದ ಕಣ. ಕಮ್ಯೂನಿಸ್ಟ್ ಚಳುವಳಿಯ ಹಳೆಯ ನೆಲೆ. ಸಿಪಿಐ(ಎಂ)ನ ವ್ಯಾಪಕ ಸಂಘಟನೆ, ಹಲವು ಭಾಗಗಳಲ್ಲಿ ಸಿಪಿಐ ಗಳಿಸಿರುವ ನೆಲೆಯೂ ಸ್ಪರ್ಧೆಗೆ ಬಲ ನೀಡಿದೆ. ಸುಭೋದರಾಯ್ ಈ ಬಾರಿ ಗೆಲ್ಲುವರೆಂಬ ನಿರೀಕ್ಷೆಗೆ ಇವೆಲ್ಲಾ ಆಧಾರವಾಗಿದೆ.

ಟೆಕ್ಸ್‌ಟೈಲ್ ಕಾರ್ಮಿಕವರ್ಗ ಭಗಲ್‌ಪುರದ ಒಂದು ಗಣನೀಯ ವಿಭಾಗ. ಎಡಪಕ್ಷಗಳ ಒಗ್ಗಟ್ಟು ಅವರಲ್ಲಿ ಹೊಸ ಉತ್ಸಾಹ ತಂದಿದೆ. ಬಹುತೇಕ ಮುಸ್ಲಿಮರಾದ ಈ ಸಮುದಾಯದಲ್ಲಿ ಬಿಜೆಪಿಯ ದೇಶದ ಏಕೈಕ ಮುಸ್ಲಿಂ ಸಂಸದರೂ, ಆ ಪಕ್ಷದ ಮುಸ್ಲಿಂ ಮುಖವಾಡವೂ ಆಗಿರುವ ಶಹನವಾಜ್ ಹುಸೇನ್ ಅವರ ಬಗೆಗೆ ಭ್ರಮಾ ನಿರಸನದ ಭಾವನೆ ಎದ್ದುಕಾಣುತ್ತಿದೆ. ಆರ್‌ಜೆಡಿ, ಎಲ್‌ಜೆಪಿ ಯ ಕೂಟದ ಅಭ್ಯರ್ಥಿ ಶಕುನಿ ಚೌಧರಿ ಹೆಸರಿಗೆ ತಕ್ಕಂತೆ ರಾಜಕೀಯ ಕುತಂತ್ರ, ಮೋಸಕ್ಕೆ ಕುಖ್ಯಾತವಾಗಿದ್ದು ಈ ಯಾವ ಅಭ್ಯರ್ಥಿಗೆ ಹೋಲಿಸಿದರೂ ಸಿಪಿಐ(ಎಂ) ಅಭ್ಯರ್ಥಿ ಗೆಲುವಿಗೆ ಅರ್ಹವಾದ ಅಭ್ಯರ್ಥಿಯಾಗಿ ಜನರ ಮುಂದಿದ್ದಾರೆ.

ಉತ್ತರ ಪ್ರದೇಶ : ಫಲಿತಾಂಶ ಏನು?

80 ಲೋಕಸಭಾ ಸ್ಥಾನಗಳಿವೆ ಎಂಬ ಕಾರಣಕ್ಕೆ ಹಾಗೂ ಇತರ ಹಲವು ಕಾರಣಗಳಿಗಾಗಿ ಇಡೀ ದೇಶದ ಕಣ್ಣು ಉತ್ತರ ಪ್ರದೇಶದ ಮೇಲಿದೆ.

ಬಹಳ ದೀರ್ಘಕಾಲ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪ್ರಾಬಲ್ಯವಿತ್ತು. ಕೇಂದ್ರದಲ್ಲಿ ಕಾಂಗ್ರೆಸ್‌ನ ಆಳ್ವಿಕೆಗೂ ಒಂದು ಭದ್ರ ಆಧಾರವಾಗಿತ್ತು. ಕಾಂಗ್ರೆಸ್‌ನ ಜನವಿರೋಧಿ ನೀತಿಗಳಿಂದ ಭ್ರಮನಿರಸನಗೊಂಡ ಮತದಾರರನ್ನು ಬಿಜೆಪಿ ತನ್ನ ಕೋಮುವಾದಿ ತಂತ್ರಗಳಿಂದ ಮರುಳು ಮಾಡಲು ಯತ್ನಿಸಿತು.

ಬಾಬರಿಮಸೀದಿ-ರಾಮಮಂದಿರ ವಿವಾದದ ಆಧಾರದಲ್ಲಿ ಕೋಮುವಾದಿ ಉನ್ಮಾದ ಸೃಷ್ಟಿಸಿ, ಕೋಮು ಧ್ರುವೀಕರಣದ ಮೂಲಕ ರಾಜ್ಯದಲ್ಲಿ ಒಂದು ಹಂತದಲ್ಲಿ ಬಿಜೆಪಿ ರಾಜಕೀಯ ಲಾಭ ಗಿಟ್ಟಿಸಿತ್ತು. 1998ರಲ್ಲಿ 52 ಸ್ಥಾನಗಳನ್ನು 1998 ರಲ್ಲಿ 57 ಸ್ಥಾನಗಳನ್ನು ಪಡೆದ ಬಿಜೆಪಿಯ ನಿಜವಾದ ಮುಖದರ್ಶನವಾದ ಮೇಲೆ ಬಿಜೆಪಿಯ ಪ್ರಾಬಲ್ಯವೂ ಕುಸಿಯಿತು.

2004ರ ಲೋಕಸಭಾ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷ 19 ಸ್ಥಾನ, ಸಮಾಜವಾದಿ 36 ಸ್ಥಾನ, ಬಿಜೆಪಿ 10 ಸ್ಥಾನ, ಕಾಂಗ್ರೆಸ್ 9 ಸ್ಥಾನಗಳನ್ನು ಗಳಿಸಿವೆ.

2004ರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಸಮಾಜವಾದಿ ಪಕ್ಷ ಈಗ ಮುಖ್ಯ ವಿರೋಧ ಪಕ್ಷದ ಸ್ಥಾನದಲ್ಲಿದೆ. 16 ವರ್ಷಗಳ ಕಾಲದ ಅತಂತ್ರ ವಿಧಾನಸಭೆಯ ಪರಂಪರೆಗೆ ಕೊನೆ ಹಾಡಿ ಬಿಎಸ್‌ಪಿ ಈಗ ಅಧಿಕಾರಕ್ಕೇರಿದೆ.

ಮೂರನೇ ಪರ್ಯಾಯದೊಂದಿಗೆ ಗುರುತಿಸಿ ಕೊಂಡಿರುವ ಬಿಎಸ್‌ಪಿಯು ತಾತ್ವಿಕವಾಗಿ ಯಾವುದೇ ಪಕ್ಷದೊಂದಿಗೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂಬ ಧೋರಣೆ ತಳೆದಿರುವುದರಿಂದ ಎಡಪಕ್ಷಗಳು ಉತ್ತರಪ್ರದೇಶದಲ್ಲಿ ತಾವೇ ಸ್ಪರ್ಧಿಸುತ್ತಿವೆ.

ಆಂಧ್ರ, ತಮಿಳುನಾಡು ಮುಂತಾದ ರಾಜ್ಯಗಳಲ್ಲಿರುವಂತೆ ರಾಜ್ಯ ವ್ಯಾಪಿ ಉತ್ತಮ ಪ್ರಭಾವ, ಬಲವಾದ ಸಂಘಟನೆ ಇಲ್ಲದಿದ್ದರೂ ಚಳುವಳಿ ಇರುವ ಕಡೆಗಳಲ್ಲಿ ಜನಪರ ಬದ್ಧತೆಯೊಂದಿಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ಶ್ರಮಿಸುತ್ತಿವೆ. ಸಿಪಿಐ(ಎಂ) ಅಜಮ್‌ಗಢ, ಹಾಗೂ ಫಿರೋಜಾಬಾದ್ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಇಲ್ಲಿ ಕ್ರಮವಾಗಿ ಅರುಣ್ ಕುಮಾರ್ ಸಿಂಗ್ ಹಾಗೂ ರಜ್ಜೋದೇವಿ ಅಭ್ಯರ್ಥಿಗಳಾಗಿದ್ದಾರೆ.

ಫಿರೋಜಾಬಾದ್ ಜಿಲ್ಲೆಯಲ್ಲಿ ಸುಮಾರು 3 ಲಕ್ಷ ಕಾರ್ಮಿಕರು ಮತ್ತು ರೈತರು ನೇರವಾಗಿ ಇಲ್ಲಿನ ಬಳೆ ಮತ್ತು ಗಾಜು ತಯಾರಿಕಾ ಉದ್ದಿಮೆಯನ್ನು ಆಶ್ರಯಿಸಿದ್ದಾರೆ. ರಜ್ಜೋದೇವಿ ಒಬ್ಬ ಅವಿಶ್ರಾಂತ ಹೋರಾಟಗಾರ್ತಿ. ಅವರು ಜಿಲ್ಲೆಯಾದ್ಯಂತ ಕಾರ್ಮಿಕರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ದುಡಿಮೆಗೆ ತಕ್ಕ ನ್ಯಾಯಯುತ ಪಾಲಿಗಾಗಿ ಹೋರಾಡುತ್ತಿದ್ದಾರೆ. ರಜ್ಜೋದೇವಿ ನೇತೃತ್ವದ ಹೋರಾಟದಿಂದಾಗಿ ಗಾಜು ತಯಾರಿಕಾ ಉದ್ದಿಮೆಯಲ್ಲಿ ಕಾರ್ಮಿಕರಿಗೆ ಎಂಟು ಗಂಟೆಗಳ ದುಡಿಮೆಯ ಅವಧಿ ಜಾರಿಗೆ ಬಂದಿದೆ. ಇದಲ್ಲದೆ ರಜ್ಜೋದೇವಿ, ಕ್ಷೇತ್ರದಲ್ಲಿನ ಕುಡಿಯುವ ನೀರಿನ ತೊಂದರೆ ವಿರುದ್ಧ ವಿದ್ಯುತ್, ಆಸ್ಪತ್ರೆ ಸೌಕರ್ಯ, ಶಾಲಾ ಕಾಲೇಜು ಮುಂತಾದ ಮೂಲಭೂತ ಸೌಕರ್ಯಗಳಿಗಾಗಿ ದನಿ ಎತ್ತಿದವರಾಗಿದ್ದಾರೆ. ಲೋಕಸಭಾ ಚುನಾವಣೆಯೂ ಹೋರಾಟದ ಒಂದು ಭಾಗವೆಂಬ ನೆಲೆಯಲ್ಲಿ ಸಿಪಿಐ(ಎಂ) ಜನರ ನಡುವೆ ಮತ ಯಾಚಿಸುತ್ತಿದೆ.

ಉತ್ತರ ಪ್ರದೇಶದ ರಾಜಕೀಯ ಪರಿಸ್ಥಿತಿ ಸರಳವಾಗಿಲ್ಲ ಸಂಕೀರ್ಣವಾಗಿದೆ. ಬಾಬರಿ ಮಸೀದಿ ಉರುಳಿಬಿದ್ದಾಗ ರಾಜ್ಯದ ಮುಖ್ಯಮಂತ್ರಿ ಯಾಗಿದ್ದ ಕಲ್ಯಾಣಸಿಂಗ್ ಬಿಜೆಪಿ ತೊರೆದು ಎಸ್.ಪಿ.ತೆಕ್ಕೆಗೆ ಸರಿದಿದ್ದಾರೆ. ಕಲ್ಯಾಣ್‌ಸಿಂಗ್ ಹಿಂದೆ ಬರುವ ಹಿಂದುಳಿದ ಲೋಧ್ ಸಮುದಾಯದ ಮತಗಳನ್ನು ಎಸ್.ಪಿ. ನೆಚ್ಚಿಕೊಂಡಿದೆ. ಬಾಬರಿ ಮಸೀದಿ ನಾಶಕ್ಕೆ ಪ್ರಮುಖ ಹೊಣೆಗಾರರಾದ ಕಲ್ಯಾಣ್‌ಸಿಂಗ್ ಆಗಮನದಿಂದ ಎಸ್.ಪಿ.ಯೊಳಗೆ ತಳಮಳ ಗಳಿದ್ದಿದ್ದು, ಮುಸ್ಲಿಂ ಮುಖಂಡರು ಮುನಿದಿದ್ದಾರೆ. ಮತ್ತೊಂದು ಕಡೆ ಕಾಂಗ್ರೆಸ್‌ನೊಂದಿಗೆ ಮೈತ್ರಿ ಕೈಗೂಡಲಿಲ್ಲ. ಇದೇ ಅವಕಾಶ ಬಳಸಿ ಪಕ್ಷವನ್ನು ಪುನಶ್ಚೇತನಗೊಳಿಸಲು ಕಾಂಗ್ರೆಸ್ ಯತ್ನಿಸುತ್ತಿದೆ. ಅಜಿತ್‌ಸಿಂಗ್‌ರ ರಾಷ್ಟ್ರೀಯ ಲೋಕದಳ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡು ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ತನ್ನ ಪ್ರಾತಿನಿಧ್ಯ ಹೆಚ್ಚಿಸಿಕೊಳ್ಳುವ ಪ್ರಯತ್ನವನ್ನು ಬಿಜೆಪಿ ನಡೆಸಿದ್ದು, ಮತ್ತೆ ಹಳೇ ರಾಮಮಂದಿರದ ರಾಗ ಹಾಡಿ ಜನರನ್ನು ವಿಭಜಿಸುವ ಅಪಾಯಕಾರಿ ತಂತ್ರಕ್ಕೆ ಬಿಜೆಪಿ ಮೊರೆ ಹೋಗಿದೆ. ಜಾತಿ ಲೆಕ್ಕಾಚಾರ, ಓಲೈಕೆಗಳು ಉತ್ತರ ಪ್ರದೇಶದ ರಾಜಕಾರಣದ ಮತ್ತೊಂದು ಪ್ರಧಾನ ತಂತ್ರವಾಗಿ ಬೆಳೆದು ನಿಂತಿರುವ ಪರಿಸ್ಥಿತಿಯಲ್ಲಿ ಯಾವ ಪರಿಯ ಫಲಿತಾಂಶವನ್ನು ಬರಲಿದೆ ಎಂಬುದನ್ನು ಕಾದುನೋಡಬೇಕಿದೆ.

ಲೋಕಸಭಾ ಚುನಾವಣೆ 2009

ರಾಜ್ಯಗಳ ಸುತ್ತು

ಪಶ್ಚಿಮ ಬಂಗಾಳ

ಎಡರಂಗದ ಸ್ಪಷ್ಟ ಮುನ್ನಡೆ

ಲೋಕಸಭಾ ಚುನಾವಣೆಯ ಕೊನೆಯ ಹಂತದ ಮತದಾನ ಮಾತ್ರ ಬಾಕಿ ಉಳಿದಿದೆ. ಈ ಹಂತದಲ್ಲಿ ಪಶ್ಚಿಮ ಬಂಗಾಳದಿಂದ ಬರುತ್ತಿರುವ ವರದಿಗಳೇನು. ನಂದಿಗ್ರಾಮದಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ತೃಣಮೂಲ ಕಾರ್ಯಕರ್ತರಿಂದ ಬಾಂಬ್ ಎಸೆತ, ಕೊಲೆ, ಹಲ್ಲೆಗಳು, ಹಲವಾರು ಸಿಪಿಐ(ಎಂ) ಕಾರ್ಯಕರ್ತರು ಈ ಹಲ್ಲೆಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ.

ಹೇಗಾದರೂ ಸರಿ ಎಡರಂಗವನ್ನು ಹಿಮ್ಮೆಟ್ಟಿಸಬೇಕು. ಅದು ವಿರೋಧಿಗಳ ಗುರಿ. ಉಹುಂ, ಅದು ಅಷ್ಟು ಸುಲಭದ ಮಾತಲ್ಲ. ಪಶ್ಚಿಮ ಬಂಗಾಳದ ದುಡಿಯುವ ಜನ ಕಾರ್ಮಿಕರು, ರೈತರು, ಕೂಲಿಕಾರರು ಮುಂತಾದವರು ಕಾರ್ಮಿಕರು ರೈತರು, ಕೂಲಿಕಾರರಾಗೇ ಸಂಘಟಿಸಲ್ಪಟ್ಟವರು. ಜಾತಿ, ಧರ್ಮ, ಭಾಷೆ ಇತ್ಯಾದಿಗಳ ಹೆಸರಿನಲ್ಲಿ ಕೆರಳಿಸಿ ಭಾವೋದ್ವೇಗಗೊಳಿಸಿ ಗಳಿಸಿರುವುದಲ್ಲ ಅವರ ಬೆಂಬಲ. ಅವರಲ್ಲಿ ವರ್ಗಪ್ರಜ್ಞೆ ಜಾಗೃತವಾಗಿದೆ. ರಾಜ್ಯದ ಅಭಿವೃದ್ಧಿಗೆ ಹಾಗೂ ಜನರ ಹಿತರಕ್ಷಣೆ 'ಯಾರು ಹಿತವರು' ಎಂಬುದು ಅವರಿಗೆ ಚೆನ್ನಾಗಿ ತಿಳಿದಿದೆ.

ಎಡರಂಗ ವಿರೋಧಿಗಳ ಹಿಂಸೆ, ದಾಳಿ ಹಲ್ಲೆಗಳು, ಅಪಪ್ರಚಾರಗಳ ನಡುವೆಯೂ ಎಡರಂಗ ಮುನ್ನಡೆದಿದೆ. ಕಳೆದ ಪಂಚಾಯತ್ ಚುನಾವಣೆಯ ಫಲಿತಾಂಶದ ಆಧಾರದಲ್ಲೆ ಎಡರಂಗದ ಕುಸಿತವನ್ನು ನಿರೀಕ್ಷಿಸುತ್ತಿರುವವರಿಗೆ ನಿರಾಶೆ ಕಾದಿದೆ. ಏಕೆಂದರೆ ಕಳೆದ ಪಂಚಾಯತ್ ಚುನಾವಣೆಯಲ್ಲಿ ಕೆಲವು ಜಿಲ್ಲೆಗಳಲ್ಲಿ ಎಡರಂಗಕ್ಕೆ ಹಿನ್ನಡೆ ಆಗುವುದಕ್ಕೆ ಎಡರಂಗದ ಅಂಗಪಕ್ಷಗಳ ನಡುವಿನ ಮೈತ್ರಿಯೂ ಸಂಪೂರ್ಣ ಸಫಲವಾಗದೆ ಪರಸ್ಪರರ ವಿರುದ್ಧ ಸ್ಪರ್ಧೆ ಏರ್ಪಟ್ಟದ್ದು ಒಂದು ಕಾರಣ. ಇದು ಪಂಚಾಯತ್



ಚುನಾವಣೆ ಅಲ್ಲ. ಲೋಕಸಭಾ ಚುನಾವಣೆ. ಈಗ ಎಡರಂಗದ ನಡುವೆ ಸದೃಢ ಐಕ್ಯತೆ ಏರ್ಪಟ್ಟಿದೆ.

ಕಳೆದ ಪಂಚಾಯತ್ ಚುನಾವಣೆಯಲ್ಲಿ ಒಟ್ಟು 64 ಸಾವಿರಕ್ಕೂ ಹೆಚ್ಚಿನ ಗ್ರಾಮೀಣ ಕ್ಷೇತ್ರಗಳಲ್ಲಿ ಸುಮಾರು 9400ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಫಾರ್ವರ್ಡ್ ಬ್ಲಾಕ್ ಸಿಪಿಐ(ಎಂ)ನೊಂದಿಗೆ ಹೊಂದಾಣಿಕೆಗೆ ಬರಲು ಸಾಧ್ಯವಾಗಿರಲಿಲ್ಲ. ಎಡರಂಗದಲ್ಲಿ ಅನೈಕ್ಯತೆ ಇತ್ತು. ಅದೇ 7,500 ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಆರ್‌ಎಸ್‌ಪಿ ಪಕ್ಷವು ಸಿಪಿಐ(ಎಂ)ನೊಂದಿಗೆ ಹೊಂದಾಣಿಕೆಗೆ ಬರಲು ಸಾಧ್ಯವಾಗಿರಲಿಲ್ಲ. ಇಲ್ಲೂ ಅನೈಕ್ಯತೆ ಏರ್ಪಟ್ಟಿತ್ತು. ಇಲ್ಲೆಲ್ಲಾ ಈ ಪಕ್ಷಗಳು ಪರಸ್ಪರ ವಿರುದ್ಧವೇ ಸ್ಪರ್ಧಿಸಿದ್ದವು. ಈಗ ಅಂತಹ ಪರಿಸ್ಥಿತಿ ಇಲ್ಲ.

ಕಳೆದ ಬಾರಿ ಪಂಚಾಯತ್ ಚುನಾವಣೆಗಳಲ್ಲಿ ಎಡರಂಗದ ಅಂಗಪಕ್ಷಗಳು ಒಟ್ಟಾರೆ ಶೇ.52.75 ರಷ್ಟು ಮತ ಪಡೆದಿದ್ದರೂ ಪರಸ್ಪರರ ನಡುವಿನ ಸ್ಪರ್ಧೆಯಿಂದ ವಿರೋಧ ಪಕ್ಷಗಳಗಳಿಗೆ ಸ್ವಲ್ಪ ಲಾಭವಾಗಿತ್ತು. ಆಗ ಕಾಂಗ್ರೆಸ್ ಪಕ್ಷವು 14.3 ಶೇ. ಮತವನ್ನು ತೃಣಮೂಲ ಕಾಂಗ್ರೆಸ್ ಪಕ್ಷವು 24.6 ಶೇ ಮತವನ್ನು ಗಳಿಸಿದ್ದವು. ವಿರೋಧ ಪಕ್ಷಗಳು ಒಟ್ಟಾರೆ ಕೇವಲ 38.9 ಮತ ಗಳಿಸಿದ್ದರೂ ಮೊದಲು ಎಡರಂಗ ಬಹುಮತ ಹೊಂದಿದ್ದ ಎರಡು ಜಿಲ್ಲೆಗಳಲ್ಲಿ ಮೇಲುಗೈ ಸಾಧಿಸಲು ಸಾಧ್ಯವಾಗಿತ್ತು. ಈ ಬಾರಿ ಎಡರಂಗದ ಎಲ್ಲ ಪಕ್ಷಗಳೂ ಪಶ್ಚಿಮ ಬಂಗಾಳದಿಂದ ಗರಿಷ್ಠ ಸಂಖ್ಯೆಯು ಎಡರಂಗದ ಸಂಸದರನ್ನು ಆರಿಸಿ ಕಳಿಸಲು ಶಕ್ತಿಮೀರಿ ಶ್ರಮಿಸುತ್ತಿವೆ.

ಎಲ್ಲಿಯ ಹೋಲಿಕೆ!?

ಪಶ್ಚಿಮ ಬಂಗಾಳಕ್ಕೆ ಹೆಲಿಕಾಪ್ಟರ್, ವಿಮಾನಗಳಲ್ಲಿ ಹೊರಗಿನಿಂದ ಹಾರಿ ಬಂದು ನೋಡಿ ಹಾಗೆ ಹಾರಿ ಹೋಗುವ ಕೆಲವು ಮುಖಂಡರು ಪಶ್ಚಿಮ ಬಂಗಾಳದ ಬಡತನ, ಹಿಂದುಳಿದಿರುವಿಕೆಗೆ ಬಗೆಗೆ ಮಾತನಾಡಿದ್ದರಲ್ಲವೇ? ಅವರು ಅಮೇಥಿ-ರಾಯ್ ಬರೇಲಿಗೂ ಪಶ್ಚಿಮ ಬಂಗಾಳದ ಪುರುಲಿಯಾಕ್ಕೂ ಹೋಲಿಸಿದ್ದರಲ್ಲವೇ? ಇದೋ ಇಲ್ಲಿದೆ ಕೇಂದ್ರ ಸರ್ಕಾರದ ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ ವಿವಿಧ ಪ್ರಕಟಣೆಗಳಿಂದ, ಕೇಂದ್ರ ಸರ್ಕಾರದ ಇತರ ಮೂಲಗಳಿಂದ ಸಂಗ್ರಹಿಸಲಾದ ಅಂಕಿಸಂಖ್ಯೆಗಳ ತುಲನಾತ್ಮಕ ವಿವರ.

ರಾಯ್‌ಬರೇಲಿ, ಅಮೇಥಿಗಳು ಬಹುಕಾಲ ದೇಶವನ್ನಾಳಿದ ಮತ್ತು ಮುಂದೆಯೂ ವಂಶಪಾರಂಪರ್ಯವಾಗಿ ದೇಶವನ್ನು ಆಳಲು ಬಯಸುವ 'ಆಗಿ ಹೋದ ಪ್ರಧಾನಿ' ಹಾಗೂ 'ಬಾವಿ ಪ್ರಧಾನಿ'ಗಳ ಕ್ಷೇತ್ರ ಎಂಬುದನ್ನು ಮರೆತರೂ ಈ ಕ್ಷೇತ್ರಗಳಲ್ಲಿ ಪುರುಲಿಯಾವೇ ಪ್ರಗತಿಯಲ್ಲಿ ಮುಂದಿದೆ.



ಲಾಲ್‌ಗರ್‌ನಲ್ಲಿ ಗೂಂಡಾಗಳಿಗೆ ಬಲಿಯಾಗಿರುವ ಕಾಂ. ನಂದಾಲಾಲ್

ಎಲ್ಲಿಯ ಹೋಲಿಕೆ ?


ವಿವರ (ಶೇ.ವಾರು)	ಅಮೇಥಿ ರಾಯ್‌ಬರೇಲಿ	ಪುರುಲಿಯಾ
ಬಡತನರೇಖೆಯ ಕೆಳಗಿನ ಜನಸಂಖ್ಯೆ	54	31
ನಗರ ಜನಸಂಖ್ಯೆ	07	11
ವಿದ್ಯುತ್ ಸಂಪರ್ಕ ಹೊಂದಿರುವ ಮನೆ	14	29
ಸ್ಥಿರ ದೂರವಾಣಿ ಸಂಪರ್ಕ	06	06
ತಲಾವಾರು ಖರ್ಚು	385	461
ಉದ್ಯೋಗ ಪಾಲ್ಗೊಳ್ಳುವಿಕೆ	34	45
ಮಹಿಳಾ ಉದ್ಯೋಗ ಪಾಲ್ಗೊಳ್ಳುವಿಕೆ	24	37
ಸಾಕ್ಷರತೆ	62	63
ರೋಗ ನಿರೋಧಕ ಲಸಿಕೆ ಲಭ್ಯತೆ	16	84
ಶಿಶುಮರಣ ಸಂಖ್ಯೆ	83 (ಸಾವಿರಕ್ಕೆ)	46 (ಸಾವಿರಕ್ಕೆ)
5 ವರ್ಷದೊಳಗಿನ ಮಕ್ಕಳ ಸಾವು	160 (ಸಾವಿರಕ್ಕೆ)	89 (ಸಾವಿರಕ್ಕೆ)

ಮಹಾರಾಷ್ಟ್ರ : ಎಲ್‌ಡಿಎಫ್ ಕೂಟದ ಉತ್ಸಾಹಭರಿತ ಸ್ಪರ್ಧೆ

48 ಲೋಕಸಭಾ ಸ್ಥಾನವಿರುವ ಮಹಾರಾಷ್ಟ್ರ ದೇಶದ ಎರಡನೇ ಅತಿ ದೊಡ್ಡ ರಾಜ್ಯ ಎಂದ ಮೇಲೆ ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಅದರ ಮಹತ್ವವನ್ನು ವಿವರಿಸುವುದೇ ಬೇಕಿಲ್ಲ.

ಕಾಂಗ್ರೆಸ್-ಎನ್‌ಸಿಪಿಗಳ ಮೈತ್ರಿ ಸರ್ಕಾರ ಇಲ್ಲಿ ಅಧಿಕಾರದಲ್ಲಿದೆ. ಕೇಂದ್ರ ಯುಪಿಎ ಸರ್ಕಾರದಲ್ಲಿ ಯುಪಿಎ ಭಾಗಿಯಾಗಿದೆ. ಪವಾರ್ ಅಲ್ಲಿ ಕೃಷಿ ಮಂತ್ರಿ. ಮಹಾರಾಷ್ಟ್ರ ಬಿಟ್ಟರೆ ಎನ್‌ಸಿಪಿಗೆ ಕಾಂಗ್ರೆಸ್ ಜೊತೆ ಎಲ್ಲೂ ಮೈತ್ರಿ ಇಲ್ಲ. ಅದು ಮೂರನೇ ಪರ್ಯಾಯದ ಜೊತೆ ಗುರುತಿಸಿಕೊಂಡಿದೆ.

ಬಿಜೆಪಿ-ಶಿವಸೇನೆ ಮೈತ್ರಿ, ಹಾಗೂ ಕಾಂಗ್ರೆಸ್-ಎನ್‌ಸಿಪಿ ಮೈತ್ರಿಗಳಿಗೆ ಬದಲಿಯಾಗಿ ರಾಜ್ಯದಲ್ಲಿ ಎಡಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ರೂಪುಗೊಂಡಿದೆ. ಸಿಪಿಐ(ಎಂ), ಸಿಪಿಐ, ರೈತ-ಕಾರ್ಮಿಕರ ಪಕ್ಷ (ಪಿಡಿಪಿ) ಜೆಡಿ(ಎಸ್), ಸಮಾಜವಾದಿ ರಂಗಗಳು ಈ ಎಲ್‌ಡಿಎಫ್‌ನ ಭಾಗವಾಗಿವೆ. ಇದಲ್ಲದೆ ಕುಣಬಿ ಸೇನಾ, ಭೂಮಿ ಸೇನಾ, ಲೋಕಭಾರತಿ ಮುಂತಾದ ಸಂಘಟನೆಗಳ ಈ ರಂಗದ ಬೆಂಬಲಕ್ಕೆ ನಿಂತಿವೆ.



ಪಾಲ್‌ಗರ್ ಕ್ಷೇತ್ರದಲ್ಲಿ ಮಾಜಿ ಸಂಸದರು ಹಾಗೂ ಮೂರು ಬಾರಿ ಶಾಸಕರಾಗಿದ್ದ ಲಹನು ಶಿದ್ವ ಕೋಮ್ ಈ ಬಾರಿ ಸಿಪಿಐ(ಎಂ) ಅಭ್ಯರ್ಥಿಯಾಗಿದ್ದರೆ, ಈಗ ಆರನೇ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಜನಪ್ರಿಯ ಶಾಸಕ ಜೀವ ಪಾಂಡು ಗವಿತ್ ಅವರು ದಿಂಡೋರಿ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿಯಾಗಿದ್ದಾರೆ. ಈ ಇಬ್ಬರೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದು, ಅಖಿಲ ಭಾರತ ಕಿಸಾನ್ ಸಭಾದ ಹಿರಿಯ ಮುಖಂಡರೂ ಆಗಿದ್ದಾರೆ. ಹಲವು ದಶಕಗಳ ಹೋರಾಟದ ಅನುಭವವುಳ್ಳ ಈ ಮುಖಂಡರ ಆಯ್ಕೆ ಖಂಡಿತವಾಗಿಯೂ ಮಹಾರಾಷ್ಟ್ರದ ಜನರ ದನಿ ಪಾರ್ಲಿಮೆಂಟ್‌ನ್ನು ತಲುಪಲು ಸಹಕಾರಿಯಾಗಲಿದೆ.

ಈ ಎರಡೂ ಕ್ಷೇತ್ರಗಳಲ್ಲಿ ಎಲ್‌ಡಿಎಫ್‌ನ ಉಳಿದ ಪಕ್ಷಗಳು ಹಾಗೂ ಸಂಘಟನೆಗಳೂ ಸಿಪಿಐ(ಎಂ) ಅನ್ನು ಬೆಂಬಲಿಸುತ್ತಿವೆ. ದಿಂಡೋರಿಯಲ್ಲಿ ಸಿಪಿಐ(ಎಂ)ಗೆ ಬಿಜೆಪಿ, ಎನ್‌ಸಿಪಿ ಅಭ್ಯರ್ಥಿಗಳು ಪ್ರಮುಖ ಸ್ಪರ್ಧಿಗಳಾಗಿದ್ದರೆ. ಪಾಲ್‌ಗರ್‌ನಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳು ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ.

ತ್ರಿಪುರ : ಭರ್ಜರಿ ಗೆಲುವಿನ ಖಚಿತ ಭರವಸೆ

ತ್ರಿಪುರ -ಈಶಾನ್ಯ ಭಾರತದ ಒಂದು ಪುಟ್ಟ ರಾಜ್ಯ. ಈ ರಾಜ್ಯದ ಎರಡು ಲೋಕಸಭೆಗಳಲ್ಲಿ ಯಾರು ಗೆಲ್ಲುತ್ತಾರೆಂದು ಯಾರೂ ಹೆಚ್ಚು ಕೂಡಿ, ಕಳೆದು ಗುಣಿಸುವ ಲೆಕ್ಕಾಚಾರ ಮಾಡುವ ಅಗತ್ಯವೇ ಇಲ್ಲ. ಇಲ್ಲಿನ ಎರಡೂ ಸ್ಥಾನಗಳಲ್ಲಿ ಗೆಲುವು ರಾಜ್ಯದ ಅಧಿಕಾರರೂಢ ಎಡರಂಗದ ಪರವಾಗಿ ಅಭ್ಯರ್ಥಿಗಳಾಗಿರುವ ಸಿಪಿಐ(ಎಂ) ಸ್ಪರ್ಧಿಗಳದ್ದೇ ಎಂದು ಖಚಿತವಾಗಿ ಹೇಳಿಬಿಡಬಹುದು. ಗೆಲುವು ಅಷ್ಟೇ ಅಲ್ಲ ಭರ್ಜರಿ ಅಂತರದ ಗೆಲುವೇ ಅದು. ಅನುಮಾನವೇ ಇಲ್ಲ.

ದೃಢ ವಿಶ್ವಾಸದ ಆಧಾರವೇನು?

ಇಂತಹ ದೃಢ ವಿಶ್ವಾಸಕ್ಕೆ ಆಧಾರವೇನು? ಸತತವಾಗಿ ಕಳೆದ ನಾಲ್ಕು ವಿಧಾನಸಭಾ ಚುನಾವಣೆಯಲ್ಲಿ ಜನಾದೇಶ ಪಡೆದು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರದ ಜನಪರ ಧೋರಣೆಯೇ ಈ ದೃಢವಿಶ್ವಾಸಕ್ಕೆ ಆಧಾರ.

ಪಶ್ಚಿಮ ಬಂಗಾಳದಲ್ಲಿ ಮೊತ್ತಮೊದಲ ಬಾರಿಗೆ 1977 ರಲ್ಲಿ ಸಿಪಿಐ(ಎಂ) ಏಕಾಂಗಿಯಾಗಿ ಮೂರನೇ ಎರಡರಷ್ಟು ಬಹುಮತಗಳಿಸಿ ಅಧಿಕಾರಕ್ಕೆ ಬಂತು. ಇದರ ಬೆನ್ನ ಹಿಂದೆಯೇ ತ್ರಿಪುರದಲ್ಲೂ ಸಿಪಿಐ(ಎಂ) 1978 ರಲ್ಲಿ ಬಹುಮತ ಗಳಿಸಿತು.

ಪಶ್ಚಿಮ ಬಂಗಾಳದಂತೆ ಎಡರಂಗವನ್ನು ನಿರಂತರವಾಗಿ ಬೆಂಬಲಿಸದೆ, ಒಮ್ಮೆ ಅಧಿಕಾರಾವಧಿ ಮುಗಿದ ಮೇಲೆ ಸರ್ಕಾರವನ್ನು ಬದಲಿಸುವ ಕೇರಳದ ಮತದಾರರ ಪ್ರವೃತ್ತಿಯನ್ನು ಉಲ್ಲೇಖಿಸಿ ಪಶ್ಚಿಮ ಬಂಗಾಳದಲ್ಲಿ ಎಡರಂಗ ನಿರಂತರವಾಗಿ ಗೆಲ್ಲುತ್ತಿರುವುದೊಂದು ಆಕಸ್ಮಿಕ ಮತ್ತು ಅಪವಾದ ಎಂದು ಹೇಳುವವರು ಎಷ್ಟೋ ಮಂದಿ ಇದ್ದಾರೆ.

ಅಂಥವರು ಎಡರಂಗ ಆಳ್ವಿಕೆಯ ತ್ರಿಪುರವನ್ನು



ಗಮನಿಸಬೇಕು.

1978ರ ನಂತರ 1983 ರಲ್ಲಿ ಎರಡನೇ ಅವಧಿಗೆ ಮತ್ತೆ ಎಡರಂಗವೇ ಚುನಾಯಿಸಲ್ಪಟ್ಟಿತ್ತು. ಗೆಲುವಿನ ಸರಣಿ ಹಾಗೇ ಮುಂದುವರೆಯುತ್ತಿತ್ತೇನೋ. ಹೇಗಾದರೂ ಸರಿ ಎಡರಂಗದಿಂದ ಅಧಿಕಾರವನ್ನು ಕಸಿದುಕೊಳ್ಳಬೇಕೆಂದು ತೀರ್ಮಾನಿಸಿದ ಕಾಂಗ್ರೆಸ್ ರಾಜ್ಯದ ಪ್ರತ್ಯೇಕತಾವಾದಿಗಳೊಂದಿಗೆ ಕೈಜೋಡಿಸಿ ವ್ಯಾಪಕ ಹಿಂಸೆ, ಕೇಂದ್ರ ಸರ್ಕಾರದ ನಿಯಂತ್ರಣದ ಅರೆಸೇನಾ ಪಡೆ ಹಾಗೂ ಅಧಿಕಾರದ ದುರ್ಬಳಕೆ, ಗೂಂಡಾಗಿರಿ ರಿಗ್ಗಿಂಗ್, ಚುನಾವಣಾ ಅಕ್ರಮಗಳ ಮೂಲಕ ಚುನಾವಣೆಯಲ್ಲಿ ಗೆಲುವನ್ನು 'ಗಳಿಸಿತು'.

ಕಾಂಗ್ರೆಸ್, ಟಿಯುಜೆಎಸ್‌ಗಳ ಮೈತ್ರಿಯ 5 ವರ್ಷಗಳ ಆಡಳಿತ ಇನ್ನೂ ತ್ರಿಪುರದ ಜನರಿಗೆ ದು:ಸ್ವಪ್ನವಾಗಿ ಕಾಡುವುದಿದೆ. 1993 ರಲ್ಲಿ ತ್ರಿಪುರದ ಜನತೆ ಮತ್ತೊಮ್ಮೆ ತಮ್ಮ ನಿರ್ಣಾಯಕ ಜನಾದೇಶ ನೀಡಿ ಎಡರಂಗ ಪ್ರಚಂಡ ವಿಜಯ ಸಾಧಿಸಿತು. ಅಲ್ಲಿಂದ ಇಲ್ಲಿಯವರೆಗೆ ಎಡರಂಗದ ಜೈತ್ರಯಾತ್ರೆ ನಿರಂತರವಾಗಿ ಸಾಗಿಬರುತ್ತಿದೆ.

ರಾಜ್ಯ ಸಣ್ಣದು ಸಮಸ್ಯೆಗಳಲ್ಲ

ಇದು ಒಂದು ಪುಟ್ಟ ರಾಜ್ಯ. ಆದರೆ ಇಲ್ಲಿನ ಸಮಸ್ಯೆಗಳೇನು ಸಣ್ಣವಲ್ಲ. ಭಯೋತ್ಪಾದನೆ, ಪ್ರತ್ಯೇಕತಾವಾದ, ಬುಡಕಟ್ಟು ಜನರು, ಬುಡಕಟ್ಟೇತರ ಜನರ ನಡುವೆ ಶಾಂತಿ ಕದಡುವ ಜನಾಂಗೀಯ ವಾದಗಳು, ಹಿಂಸೆ ಇಡೀ ಈಶಾನ್ಯ ಭಾರತಕ್ಕೆ ಸಾಮಾನ್ಯವಾದ ಅನಭಿವೃದ್ಧಿಯ ಸಮಸ್ಯೆ ಮೂಲಭೂತ ಸೌಕರ್ಯಗಳ ಕೊರತೆ, ಹೀಗೆ ಸಮಸ್ಯೆಗಳ ಪಟ್ಟಿ ದೊಡ್ಡದಿದೆ.

ತ್ರಿಪುರಾ ರಾಜ್ಯ ಸುಮಾರು 800 ಕಿ.ಮೀ.ಗಳಷ್ಟು ದೂರ ಬಾಂಗ್ಲಾದೇಶದ ಗಡಿಗೆ ಹೊಂದಿಕೊಂಡಿದೆ. ವಿದೇಶಿ ನೆಲದಿಂದ ನುಸುಳುವ ಉಗ್ರಗಾಮಿಗಳು, ದೇಶವಿರೋಧಿಗಳು, ಇದನ್ನು ಪರಿಣಾಮಕಾರಿಯಾಗಿ ಎದುರಿಸಲು ಸಹಕರಿಸದ ಹಿಂದಿನ ಎನ್.ಡಿ.ಎ ಸರ್ಕಾರ, ಕಾಂಗ್ರೆಸ್ ಕೇಂದ್ರ ಸರ್ಕಾರಗಳು, ಜನಪರ ಶಕ್ತಿಗಳ ಮೇಲೆ ಎರಗುವ ಪ್ರತ್ಯೇಕತಾವಾದಿಗಳ ಉಪಟಳ, ಈಶಾನ್ಯ ರಾಜ್ಯಗಳ ಅಭಿವೃದ್ಧಿಯ ಪ್ರಶ್ನೆಯನ್ನು ಲೆಕ್ಕಕ್ಕೆ ಇಟ್ಟುಕೊಳ್ಳದ ಕೇಂದ್ರ ಸರ್ಕಾರಗಳ ಧೋರಣೆಗಳ ವಿರುದ್ಧ ಸೆಣಸುತ್ತಾ .. ರಾಜ್ಯ ಬುಡಕಟ್ಟು ಹಾಗೂ ಬುಡಕಟ್ಟೇತರರ ಐಕ್ಯ ಬೆಸೆಯುತ್ತಾ ಜನರ ಜೀವನವನ್ನು ಉತ್ತಮಪಡಿಸಲ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾ ಎಡರಂಗ ಸರ್ಕಾ ಬಾರಿ ಜನಾದರಣೆ ಪಡೆದಿದೆ. ಸಿಪಿಐ(ಎಂ) ಪಾಲಿಟ ಬ್ಯೂರೋ ಸದಸ್ಯರಾದ ಮಾಣಿಕ್ ಸರ್ಕಾರ್ ಇಲ್ಲಿ ಜನಪ್ರಿಯ ಮುಖ್ಯಮಂತ್ರಿ. ಸಮಗ್ರ ಭೂ ಸುಧಾರ ಆಧರಿಸಿದ ಜನಪರ ಅಭಿವೃದ್ಧಿ ನೀತಿಗಳ ಮೂಲಕ ಜನರನ್ನು ವಿಶ್ವಾಸ ತೆಗೆದುಕೊಳ್ಳುವ, ವಿಶ್ವಾ ತುಂಬುವ ನೀತಿಯ ಮೂಲಕ ಪ್ರತ್ಯೇಕತಾವಾದಿಗಳ ಮೂಲೆಗುಂಪು ಮಾಡುವಲ್ಲಿಯೂ ತ್ರಿಪುರ ಎಡರಂ ದೊಡ್ಡ ಯಶಸ್ಸು ಸಾಧಿಸಿದೆ. ಇತ್ತೀಚಿನ ದಿನಗಳ ಭಯೋತ್ಪಾದಕ ದಾಳಿ ಹಿಂಸೆಗಳು ತಗ್ಗಿವ ಹೀಗಾಗಿಯೇ ಇಲ್ಲಿ ಕಾಂಗ್ರೆಸ್ ಈಗ ಪ್ರತ್ಯೇಕತ ತೀವ್ರಗಾಮಿಗಳ ರಾಜಕೀಯ ಮುಖವಾಗಿರು ಐಎಸ್‌ಪಿಟಿ ಯೊಂದಿಗೆ ಕೈಜೋಡಿದ್ದರು ಸಿಪಿಐ(ಎಂ) ಭರ್ಜರಿ ಗೆಲುವಿನ ವಿಶ್ವಾಸದಲ್ಲಿದೆ.

ತ್ರಿಪುರ ಪೂರ್ವ (ಎಸ್‌ಟಿ) ತ್ರಿಪುರ ಪಶ್ಚಿಮ ಕ್ಷೇತ್ರಗಳಲ್ಲಿ ಕ್ರಮವಾಗಿ ಸಿಪಿಐ(ಎಂ) ಬಜುಬನ ರಿಯಾನ್ ಮತ್ತು ಖಗೇನದಾಸ್ ಅಭ್ಯರ್ಥಿಗಳಾಗಿದ ಬಾರಿ ಮತಗಳ ಅಂತರದಿಂದ ಗೆದ್ದುಬರುವುದು ನಿಶ್ಚ ವಾಗಿದೆ.

ರಾಜ್ಯಗಳ ಸುತ್ತು



ಮಹಾರಾಷ್ಟ್ರ:

ಎರಡೂ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಅತ್ಯಂತ ವ್ಯವಸ್ಥಿತ ಪ್ರಚಾರವನ್ನು ಕೈಗೊಂಡಿದೆ. ಆದಿವಾಸಿ ಮತ್ತು ಅರಣ್ಯವಾಸಿಗಳ ಅರಣ್ಯ ಹಕ್ಕು ಕಾಯ್ದೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿ, ಬೆಲೆ ಏರಿಕೆ, ಪಡಿತರ ವ್ಯವಸ್ಥೆಯ ಕುಸಿತ, ಅಪೌಷ್ಟಿಕತೆ, ಆರ್ಥಿಕ ಬಿಕ್ಕಟ್ಟು, ನಿರುದ್ಯೋಗ, ರೈತರ ಆತ್ಮಹತ್ಯೆ, ಮಹಾರಾಷ್ಟ್ರವನ್ನು ಕಾಡುತ್ತಿರುವ ತೀವ್ರ ವಿದ್ಯುತ್ ಕೊರತೆ, ಮುಂತಾದವುಗಳು ಪ್ರಚಾರದ ಪ್ರಮುಖ ಪ್ರಶ್ನೆಗಳಾಗಿವೆ. 10 ಲಕ್ಷ ಕರಪತ್ರಗಳನ್ನು ಮುದ್ರಿಸಿ ಹಂಚಲಾಗಿದೆ. ಎರಡೂ ಕ್ಷೇತ್ರಗಳಲ್ಲೂ ತಲಾ ಸುಮಾರು 15 ಲಕ್ಷದಷ್ಟು ಮತದಾರರಿರುವ ಈ ಕ್ಷೇತ್ರಗಳಲ್ಲಿ, ಮನೆ ಮನೆಗೆ ಭೇಟಿ, ಗುಂಪು ಸಭೆಗಳು, ಕರಪತ್ರ ವಿತರಣೆ, ಚರ್ಚೆ, ನಿಧಿ ಸಂಗ್ರಹ, ವ್ಯಾಪಕವಾಗಿ ನಡೆದಿದೆ. ಆದಿವಾಸಿ ಮಹಿಳೆಯರೂ ಪ್ರಚಾರದ ಮುಂಚೂಣಿಯಲ್ಲಿದ್ದಾರೆ.

ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿ ಸದಸ್ಯರು ಪಾಲ್ಗೊಂಡ ಸಭೆಗಳು ದಿಂಡೋರಿಯಲ್ಲಿ 12, ಹಾಗೂ ಪಾಲ್‌ಗರ್‌ನಲ್ಲಿ 19 ನಡೆದಿವೆ. ಇಂತಹ ಸಭೆಗಳಲ್ಲಿ ನೇರವಾಗಿ ಒಟ್ಟಾರೆ 50 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದಾರೆ. ಕ್ಷೇತ್ರದ ಪಲವಾರು ತಾಲ್ಲೂಕುಗಳಲ್ಲಿ ಕೆಂಬಾವುಟಗಳನ್ನು ಹೊತ್ತ ಸಾವಿರ ಮೋಟಾರು ಬೈಕ್‌ಗಳ ಮೆರವಣಿಗೆ ಜನರ ಗಮನ ಸೆಳೆದಿದೆ. ಸೀತಾರಾಂ ಯೆಚೂರಿ, ಪ್ರಕಾಶ್‌ಕಾರಟ್, ಬೃಂದಾಕಾರಟ್, ಎಂ.ಕೆ.ಪಂಧೆ, ವಿ.ಎಸ್.ಅಚ್ಯುತಾನಂದನ್ ಮುಂತಾದವರು ಬಹಿರಂಗ ಸಭೆಗಳಲ್ಲಿ ಪಾಲ್ಗೊಂಡಿದ್ದಾರೆ.

ತಲಸರಿಯಲ್ಲಿ ನಡೆದ ಬಹಿರಂಗಸಭೆಯ ಸಮಯದಲ್ಲಿ ಥಾಣೆ ಜಿಲ್ಲಾ ಕಾಮಗಾರ್ ಯೂನಿಯನ್ ತನ್ನ ಸದಸ್ಯರಿಂದ ಸಂಗ್ರಹಿಸಿದ ಒಂದು ದಿನದ ವೇತನವಾಗಿ 3.5 ಲಕ್ಷ ರೂ.ಗಳನ್ನು ಪಕ್ಷದ ಚುನಾವಣಾ ನಿಧಿಗೆ ನೀಡಿದ್ದು, ದುಡಿಯುವ ಜನರಿಂದ ನಿಧಿ ಸಂಗ್ರಹಿಸುವ ಸಿಪಿಐ(ಎಂ) ನೀತಿಗೆ ತಕ್ಕಂತೆ ಇದೆ. ಸಿಪಿಐ(ಎಂ) ಎಲ್‌ಡಿಎಫ್ ಅಭ್ಯರ್ಥಿಗಳ ಬೆಂಬಲವಾಗಿ ಉಳಿದ ಕ್ಷೇತ್ರಗಳಲ್ಲಿ ವ್ಯಾಪಕ ಪ್ರಚಾರ ಕೈಗೊಂಡಿದೆ. ಎಲ್‌ಡಿಎಫ್ ಸ್ಪರ್ಧಿಗಳು ಇಲ್ಲದ ಕಡೆ, ಬಿಜೆಪಿ-ಶಿವಸೇನೆ, ಹಾಗೂ ಕಾಂಗ್ರೆಸ್-ಎನ್‌ಸಿಪಿ ಗಳನ್ನು ಸೋಲಿಸಬಲ್ಲ ಜಾತ್ಯಾತೀತ ಪಕ್ಷಕ್ಕೆ ಬೆಂಬಲ ನೀಡುತ್ತಿದೆ. ಅದರಲ್ಲಿ ಸೋಲಾಪುರ ಕ್ಷೇತ್ರದಲ್ಲಿ ಬಿಎಸ್‌ಪಿ ಅಭ್ಯರ್ಥಿಗೆ ಹಾಗೂ ಹಟ್ಕನಂಗಲೆ ಕ್ಷೇತ್ರದಲ್ಲಿ ಎಲ್‌ಡಿಎಫ್ ಅಭ್ಯರ್ಥಿಗೆ ಹಾಗೂ ಕೊಲ್ಹಾಪುರ ಮತ್ತು ಶಿರಡಿ ಕ್ಷೇತ್ರಗಳಲ್ಲಿ ಪ್ರಬಲ ಜಾತ್ಯಾತೀತ ಪಕ್ಷೇತರ ಅಭ್ಯರ್ಥಿಗಳ ಪರವಾಗಿ ವ್ಯಾಪಕ ಪ್ರಚಾರದಲ್ಲಿ ತೊಡಗಿದೆ.

......ಬಿಜೆಪಿ ಸಂಸ್ಕೃತಿ

ಪುಟ 4 ರಿಂದ

ಜಾಗೃತಿಯಾಗಿ ಬೇಕಾದ ಪೋಲೀಸ್ ಪಡೆ ಠಾಣೆಗೆ ಬಂದ ಅಮಾಯಕ ಮಹಿಳೆಯ ಕಷ್ಟ ನೋವಿಗೆ ಸ್ಪಂದಿಸದೆ ಯಾವುದೋ ರಾಜಕೀಯ ಹಿತಾಸಕ್ತಿ ಪರವಾಗಿ ವರ್ತಿಸುವುದು ಖಂಡನಾರ್ಹವಾಗಿದೆ. ಬಿಜೆಪಿ ಮುಖಂಡರಿಂದ ಮಹಿಳೆಯರ ಮೇಲೆ ದೌರ್ಜನ್ಯ ಒಂದು ಕಡೆ, ದೂರು ನೀಡಲು ಬಂದ ಮಹಿಳೆಯನ್ನು ಬೆದರಿಸಿದ ಇನ್ಸ್‌ಪೆಕ್ಟರ್ ಇನ್ನೊಂದು ಕಡೆ ಭಾಗ್ಯ ಮತ್ತು ತಮ್ಮ ಮಗುವಿನ ಅನಾರೋಗ್ಯದ ಮಧ್ಯೆ ಬೆದರಿಕೆಗೆ ಅಂಜದೆ ಹೋರಾಟದ ಕಡೆ ಹೆಜ್ಜೆ ಇಟ್ಟಿರುವುದು ಪ್ರಮುಖವಾಗಿ ಗಮನಿಸಬೇಕಾದ ಅಂಶ.

ಬಡತನದ ಬದುಕುದಾದರೂ ಭಾಗ್ಯದ ಬದುಕಿನಲ್ಲಿ ಸ್ವಾಭಿಮಾನಕ್ಕೆ ಕೊರತೆ ಇರಲಿಲ್ಲ. ಚುನಾವಣೆಯ ಕೆಲಸದ ಕೂಲಿ ಹಣ ಕುಟುಂಬದ ಆರೋಗ್ಯ ತಪಾಸಣೆಗೆ ಸಹಕಾರಿಯಾಗಲಿದೆ ಎಂಬ ಬಯಕೆಯು ಈಡೇರಲಿಲ್ಲ. ಈಗ ಭಾಗ್ಯರವರು ಲಘು ಪಾರ್ಶ್ವವಾಯುಗೆ ಗುರಿಯಾಗಿದ್ದಾರೆ. ಇದರ ಮಧ್ಯೆ ಬೆದರಿಕೆಯ ಫೋನ್ ಕರೆಗಳು ಸದಾ ಬರುತ್ತಲಿವೆ. ಜೀವ ಬೆದರಿಕೆ ಹಾಕಿರುವ ಶ್ರೀನಿವಾಸನನ್ನು ಬಂಧಿಸದ ಪೋಲೀಸರು ಜಾಮೀನು ದೊರೆಯುವಂತಹ ಕೇಸ ಹಾಕಿ ಕೈ ತೊಳೆದು ಕೊಂಡಿರುವುದು ಕಾಣುತ್ತಿದ ಇಂತಹ ಜೀವ ಬೆದರಿಕೆ ಪ್ರಕರಣಗಳಲ್ಲಿ ಜಾಮೀನ ರಹಿತ ಕೇಸು ಹಾಕಬೇಕೆಂದು ಭಾಗ್ಯ ಧ್ವನಿಗೆ ಧ್ವನಿಯಾಗಿ ನಿಂತ ಜನವಾದಿ ಮಹಿಳಾ ಸಂಘಟನೆ ಮತ್ತು ಡಿವೈಎಫ್‌ಐ ಸಂಘಟನೆಗಳು ಠಾಣೆಯ ಎದುರು ಪ್ರತಿಭಟನೆ ಮಾಡುವುದರ ಮೂಲಕ ನ್ಯಾಯಕ ಒತ್ತಾಯಿಸಿವೆ. ಪ್ರತಿಭಟನೆಗೆ ಸ್ಪಂದಿಸಿದ ಸಹಾಯಕ ಪೋಲೀಸ್ ಕಮೀಷನರ್ ಸಿ.ಮಣಿರತ್ನಂ ನಾಯರ ಸೂಕ್ತ ಭದ್ರತೆ ನೀಡಲು ಹಾಗೂ ಆರೋಪಿಗಳ ಮೇಲ ಕ್ರಮ ಕೈಗೊಳ್ಳಲು ಭರವಸೆ ನೀಡಿರುತ್ತಾರೆ. ಭಾಗ್ಯ ಪರ ಪೋಲೀಸ್ ಇಲಾಖೆ ಎಷ್ಟು ಸ್ಪಂದಿಸುತ್ತದೆ ಕಾದು ನೋಡಬೇಕಿದೆ. ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮೀ, ಜಿಲ್ಲಾ ಅಧ್ಯಕ್ಷರಾದ ಗೌರಮ್ಮ, ಹನುಮಂತರಾವ್ ಹವಾಲ್ದಾರ್, ಡಿವೈಎಫ್‌ಐನ ಲಿಂಗರಾಜ್, ರಾಮಕೃಷ್ಣರವರು ಮಾತನಾಡಿದರು. ಜೆ.ಎಂ.ಎಸ್. ಡಿವೈಎಫ್‌ಐ, ಎಆರ್‌ಡಿಯು ಸಂಗಾತಿಗಳು ಪಾಲ್ಗೊಂಡಿದ್ದರು.

● ವೀರಣ್ಣ ಕಲ್ಲನಿ, ಬಾಚಿಗೊಂಡನಹ

ಜಗದಗಲ


❑ ಶರತ್‌ಚಂದ್ರ

ನೇಪಾಳದಲ್ಲಿ ಮತ್ತೆ ರಾಜಕೀಯ ಬಿಕ್ಕಟ್ಟು

ಶಾಂತಿಯುತವಾಗಿ ಪ್ರಜಾಸತ್ತೆ ಸ್ಥಾಪಿಸುವ ಜನತೆಯ ಆಶಯದ ವಿರುದ್ಧವಾಗಿ ನೇಪಾಳದಲ್ಲಿ ಇನ್ನೊಂದು ರಾಜಕೀಯ ಬಿಕ್ಕಟ್ಟು ಸೃಷ್ಟಿಯಾಗಿದೆ. ನೇಪಾಳದ ಮಿಲಿಟರಿ ಮುಖ್ಯಸ್ಥ ಜನರಲ್ ಕಟವಾಲ್ ಮತ್ತು ಮಾವೋವಾದಿ ಸರ್ಕಾರದ ನಡುವೆ ತಿಕ್ಕಾಟ ಹಠಾತ್ತನೆ ತೀವ್ರಗೊಂಡು ಸರ್ಕಾರ ರಾಜೀನಾಮೆ ನೀಡುವ ಪರಿಸ್ಥಿತಿ ಬಂದಿದೆ. ಈ ಮೊದಲು ಸರ್ಕಾರದ ಹಲವು ಆಜ್ಞೆಗಳನ್ನು ಧಿಕ್ಕರಿಸಿದ್ದಕ್ಕಾಗಿ ಸರ್ಕಾರ ಜನರಲ್ ಕಟವಾಲ್ ಅವರನ್ನು ವಜಾ ಮಾಡಿತ್ತು. ಸರ್ಕಾರಕ್ಕೆ ತಮ್ಮ ಬೆಂಬಲವನ್ನು ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್) ಹಿಂದಕ್ಕೆ ಪಡೆಯಿತು. ಸರ್ಕಾರದ ಈ ಆಜ್ಞೆಯನ್ನು ಅಧ್ಯಕ್ಷರು ಪುರಸ್ಕರಿಸಲಿಲ್ಲ. ಜನರಲ್ ಕಟವಾಲ್ ಅವರನ್ನು ಮುಂದುವರೆಯ ವಂತೆ ಹೇಳಿದರು. ಇದನ್ನು ಪ್ರತಿಭಟಿಸಿ ಪ್ರಧಾನಿ ಪ್ರಚಂಡ ಅವರು ತಮ್ಮ ಸರ್ಕಾರದ ರಾಜೀನಾಮೆ ನೀಡಿದರು.

ಜನರಲ್ ಕಟವಾಲ್ ಮತ್ತು ಮಾವೋವಾದಿ ಸರ್ಕಾರದ ನಿರ್ಧಾರ ಪರ-ವಿರುದ್ಧ ತೀವ್ರ ಹಿಂಸಾತ್ಮಕ ಪ್ರದರ್ಶನಗಳು ನಡೆದಿವೆ. ಈಗ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್)ದ ನಾಯಕತ್ವದಲ್ಲಿ 'ರಾಷ್ಟ್ರೀಯ ಸರ್ಕಾರ' ನಡೆಸುವ ಪ್ರಯತ್ನ ನಡೆದಿದೆ. ಮಾವೋವಾದಿ ಪಕ್ಷ ಈ ಪ್ರಯತ್ನವನ್ನು ಬಹಿಷ್ಕರಿಸಿದ್ದಲ್ಲದೆ, ಪಾರ್ಲಿಮೆಂಟಿಗೆ ಮುತ್ತಿಗೆ ಹಾಕುವ ಬೆದರಿಕೆ ಹಾಕಿದೆ. ಆದರೆ ಹೊಸ ಸರ್ಕಾರ ರಚನೆಯ ಮಾತುಕತೆಯಲ್ಲಿ ಮಾವೋವಾದಿ ಪಕ್ಷ ಭಾಗವಹಿಸುತ್ತಿದೆ ಎಂದು ಇತ್ತೀಚಿನ ವರದಿಗಳು ತಿಳಿಸಿವೆ.

ಜನರಲ್ ಕಟವಾಲ್ ಮಾವೋವಾದಿ ಗೆರಿಲ್ಲಾಗಳನ್ನು ನೇಪಾಳದ ಸೈನ್ಯದ ಜತೆ ಸೇರಿಸುವುದನ್ನು ಸಾರ್ವಜನಿಕವಾಗಿಯೇ ವಿರೋಧಿಸಿದ್ದರು. ಇದು ವಿಶ್ವಸಂಸ್ಥೆ ಮಧ್ಯಪ್ರವೇಶದಿಂದ ಸಾಧ್ಯವಾದ ಸಮಗ್ರ ಶಾಂತಿ ಒಪ್ಪಂದದ ಪ್ರಮುಖ ಭಾಗವಾಗಿತ್ತು. ಇತ್ತೀಚಿನ ಚುನಾವಣೆಗಳ ನಂತರ ಮಾವೋವಾದಿಗಳು ಸರ್ಕಾರ ರಚನೆ ಮಾಡಿದ ಮೇಲೂ ತಮ್ಮ ವಿರೋಧ ಮುಂದುವರೆಸಿದ್ದರು. ಇನ್ನು ಕೆಲವು ತಿಂಗಳುಗಳಲ್ಲಿ



ಕಟವಾಲ್ ನಿವೃತ್ತರಾಗುವವರಿದ್ದರೂ, ಅವರು ಅಲ್ಲಿವರೆಗೆ ಮಿಲಿಟರಿ ಮುಖ್ಯಸ್ಥರಾಗಿ ಮುಂದುವರೆಯುವುದನ್ನು ಮಾವೋವಾದಿಗಳು ವಿರೋಧಿಸಿರಲಿಲ್ಲ. ಆದರೆ ಸರ್ಕಾರದ ನಿರ್ದೇಶನಗಳನ್ನು ಅವರು ಪಾಲಿಸಬೇಕೆಂಬುದು ಅವರ ನಿರೀಕ್ಷೆಯಾಗಿತ್ತು. ಅಲ್ಲದೆ ಹೊಸ ಸೈನಿಕರನ್ನು ಸೇರಿಸಿಕೊಳ್ಳಬಾರದು. ಎಂಟು ಹಿರಿಯ ಮಿಲಿಟರಿ ಅಧಿಕಾರಿಗಳ ಸೇವಾವಧಿ ವಿಸ್ತರಿಸಬಾರದು. ಈ ಎರಡು ಸರ್ಕಾರದ ನಿರ್ದಿಷ್ಟ ನಿರ್ದೇಶನಗಳನ್ನು ಉಲ್ಲಂಘಿಸಿದ್ದರು. ಮಾವೋವಾದಿ ಗೆರಿಲ್ಲಾಗಳನ್ನು ಸೈನ್ಯದ ಜತೆ ಸಮಗ್ರೀಕರಿಸುವುದನ್ನು ಸತತವಾಗಿ ವಿರೋಧಿಸುತ್ತಿದ್ದರು. ರಾಷ್ಟ್ರೀಯ ಕ್ರೀಡೆಗಳಲ್ಲಿ ಸೈನ್ಯ ಮತ್ತು ಗೆರಿಲ್ಲಾಗಳ ನಡುವೆ ಕ್ರೀಡೆಗಳನ್ನು ವಿರೋಧಿಸಿ, ಸೈನ್ಯದ ಟೀಮುಗಳು ಕ್ರೀಡೆಗಳಲ್ಲಿ ಭಾಗವಹಿಸದಂತೆ ಮಾಡಿದ್ದರು.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಿಲಿಟರಿ ಚುನಾಯಿತ ನಾಗರಿಕ ಸರ್ಕಾರದ ನಿಯಂತ್ರಣದಲ್ಲಿರಬೇಕು. ಜನರಲ್ ಕಟವಾಲ್ ಅವರ ಧೋರಣೆ ಪ್ರಜಾಪ್ರಭುತ್ವದ ಈ ಮೂಲಭೂತ ನೀತಿಯನ್ನು ಉಲ್ಲಂಘಿಸಿತು. ರಾಜಸತ್ತೆ ವಿರುದ್ಧ ಹೋರಾಡಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿಸುವ ಈ ಹೊತ್ತಿನಲ್ಲಿ ಇದನ್ನು ಸಹಿಸಲು ಸಾಧ್ಯವಿಲ್ಲ. ಯಾವ ಪ್ರಜಾಸತ್ತಾತ್ಮಕ ಪಕ್ಷ ಸಹ ಇದನ್ನು ಸಹಿಸುವಂತಿಲ್ಲ. ಬೆಂಬಲ ಮಾಡುವುದಂತೂ ಸಲ್ಲ. ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಚುನಾಯಿತ ಸರ್ಕಾರದ ಸಲಹೆ ಮೇಲೆ ಅಧ್ಯಕ್ಷರು ನಡೆಯಬೇಕು. ಆದ್ದರಿಂದ ಅಧ್ಯಕ್ಷರು ಸರ್ಕಾರದ ಸಲಹೆ ಧಿಕ್ಕರಿಸಿ ಯಾವುದೇ ನಿರ್ಧಾರ ತೆಗೆದುಕೊಳ್ಳುವುದು ಸಂವಿಧಾನಕ್ಕೆ ವಿರೋಧವಾದದ್ದು. ನೇಪಾಳ ಶಾಂತಿಯುತವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿಸುವುದನ್ನು ಸಹಿಸದ ದೇಶದ ಒಳಗಿನ ಮತ್ತು ಹೊರಗಿನ ಶಕ್ತಿಗಳು ಜನರಲ್ ಕಟವಾಲ್ ಅವರಿಗೆ ಕುಮ್ಮಕ್ಕು ಕೊಡುತ್ತಿವೆ. ಆದ್ದರಿಂದ ಅವರನ್ನು ವಜಾ ಮಾಡುವುದು ಅನಿವಾರ್ಯವಾಯಿತು. ಇದು ಮಾವೋವಾದಿ ಪಕ್ಷದ ನಿಲುವು.

ಸರ್ಕಾರದ ಭಾಗವಾಗಿದ್ದ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್) ಕಟವಾಲ್ ರನ್ನು ವಜಾ ಮಾಡುವ ಕ್ರಮವನ್ನು ವಿರೋಧಿಸಿತು. ಆಳುವ ರಂಗದೊಳಗೆ ಸಹಮತ ಇಲ್ಲದಿರುವಾಗ ಅದರ ನಿರ್ಧಾರವನ್ನು ಎತ್ತಿಹಿಡಿಯುವುದು ಹೇಗೆ? ಇದು ವಿವಾದಿತವಾಗಿರುವ ಅಧ್ಯಕ್ಷರ ನಿಲುವು. ಸೈನ್ಯವನ್ನು ನಿಯಂತ್ರಿಸಿ ತಮ್ಮ ಪಕ್ಷದ ಆಧಿಪತ್ಯ ಹೇರುವ ತರಾತುರಿಯಲ್ಲಿ ಇತರ ಪಕ್ಷಗಳ ಅಭಿಪ್ರಾಯ ತೆಗೆದುಕೊಳ್ಳುವ ತಾಳ್ಮೆ ಮಾವೋವಾದಿಗಳಿಗೆ ಇಲ್ಲ. ಇಂತಹ ಪ್ರಮುಖ ನಿರ್ಧಾರ ತೆಗೆದುಕೊಳ್ಳುವಾಗ ಎಲ್ಲಾ ಪಕ್ಷಗಳ ಸಹಮತ ರೂಪಿಸಬೇಕಿತ್ತು. ಇದು ಇತರ ಪಕ್ಷಗಳ ನಿಲುವು.

ಜನರಲ್ ಕಟವಾಲ್ ಸರ್ಕಾರದ ನಿರ್ದೇಶನ ಧಿಕ್ಕರಿಸುವುದು ಗಂಭೀರ ವಿಷಯವಾದರೂ ಮಾವೋವಾದಿಗಳು ದುಡುಕಿದರು. ರಾಜಸತ್ತೆ ಪ್ರಬಲವಾಗಿರುವ ನೇಪಾಳದಂತಹ ದೇಶದಲ್ಲಿ ಶಾಂತಿಯುತವಾಗಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿಸುವ ಪ್ರಕ್ರಿಯೆಯಲ್ಲಿ ಇಂತಹ ಪ್ರತಿರೋಧ, ಏಳು-ಬೀಳುಗಳು ಸಾಮಾನ್ಯ. ಇಂತಹ ಸನ್ನಿವೇಶವನ್ನು ಚತುರತೆ ಮತ್ತು ಚಾಕಚಕ್ಯತೆಯಿಂದ ನಿಭಾಯಿಸಬೇಕಾಗಿತ್ತು. ರಾಜಸತ್ತೆ ವಿರುದ್ಧ ಮತ್ತು ಪ್ರಜಾಪ್ರಭುತ್ವ ಸ್ಥಾಪನೆಗೆ ಹೋರಾಡಿದ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್.) ಮತ್ತು ನೇಪಾಳಿ ಕಾಂಗ್ರೆಸ್ ಸಹ ತಮ್ಮ ಪಕ್ಷದ ಸಂಕುಚಿತ ಹಿತಾಸಕ್ತಿಗಿಂತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಜವಾಬ್ದಾರಿಯುತ ಪಾತ್ರ ವಹಿಸಲಿಲ್ಲ. ಅದರಲ್ಲೂ ಎಡ ಪಕ್ಷಗಳ ಐಕ್ಯತೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಗುರುತರ ಜವಾಬ್ದಾರಿ ಹೊಂದಿದ್ದ ಕಮ್ಯುನಿಸ್ಟ್ ಪಕ್ಷ (ಯು.ಎಂ.ಎಲ್.) ಸಹ ಎಡವಿತು. ಎಡ ಪಕ್ಷಗಳ ಐಕ್ಯತೆಯ ಅಭಾವವನ್ನು ನೇಪಾಳೀ ಕಾಂಗ್ರೆಸ್, ರಾಜಸತ್ತೆ-ಪರ ಮತ್ತಿತರ ಬಲಪಂಥೀಯ ಪಕ್ಷಗಳು ಬಳಸಿಕೊಳ್ಳುವ ಸ್ಥಿತಿ ಉಂಟಾಗಿದೆ. ಪಾರ್ಲಿಮೆಂಟಿನಲ್ಲಿ ಎಡ ಪಕ್ಷಗಳಿಗೆ (ಮಾವೋವಾದಿ ಮತ್ತು ಕಮ್ಯುನಿಸ್ಟ್ ಪಕ್ಷ) ಪಾರ್ಲಿಮೆಂಟಿನಲ್ಲಿ ಸ್ಪಷ್ಟ ಬಹುಮತ ಇದ್ದರೂ ಪರಸ್ಪರ ಮೇಲಾಟದಲ್ಲಿ ಪ್ರಜಾಪ್ರಭುತ್ವಕ್ಕೆ ಅಪಾಯ ಬಂದಿದೆ. ಬಲಪಂಥೀಯರಿಗೆ ಬಲ ತಂದಿದೆ. ಸಾಮ್ರಾಜ್ಯಶಾಹಿ ಮತ್ತು ಇತರ ಹೊರಗಣ ಶಕ್ತಿಗಳಿಗೆ ಮೂಗು ತೂರಿಸಲು ಅವಕಾಶ ಸಿಕ್ಕಿದೆ.

ನೆರೆಯಲ್ಲಿ ಮಿಲಿಟರಿ ಸರ್ಕಾರಗಳ ಅವಾಂತರ ನೋಡಿದ್ದರೂ, ಭಾರತ ಸರ್ಕಾರ ಸಹ ನೇಪಾಳದಲ್ಲಿ ಶಾಂತಿಯುತ ಜನರಲ್ ಗೆ ಕುಮ್ಮಕ್ಕು ನೀಡುವ ಮೂಲಕ ಮೂಗು ತೂರಿಸಿದೆ. ಹಿಂದೆಯೂ ಭಾರತ ಮಾವೋವಾದಿಗಳು ಸರ್ಕಾರ ರಚಿಸದಂತೆ ಪ್ರಯತ್ನ ನಡೆಸಿತ್ತು ಎಂಬ ಆಪಾದನೆ ಇದೆ.

ದಕ್ಷಿಣ ಆಫ್ರಿಕಾದಲ್ಲಿ ಎ.ಎನ್.ಸಿ. ಜಯಭೇರಿ

ದಕ್ಷಿಣ ಆಫ್ರಿಕಾದಲ್ಲಿ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಎ.ಎನ್.ಸಿ. ಪುನಃ ಜಯಭೇರಿ ಬಾರಿಸಿದೆ. ಎ.ಎನ್.ಸಿ. ಯ ಜಯಭೇರಿಯಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಆದರೆ ದಕ್ಷಿಣ ಆಫ್ರಿಕಾದ ಆಳುವ ವರ್ಗಗಳು, ಅದರ ತುತ್ತೂರಿಯಾದ ಮಾಧ್ಯಮಗಳು ಎ.ಎನ್.ಸಿ.ಗೆ ಈ ಬಾರಿ ಅಪಾಯ ಇದೆ ಎಂದು ಭರ್ಜರಿ ಪ್ರಚಾರ ನಡೆಸಿದ್ದವು. ಎ.ಎನ್.ಸಿ. ಈ ಚುನಾವಣೆಯಲ್ಲೂ ಶೇ. 65.90 ಮತ ಗಳಿಸಿ ಭರ್ಜರಿ ಜಯ ಗಳಿಸಿದೆ. ಇದನ್ನು ಮುಖಭಂಗಗೊಂಡ (ಆದರೂ ಮೀಸೆ ಮಣ್ಣಾಗಲಿಲ್ಲ ಎನ್ನುವ) ಮಾಧ್ಯಮಗಳು 'ಅಲ್ಪದರಲ್ಲಿ ವಿಜಯ' ಎಂದವು. ಕೆಲವು 'ಸೋಲು' ಎಂದು ಸಹ ಹೇಳಿದವು! ಮೂರನೇ ಎರಡು ಬಹುಮತ ಸ್ವಲ್ಪದರಲ್ಲಿ ತಪ್ಪಿದ್ದು ಇದಕ್ಕೆ ಕಾರಣವಂತೆ. ಮೂರನೇ ಎರಡು ಬಹುಮತ ಬಂದಿದ್ದರೆ ಎ.ಎನ್.ಸಿ. ಸಂವಿಧಾನ ಬದಲಿಸಿ 'ಕಮ್ಯುನಿಸಂ' ತಂದು ಆಸ್ತಿ ಹಕ್ಕು ಕಸಿದುಕೊಳ್ಳುತ್ತಿತ್ತಂತೆ ! ಅದನ್ನು ತಡೆದದ್ದು ಅವರ ಜಯವಂತೆ.

ಎ.ಎನ್.ಸಿ. 52ನೇ ಸಮ್ಮೇಳನದಲ್ಲಿ ತೀವ್ರ ಸೈದ್ಧಾಂತಿಕ ಭಿನ್ನಾಭಿಪ್ರಾಯ ತಲೆದೋರಿ ಹಿಂದಿನ ಅಧ್ಯಕ್ಷರನ್ನು ಬದಲಾಯಿಸಲಾಗಿತ್ತು. ಜಾಗತೀಕರಣದ ನವ-ಉದಾರನೀತಿಗಳನ್ನು ಪಾಲಿಸುತ್ತಾ ಎ.ಎನ್.ಸಿ. ಜನತೆಯ ಜೀವನ ಮಟ್ಟವನ್ನು ಉತ್ತಮ ಪಡಿಸುವ ಮೂಲಭೂತ ಬದಲಾವಣೆ ತರಲು ಕೊಟ್ಟ ವಚನ ಮರೆತದ್ದು ಸೈದ್ಧಾಂತಿಕ ಭಿನ್ನಾಭಿಪ್ರಾಯದ ಸಾರವಾಗಿತ್ತು. ಎ.ಎನ್.ಸಿ.ಯ ತ್ರಿಪಕ್ಷೀಯ ಕೂಟದ ಸದಸ್ಯರಾದ ಕಮ್ಯೂನಿಸ್ಟ್ ಪಕ್ಷ ಮತ್ತು ಕೊಸಾಟು (COSATU - ಟ್ರೇಡ್ ಯೂನಿಯನ್ ಒಕ್ಕೂಟ) ಈ ತಿಕ್ಕಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಕರಿಯರಲ್ಲಿ ಹೊಸ ಬೂರ್ಜ್ವಾ ವರ್ಗ ಒಂದು ಹುಟ್ಟಿಕೊಂಡಿದ್ದು ಅದು ಎ.ಎನ್.ಸಿ.ಯನ್ನು 'ಹೈಜಾಕ್' ಮಾಡಲು ಪ್ರಯತ್ನಿಸಿತು. ಅದರ ಪ್ರಯತ್ನಕ್ಕೆ ಸೋಲಾಯಿತು. 'ಹಿಂದಿನ ಅಧ್ಯಕ್ಷ ಮೆಬೆಕಿ ನಾಯಕತ್ವದಲ್ಲಿ ಒಂದು ವಿಭಾಗ ಹೊರಗೆ ಹೋಗಿ ಬೇರೆ COPE (ಕಾಂಗ್ರೆಸ್ ಆಫ್ ಪೀಪಲ್) ಎಂಬ ಹೊಸ ಪಕ್ಷ ರಚಿಸಿದ್ದರು. ಅದು ಕೇವಲ ಶೇ. 7.42 ಮತ ಗಳಿಸುವುದು ಸಾಧ್ಯವಾಯಿತು. ಇತರ ಯಾವ ವಿರೋಧ ಪಕ್ಷಗಳು ಸಹ ತಮ್ಮ ಬೆಂಬಲ ಹೆಚ್ಚಿಸುವುದರಲ್ಲಿ ಸೋತವು. ಬಹುಶಃ ಈ ಹೋರಾಟ ಇಲ್ಲದಿದ್ದರೆ ಎ.ಎನ್.ಸಿ.ಗೆ ಹಿನ್ನಡೆ ಆಗುವ ಸಂಭವ ಇತ್ತು.

ಈ ಬದಲಾವಣೆಯ ಪ್ರತೀಕವಾದ ಅಧ್ಯಕ್ಷ ಜೂಮಾರ ಮೇಲೆ ಮಾಧ್ಯಮಗಳು ತಮ್ಮ ಅಪಪ್ರಚಾರ ಹರಿಯ ಬಿಟ್ಟಿದ್ದವು. ರಾಜಕೀಯ ಪ್ರೇರಿತವಾಗಿ ಹಿಂದಿನ ಸರ್ಕಾರ ಹೊರಿಸಿದ್ದ ಭ್ರಷ್ಟಾಚಾರದ ಮತ್ತು ಇತರ ವೈಯಕ್ತಿಕ ಆಪಾದನೆ-ಕೇಸುಗಳ ಬಗ್ಗೆ ಭಾರೀ ಪ್ರಚಾರ ನಡೆಯಿತು. ಆದರೂ ದಕ್ಷಿಣ ಆಫ್ರಿಕಾದ ಎಚ್ಚೆತ್ತ ಮತದಾರರು ಅದಕ್ಕೆ ಸೊಪ್ಪು ಹಾಕಲಿಲ್ಲ. ಬದಲಾಗಿ ಎ.ಎನ್.ಸಿ. ತನ್ನ ನೀತಿಗಳಲ್ಲಿ ಮತ್ತು ನಾಯಕತ್ವದಲ್ಲಿ ತಂದ ಬದಲಾವಣೆಗಳಿಗೆ ಬೆಂಬಲ ನೀಡಿದ್ದಾರೆ. ತನ್ನ ವಚನಗಳನ್ನು ಈಡೇರಿಸುವುದರಲ್ಲಿ ವಿಳಂಬ ಮಾಡಬಾರದು. ಉದಾಸೀನತೆ ತೋರಬಾರದು. ಎಂದು ಕಮ್ಯೂನಿಸ್ಟ್ ಪಕ್ಷ ಮತ್ತು ಕೊಸಾಟು ಹೊಸ ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿವೆ.

ಅಸ್ಸಾಂ : ಊಹೆ ಕಷ್ಟ

ರಾಜ್ಯಗಳ ಸುತ್ತು




ಈಶಾನ್ಯ ರಾಜ್ಯಗಳಲ್ಲೇ ದೊಡ್ಡದಾದ ಅಸ್ಸಾಂ ರಾಜ್ಯದಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ. 14 ಲೋಕಸಭಾ ಕ್ಷೇತ್ರಗಳುಳ್ಳ ಅಸ್ಸಾಂನಲ್ಲಿ ಈ ಬಾರಿಯ ಫಲಿತಾಂಶವನ್ನು ಊಹಿಸುವುದು ಕಷ್ಟ, ಎನ್ನಲಾಗುತ್ತಿದೆ.

2004ರ ಲೋಕಸಭಾ ಚುನಾವಣೆಯಲ್ಲಿ 9 ಸ್ಥಾನಗಳಲ್ಲಿ ಕಾಂಗ್ರೆಸ್, ಅಸ್ಸಾಂ ಗಣ ಪರಿಷತ್ (ಎಜಿಪಿ)2, ಬಿಜೆಪಿ 2 ಹಾಗೂ ಬಿಪಿಎಫ್ 1 ಸ್ಥಾನಗಳನ್ನು ಗೆದ್ದಿವೆ.

ಈ ಬಾರಿಯ ಚುನಾವಣೆಯಲ್ಲಿ ಯಾವುದೇ ಪ್ರಬಲ ಅಲೆಗಳು ಕಾಣಬರುತ್ತಿಲ್ಲ. ಚುನಾವಣೆ ಘೋಷಣೆಯಾದ ನಂತರ ಇಲ್ಲಿಯ ತೀವ್ರಗಾಮಿಗಳ ಬಾಂಬ್‌ಸ್ಫೋಟಗಳಿಗೆ ರಾಜ್ಯದ ರಾಜಧಾನಿ ಗೌಹಾಟಿಯೊಂದರಲ್ಲೇ 10 ಜನರು ಬಲಿಯಾಗಿರುವುದು ಪರಿಸ್ಥಿತಿಯ ಸೂಕ್ಷ್ಮತೆಗೆ ಸಾಕ್ಷಿಯಾಗಿದೆ. ಜನವರಿ 1 ರ ಹೊಸದಂದು ಉಲ್ಫಾ ಉಗ್ರರ ದಾಳಿಗೆಯಲ್ಲಿ ಅಮಾಯಕ ಜನರು ಪ್ರಾಣತೆತ್ತರು.

ಈ ಬಾರಿ ಅಸ್ಸಾಂ ಗಣ ಪರಿಷತ್ತನ್ನು ತನ್ನಡೆಗೆ ಸೆಳೆಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಎಜಿಪಿಯ ಪಾತ್ರವನ್ನು ಕುಗ್ಗಿಸಿ ತಾನು ಹಿರಿಯಣ್ಣನ ಪಾತ್ರವಹಿಸಲು ಹವಣಿಸಿರುವ ಬಿಜೆಪಿಯು ಎಜಿಪಿಗೆ 6 ಸ್ಥಾನಗಳನ್ನು ಬಿಟ್ಟುಕೊಟ್ಟು ತಾನು 8 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಬಿಜೆಪಿಯೊಂದಿಗೆ ಮೇಲ್ಪಟ್ಟದಲ್ಲಿ ಮೈತ್ರಿ ಏರ್ಪಟ್ಟಿದ್ದರೂ ತಳಹಂತದಲ್ಲಿ ಕಾರ್ಯಕರ್ತರು ಹಾಗೂ ಮುಖಂಡರ ನಡುವೆ ಕೋಮುವಾದಿ ಪಕ್ಷದೊಂದಿಗಿನ ಈ ಮೈತ್ರಿ ಕುರಿತು ಅತೃಪ್ತಿ ಅಸಮಾಧಾನಗಳು ತೀವ್ರವಾಗಿವೆ. ಬಹುಶಃ ಇಂತಹ ಕಾರಣಕ್ಕಾಗಿಯೇ ಏನೋ ಎಜಿಪಿಯು ತಾನು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದರೂ ಎನ್‌ಡಿಎ ಭಾಗ ಅಲ್ಲ, ತಾನು ಎನ್‌ಡಿಎ ಸೇರಿಲ್ಲ ಎಂದು ಸ್ಪಷ್ಟಪಡಿಸಿದೆ.

ಎಜಿಪಿಯು ಬಿಜೆಪಿಯೊಂದಿಗೆ ಕೈಜೋಡಿಸಿದ್ದರಿಂದ ಬೋಡೋ ಪೀಪಲ್ಸ್ ಪ್ರೋಗ್ರೇಸಿವ್ ಫ್ರಂಟ್ (ಬಿಪಿಪಿಎಫ್) ಎಜಿಪಿಯೊಂದಿಗಿನ ಮೈತ್ರಿ ಕಡಿದುಕೊಂಡಿದೆ.



ಅಸ್ಸಾಂನ ಎಡಪಕ್ಷಗಳಲ್ಲಿ ಪ್ರಮುಖ ಪಕ್ಷವಾದ ಸಿಪಿಐ(ಎಂ) ಬಿಜೆಪಿ ಎಜಿಪಿಗಳ ಅವಕಾಶವಾದಿ ಮೈತ್ರಿಯನ್ನು ಹಾಗೂ ಕಾಂಗ್ರೆಸ್ -ಬಿಪಿಎಫ್ ಮೈತ್ರಿಗಳನ್ನು ಸೋಲಿಸುವ ಗುರಿಯೊಂದಿಗೆ ಕಾರ್ಯತಂತ್ರ ರೂಪಿಸಿದ್ದು, ಬಿಜೆಪಿಯೇತರ, ಕಾಂಗ್ರೇಸೇತರ ಜಾತ್ಯಾತೀತ ಶಕ್ತಿಗಳೊಂದಿಗೆ ಮೈತ್ರಿಗೆ ಯತ್ನಿಸಿದೆ.

ಸಿಪಿಐ, ಅಸ್ಸಾಂ ಯುನೈಟೆಡ್ ಡೆಮಾಕ್ರಾಟಿಕ್ ಫ್ರಂಟ್ (ಎಯುಡಿಎಫ್), ಎನ್.ಸಿ.ಪಿ., ಬಿಪಿಪಿಎಫ್, ಮುಂತಾದ ಪಕ್ಷಗಳೊಂದಿಗೆ ಸೇರಿ ಪರ್ಯಾಯವೊಂದನ್ನು ರೂಪಿಸುವ ಯತ್ನ ನಡೆಸಲಾಯಿತು. ಕಾಂಗ್ರೆಸ್, ಎಜಿಪಿ, ಬಿಜೆಪಿ ನೀತಿಗಳಿಂದ ಬೇಸತ್ತಿರುವ ಅಸ್ಸಾಂ, ಮತದಾರರಿಂದ ಇಂತಹ ಯತ್ನಕ್ಕೆ ವ್ಯಾಪಕ ಸ್ಪಂದನ ದೊರೆಯುವ ಲಕ್ಷಣಗಳು ಕಂಡು ಬಂದವು. ದುರದೃಷ್ಟವಶಾತ್ ಹಲವು ಸುತ್ತಿನ ದ್ವಿಪಕ್ಷೀಯ, ತ್ರಿಪಕ್ಷೀಯ ಮಾತುಕತೆಗಳ ನಂತರ ಸೀಟು ಹೊಂದಾಣಿಕೆಯ ಪ್ರಶ್ನೆಯಲ್ಲಿ ಈ ಪಕ್ಷಗಳು ಒಮ್ಮತಕ್ಕೆ ಬಂದಲ್ಲಿ ವಿಫಲವಾದವು. ಮುಖ್ಯವಾಗಿ ಎಯುಡಿಎಫ್ ಪಕ್ಷದ ಹಿರಿಯಣ್ಣನ ಧೋರಣೆ ಹೊಂದಾಣಿಕೆಗೆ ಅಡ್ಡಿಯಾಯಿತು. ಮಾತುಕತೆ ಮುಗಿಯುವ ಮುನ್ನವೇ ಎಯುಡಿಎಫ್ ತನ್ನ ಅಭ್ಯರ್ಥಿಗಳನ್ನು ಘೋಷಿಸಿತು.

ಇಂತಹ ಪರಿಸ್ಥಿತಿಯಲ್ಲಿ ಸಿಪಿಐ(ಎಂ) ಬಾರ್‌ಪೇಟ, ತೇಜಪುರ್, ಸಿಲಿಚಾರ್‌ಗಳಲ್ಲಿ ಸ್ಪರ್ಧಿಸುತ್ತಿದೆ. ಬಾರ್‌ಪೇಟ ಕ್ಷೇತ್ರ ಈಗಾಗಲೇ ಸಿಪಿಐ(ಎಂ) ಅಭ್ಯರ್ಥಿಯನ್ನು ಎರಡು ಬಾರಿ ಗೆಲ್ಲಿಸಿರುವ ಕ್ಷೇತ್ರ. ಈ ಮೂರು ಕ್ಷೇತ್ರಗಳಲ್ಲಿ ಎಯುಡಿಎಫ್ ಅಭ್ಯರ್ಥಿಗಳಿದ್ದಾರೆ. ಮಾತುಕತೆಯಂತೆ ಎನ್‌ಸಿಪಿ ಸ್ಪರ್ಧಿಸಬೇಕಾಗಿದ್ದ ಗೌಹಾಟಿ ಕ್ಷೇತ್ರದಲ್ಲಿ ಎಯುಡಿಎಫ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಈ ರೀತಿಯ ಗೊಂದಲಗಳಿದ್ದಾಗ್ಯೂ ಮೂರನೇ ರಂಗವು ಜನರಲ್ಲಿ ಎಂಥದೋ ಒಂದು ಆಶಾಭಾವ ಮೂಡಿಸಿದೆ ಮತ್ತು ರಾಜ್ಯದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಸಿಪಿಐ(ಎಂ) ಪರವಾಗಿ ಬಾರ್ ಪೇಟಾದಲ್ಲಿ ದುರ್ಗೇದೇಕ, ತೇಜ್‌ಪುರದಲ್ಲಿ ಜೀತೇನ್ ಸುಂಡಿ, ಸಿಲಿಚಾರ್‌ನಲ್ಲಿ ದೀಪಕ್ ಭಟ್ಟಾಚಾರ್ಯ ಸ್ಪರ್ಧಿಗಳಾಗಿದ್ದಾರೆ. ಜೋರ್‌ಹಟ್, ದಿಬುಗರ್, ಲಕ್ಷ್ಮೀಪುರ್ ಈ ಮೂರು ಕ್ಷೇತ್ರಗಳಲ್ಲಿ ಸಿಪಿಐ ಪಕ್ಷದ ಅಭ್ಯರ್ಥಿಗಳಿದ್ದು ಸಿಪಿಐ(ಎಂ) ಅವರಿಗೆ ಬೆಂಬಲ ನೀಡುತ್ತಿದೆ.

ಗೌಹಾಟಿ ಮತ್ತು ಸ್ವಾಯತ್ತ ಜಿಲ್ಲೆ(ದಿಫು) ಕ್ಷೇತ್ರಗಳಲ್ಲಿ ಎನ್‌ಸಿಪಿ ಗೂ ನಾಗೋನ್ ಕ್ಷೇತ್ರದಲ್ಲಿ ಆರ್‌ಎಸ್‌ಪಿ ಗೂ ಕೊಂಕ್ರಜಾರ್ ಮತ್ತು ಮಂಗಲ್‌ದೋಯ್ ಕ್ಷೇತ್ರಗಳಲ್ಲಿ ಬಿಪಿಪಿಎಫ್‌ಗೂ ಬೆಂಬಲ ನೀಡುತ್ತಿದ್ದು ಉಳಿದ ಕ್ಷೇತ್ರಗಳಲ್ಲಿ ಕಾಂಗ್ರೆಸ್ಸೇತರ ಜಾತ್ಯಾತೀತ ಪಕ್ಷಗಳಿಗೆ ಮತ ನೀಡುವಂತೆ ಸಿಪಿಐ(ಎಂ) ಮತದಾರರಲ್ಲಿ ವಿನಂತಿಸಿದೆ.

ಅಕ್ರಮ ಬಾಂಗ್ಲಾ ವಲಸಿಗರ ಸಮಸ್ಯೆ, ಅದನ್ನು ಕೋಮುವಾದೀಕರಿಸಿ ರಾಜಕೀಯ ಲಾಭ ಪಡೆಯಲು ಯತ್ನಿಸುವ ಬಿಜೆಪಿ ತಂತ್ರ, ಸರಣಿ ಬಾಂಬ್ ಸ್ಫೋಟಗಳು ಹಾಗೂ ಅಮಾಯಕರ ಹತ್ಯೆ, ಬ್ರಹ್ಮಪುತ್ರ ಪ್ರವಾಹದ ನಿರಂತರ ಹಾವಳಿ, ಜನಾಂಗೀಯವಾದ ಮುಂತಾದ ಗಂಭೀರ ಸವಾಲುಗಳು ರಾಜ್ಯವನ್ನು ಕಾಡುತ್ತಿದ್ದು, ಇವು ಚುನಾವಣೆಯಮೇಲೆ ಪ್ರಭಾವ ಬೀರುವ ಪ್ರಶ್ನೆಗಳಾಗಿವೆ.

ಇಡೀ ದೇಶದಲ್ಲಿ ಇರುವಂತೆ ಉದ್ಯೋಗ, ಆಹಾರ, ವಸತಿ, ಭೂಮಿ ಪ್ರಶ್ನೆಗಳಲ್ಲಿ ಜನತೆ ಎದುರಿಸುತ್ತಿರುವ ಸಮಸ್ಯೆ ಅಭಿವೃದ್ಧಿಯ ಪ್ರಶ್ನೆಗಳೂ ಇವೆ. ಮೇ 16 ರಂದು ಬಯಲಾಗಲಿರುವ ಫಲಿತಾಂಶ ಏನನ್ನೂ ಹೇಳಲಿದೆಯೋ ಕಾದು ನೋಡಬೇಕಿದೆ. ○

ವಿರೋಧಿ ಅಲೆ ಕಾಣದ ಕೇರಳ...

ಪುಟ 16 ರಿಂದ

ಬಡವರೆಲ್ಲರಿಗೂ ನಿವೇಶನ ನೀಡುವ ಯತ್ನ... ಭ್ರಷ್ಟಾಚಾರ, ಭೂಗಳ್ಳತನಗಳ ವಿರುದ್ಧ ಕಠಿಣ ಧೋರಣೆ... ಹೀಗೆ ಎಲ್‌ಡಿಎಫ್ ಸರ್ಕಾರದ ಜನಪರ ನೀತಿಗಳ ಪಟ್ಟಿ ಮಾಡುತ್ತಾ ಹೋಗಬಹುದು.

ಇದೆಲ್ಲದರ ಒಟ್ಟು ಫಲಿತಾಂಶ ಎಂದರೆ ಹಿಂದಿನ ಯುಡಿಎಫ್ ಸರ್ಕಾರದ ನೀತಿಗೂ ಈಗಿನ ಎಲ್‌ಡಿಎಫ್ ಸರ್ಕಾರದ ನೀತಿಗೂ ಬಾರಿ ದೊಡ್ಡ ವ್ಯತ್ಯಾಸವನ್ನು ಜನ ಗುರುತಿಸುವಂತಾಗಿದೆ.

ಯುಡಿಎಫ್ ಕುತಂತ್ರಗಳು

ಜನವಿರೋಧಿ ನೀತಿಗಳು ಭ್ರಷ್ಟಾಚಾರದಿಂದ ರೋಸಿದ ಜನತೆ ನಿರಂತರ ಮೂರು ಚುನಾವಣೆಗಳಲ್ಲಿ ಮಣ್ಣು ಮುಕ್ಕಿಸಿದರೂ ಪಾಠ ಕಲಿಯದ ಯುಡಿಎಫ್ ಎಲ್‌ಡಿಎಫ್ ಬಗ್ಗೆ ಅದರಲ್ಲೂ ಸಿಪಿಐ(ಎಂ) ಮತ್ತು ಸಿಪಿಐ(ಎಂ) ಮುಖಂಡರ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದೆ.

ಎಸ್‌ಎನ್‌ಸಿ ಲ್ಯಾವಿನಿನ್ ಒಪ್ಪಂದದ ...ದದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಅವರ ಮೇಲೆ ಭ್ರಷ್ಟಾಚಾರ ಆರೋಪ ಹೊರಿಸಿ ವ್ಯಾಪಕ ಅಪಪ್ರಚಾರ ನಡೆಸಲಾಯಿತು. ಇದು ಜಲವಿದ್ಯುತ್ ಘಟಕಗಳ ಉಪಕರಣಗಳ ನವೀಕರಣಕ್ಕೆ ಸಂಬಂಧಿಸಿದಂತೆ ಆಸ್ಟ್ರೇಲಿಯಾ ಕಂಪನಿಯೊಂದಿಗೆ ಮಾಡಿಕೊಳ್ಳಲಾದ ಒಪ್ಪಂದಕ್ಕೆ ಸಂಬಂಧಪಟ್ಟಿದ್ದು.

ಕಂಪನಿಯೊಂದಿಗೆ ಮಾತುಕತೆ ನಡೆಸಿದ್ದು, ಒಡಂಬಡಿಕೆ(ಎಂಒಯು)ಗೆ ಬಂದಿದ್ದು, ಅಂದು ಅಧಿಕಾರದಲ್ಲಿದ್ದ ಎ.ಕೆ. ಆಂಟನಿ ನೇತೃತ್ವದ ಯುಡಿಎಫ್ ಸರ್ಕಾರ. ಸರ್ಕಾರ ಬದಲಾದ ನಂತರ ಇ.ಕೆ.ನಯನಾರ್ ಸರ್ಕಾರ ಒಪ್ಪಂದಕ್ಕೆ ಅಂತಿಮವಾಗಿ ಸಹಿ ಹಾಕಿತು. ಈ ಸರ್ಕಾರದಲ್ಲಿ ವಿದ್ಯುತ್ ಮಂತ್ರಿಯಾಗಿದ್ದ ಪಿಣರಾಯಿ ವಿಜಯನ್‌ರವರ ಪಾತ್ರವೇನು? ಕೇರಳದ ಹಿತಾಸಕ್ತಿಗೆ ಬಾರಿ ಹಾನಿ ಮಾಡುವ ಸ್ವರೂಪದಲ್ಲಿದ್ದ ಒಪ್ಪಂದದ ಅಂಶಗಳ ಕುರಿತು ಕಂಪನಿಯೊಂದಿಗೆ ಮಾತುಕತೆ ನಡೆಸಿ ಮರು ಒಪ್ಪಂದಕ್ಕೆ ಬಂದು ಬಾರಿ ನಷ್ಟವನ್ನು ತಪ್ಪಿಸಿದ್ದು. ಬಹುಶಃ ಅದೇ ಕಾರಣಕ್ಕೆ ಇರಬೇಕು, ಯುಡಿಎಫ್ ವಿಜಯನ್ ಅವರಿಗೆ ಗುರಿ ಇಟ್ಟಿತು. ಆದರೆ ಎಲ್‌ಡಿಎಫ್ ಈ ಪ್ರಶ್ನೆಯ ಕುರಿತು ಜನತೆಗೆ ವಿವರಿಸಿತು. ಪ್ರಮುಖವಾಗಿ ಇದೇ ಪ್ರಶ್ನೆಯ ಮೇಲೆ ನಡೆದ ನವ ಕೇರಳ ಯಾತ್ರೆಯಲ್ಲಿ ರಾಜ್ಯದ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾ ನಂದನ್ ಪಾಲ್ಗೊಳ್ಳುತ್ತಿಲ್ಲ. ಅದಕ್ಕೆ ಅವರ ಬೆಂಬಲ ಇಲ್ಲ ಎಂದೆಲ್ಲಾ ಪ್ರಚಾರ ಮಾಡ ಲಾಯಿತು. ಕೊನೆಗೆ ಯಾತ್ರೆಯ ಸಮಾರೋಪದಲ್ಲಿ ವಿ.ಎಸ್.ಅವರೇ ಖುದ್ದು ಪಾಲ್ಗೊಂಡಾಗ ವಿರೋಧಿಗಳು ಬಾಯಿ ಮುಚ್ಚಿಕೊಂಡರು. ಈಗ ಇಸ್ರೇಲ್‌ನಿಂದ 10 ಸಾವಿರ ಕೋಟಿ ರೂ ಮೌಲ್ಯದ ಶಸ್ತ್ರಾಸ್ತ್ರ ಖರೀದಿ ಪ್ರಕರಣದಲ್ಲಿ 600 ಕೋಟಿ ರೂಪಾಯಿಗಳ ಲಂಚದ ವಾಸನೆ ಹೊಡೆಯುತ್ತಿದೆ. ಕೇರಳ ಮೂಲದ ಎ.ಕೆ. ಆಂಟನಿಯವರೇ ರಾಷ್ಟ್ರದ ರಕ್ಷಣಾ ಮಂತ್ರಿ ಈ ಪ್ರಕರಣ ಬಯಲಾದ ಮೇಲೆ ಯುಡಿಎಫ್ ದನಿ ಇನ್ನಷ್ಟು ಉಡುಗಿತು.

ಇದೀಗ ಕೇರಳದಲ್ಲಿ ಚುನಾವಣೆಗಳು ಮುಗಿದ ಮೇಲೆ ಸಿಬಿಐ ಎಸ್‌ಎನ್‌ಸಿ ಲ್ಯಾವಲಿನ್ ಪ್ರಕರಣದಲ್ಲಿ ಪಿಣರಾಯಿ ವಿಜಯನ್ ನಿರ್ದೋಷಿ ಎಂದು ಸಾರಿದೆ. ಇದು ಕೇರಳದ ಜನಕ್ಕೆ ಮೊದಲೇ ಗೊತ್ತಿತ್ತು. ಈ ತೀರ್ಪು ಕೇರಳ ಚುನಾವಣೆ ಮುಗಿದ ಕೂಡಲೇ ಬಂದದ್ದು ಹೇಗೆ, ಸ್ವಲ್ಪ ಮೊದಲೇ ಏಕೆ ಬರಲಿಲ್ಲ. ಜನರ ಮನಸ್ಸಿನಲ್ಲಿ ಪ್ರಶ್ನೆಗಳೂ ಎದ್ದಿವೆ.

ವಿಫಲ ಕೊಲೆ ಪಿತೂರಿ:

ಕಣ್ಣೂರು ಜಿಲ್ಲೆಗೆ ಸೇರಿದ ವಿರೋಧ ಪಕ್ಷದ ಪ್ರಮುಖ ಮುಖಂಡರೊಬ್ಬರನ್ನು ಕೊಂದು ಅದನ್ನು ಎಲ್‌ಡಿಎಫ್ ಮೇಲೆ ಹಾಕಿ ಎಲ್‌ಡಿಎಫ್‌ನ ರಾಜಕೀಯ ಬುಡವನ್ನು ಅಲುಗಾಡಿಸಬೇಕೆಂಬ ಯುಡಿಎಫ್‌ನ ಬಾರಿ ಸಂಚೊಂದನ್ನು ಎಲ್‌ಡಿಎಫ್ ಸರ್ಕಾರದ ಪೋಲೀಸರು ವಿಫಲಗೊಳಿಸಿದ ಘಟನೆ ಇತ್ತೀಚೆಗೆ ನಡೆದಿದೆ.

ಮೋದಿ ನೇತೃತ್ವದಲ್ಲಿ ಗುಜರಾತ್ ರಾಜ್ಯವು ಬಾರಿ ಅಭಿವೃದ್ಧಿ ಕಾಣುತ್ತಿದೆ ಎಂದು ಹೇಳಿಕೆ ನೀಡಿ ಸಿಪಿಐ(ಎಂ)ನಿಂದ ಉಚ್ಚಾಟಿಸಲ್ಪಟ್ಟ ಸಂಸದ ಅಬ್ದುಲ್ಲಾಕುಟ್ಟಿ ಈಗ ಕಾಂಗ್ರೆಸ್ ಮಡಿಲಲ್ಲಿ ಆಶ್ರಯ ಪಡೆದಿದ್ದಾರೆಂಬುದು ಬಹಳಷ್ಟು ಜನಕ್ಕೆ ಗೊತ್ತಿರುವಂಥದ್ದೇ. ಚುನಾವಣಾ ಪ್ರಚಾರದ ಭಾಗವಾಗಿ ಅಬ್ದುಲ್ಲಾ ಕುಟ್ಟಿಯವರು ಕಣ್ಣೂರಿಗೆ ಹೆಲಿಕಾಪ್ಟರ್‌ನಲ್ಲಿ ಆಗಮಿಸಿದ ಸ್ವಲ್ಪ ಹೊತ್ತಿನಲ್ಲೇ ಕೇರಳದ ಪೋಲೀಸರು ಹೊರ ಜಿಲ್ಲೆಗಳಿಂದ ಬಂದಿದ್ದ ಬಾರಿ ಕ್ರಿಮಿನಲ್‌ಗಳ ದೊಡ್ಡ ತಂಡವೊಂದನ್ನು ಬಂಧಿಸಿ ಕೊಲೆ ಯತ್ನವನ್ನು ವಿಫಲಗೊಳಿಸಿದರು.

ಕಾಂಗ್ರೆಸ್ ವಿರುದ್ಧ ಯಾರೂ ಯಾವುದೇ ಆರೋಪ ಮಾಡದೇ ಹೋದರೂ ಸಹ ಸ್ವತಃ ಕಾಂಗ್ರೆಸ್ ಮುಖಂಡರು ಪತ್ರಿಕಾಗೋಷ್ಠಿ ನಡೆಸಿ ಅಬ್ದುಲ್ಲಾ ಕುಟ್ಟಿಯವರ ಕೊಲೆ ನಡೆಸುವ ಸಂಚು ಇರಲಿಲ್ಲ ಎಂದು ಹೇಳಿದ್ದಾರೆ !! ಪ್ರಕರಣದ ಕುರಿತು ವಿಚಾರಣೆ ಮುಂದುವರೆದಿದೆ. ಒಟ್ಟಾರೆ ಈಗಾಗಲೇ ಕೇರಳದ ಜನ ಮತ ಚಲಾಯಿಸಿ ಆಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಬಿಜೆಪಿಗಳಿಗೆ ಪರ್ಯಾಯವಾಗಿ ಮೂರನೇ ಪರ್ಯಾಯ ಸರ್ಕಾರದ ಸಾಧ್ಯತೆ ಹಾಗೂ ಸಿಪಿಐ(ಎಂ) ಪಕ್ಷ ಅದರಲ್ಲಿ ವಹಿಸಬಹುದಾದ ಮಹತ್ವದ ಪಾತ್ರವು ಕೇರಳದ ಮತದಾರರಲ್ಲಿ ಉತ್ಸಾಹ ಮೂಡಿಸಿದ್ದು, ಉತ್ಸಾಹದಿಂದಲೇ ಜನ ಮತ ನೀಡಿದ್ದಾರೆ. ಮೇ 16 ರಂದು ಪ್ರಕಟವಾಗುವ ಕೇರಳದ ಫಲಿತಾಂಶ ಎಲ್‌ಡಿಎಫ್ ಪರವಾಗಿ ಇರಲಿದೆ ಎಂಬ ದೃಢವಿಶ್ವಾಸ ಎದ್ದು ಕಾಣುತ್ತಿದೆ. ○



ರಾಜ್ಯಗಳ ಸುತ್ತು

ಆಡಳಿತ ವಿರೋಧಿ ಅಲೆ ಕಾಣದ ಕೇರಳ

ಆರ್.ರಾಮಕೃಷ್ಣ

ಕೇರಳ-1957ರಲ್ಲಿ ಇಡೀ ದೇಶದಲ್ಲೇ ಮೊತ್ತ ಮೊದಲಬಾರಿಗೆ ಕಾಂಗ್ರೇಸೇತರ ಸರ್ಕಾರವನ್ನು ಕಂಡ ರಾಜ್ಯ. ಜಗತ್ತಿನಲ್ಲೇ ಪ್ರಥಮವಾಗಿ ಚುನಾವಣೆಗಳ ಮೂಲಕ ಕಮ್ಯುನಿಸ್ಟ್ ಪಕ್ಷವೊಂದನ್ನು ಚುನಾಯಿಸಿದ ಹಿರಿಮೆಯೂ ಕೇರಳ ರಾಜ್ಯದ ಜನರದ್ದೇ.

2004ರ ಲೋಕಸಭಾ ಚುನಾವಣೆಯಲ್ಲಿ ಎಡಪಕ್ಷಗಳು 61 ಸ್ಥಾನಗಳಿಸಿ 'ರಾಷ್ಟ್ರ ರಾಜಕಾರಣದ ಕೇಂದ್ರ ಸ್ಥಾನದಲ್ಲಿ ಬಂದು ಕೂರಲು' ಸಾಧ್ಯವಾದದ್ದರಲ್ಲಿ ಕೇರಳ ರಾಜ್ಯದಕೊಡುಗೆ ಕೂಡ ದೊಡ್ಡದು. 2004ರ ಚುನಾವಣೆಯಲ್ಲಿ ಒಂದು ಇತಿಹಾಸವೇ ನಿರ್ಮಾಣವಾಯಿತು. ಒಟ್ಟು 20 ಸ್ಥಾನಗಳಿರುವ ಕೇರಳದ ಜನತೆ ಸಿಪಿಐ(ಎಂ) ನೇತೃತ್ವದ ಎಡಪ್ರಜಾಸತ್ತಾತ್ಮಕ ರಂಗ(ಎಲ್‌ಡಿಎಫ್)ಕ್ಕೆ ಒಟ್ಟು 18 ಸ್ಥಾನ ನೀಡಿದ್ದು, ಕೇರಳದ ರಾಜಕಾರಣಕ್ಕೆ ಹೊಸ ಪ್ರವೃತ್ತಿಯೇ. ಈ ಹಿಂದೆ ಯಾವುದೇ ಪಕ್ಷ ಅಥವಾ ರಂಗ ಇಂತಹ ಬಾರಿ ಗೆಲುವು ದಾಖಲಿಸಿದ ಉದಾಹರಣೆ ಇಲ್ಲ.


ಅಂದು ಅಧಿಕಾರದಲ್ಲಿದ್ದ ಎ.ಕೆ.ಆಂಟನಿ ನೇತೃತ್ವದ ಯುಡಿಎಫ್ ಸರ್ಕಾರವನ್ನು ಮಣ್ಣು ಮುಕ್ಕಿಸಲೇಬೇಕೆಂದು ಜನ ನೀಡಿದ ತೀರ್ಪಾಗಿತ್ತು; ಅದು. ಜನ ಅಷ್ಟು ರೋಸಿಹೋಗಿದ್ದರು ಸರ್ಕಾರದ ಬಗೆಗೆ. ಕೃಷಿ ಉತ್ಪನ್ನಗಳ ಬೆಲೆ ಕುಸಿತ, ಕೃಷಿ ಬಿಕ್ಕಟ್ಟು, ರೈತರ ಸಾಲು, ಸಾಲು ಆತ್ಮಹತ್ಯೆಗಳು, ಕೈಚೆಲ್ಲಿಕುಳಿತ ಸರ್ಕಾರ, ವ್ಯಾಪಕ ಭ್ರಷ್ಟಾಚಾರ, ಕೋಮುವಾದವನ್ನು ಎದುರಿಸಲಾರದ ಅಸಹಾಯಕತೆ, ಶಿಕ್ಷಣದ ನಿರ್ಲಜ್ಜ ವ್ಯಾಪಾರೀಕರಣ, ಜನ ಚಳುವಳಿಗಳ ದಮನ ಯತ್ನ... ಜನರು ಐತಿಹಾಸಿಕ ತೀರ್ಪನ್ನೇ ನೀಡಿದರು.

ಕಾಲ ಚಕ್ರ ಉರುಳಿದೆ. 5 ವರ್ಷಗಳ ನಂತರ ಮತ್ತೊಂದು ಲೋಕಸಭಾ ಚುನಾವಣೆ ಬಂದಿದೆ. ಈಗ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವುದು ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರ. 2004ರಲ್ಲಿ ಅದಂತೆ ಈಗಲೂ ಜನ ಆಳುವ ಸರ್ಕಾರದ ವಿರುದ್ಧ ಸೇಡು ತೀರಿಸಿಕೊಳ್ಳುತ್ತಾರೆ. ಆಕ್ರೋಶಕ್ಕೆ ತುತ್ತಾಗುವ ಸರದಿ ಈ ಎಲ್‌ಡಿಎಫ್‌ನದು ಎಂದು ಹಲವು ಚುನಾವಣಾ ಪಂಡಿತರು ಗಣಿತ ಪ್ರಮೇಯಗಳನ್ನು ಮಾಡುತ್ತಾ ಕೂಡುತ್ತಾ ಕಳೆಯುತ್ತಾ ಕುಳಿತಿದ್ದಾರೆ. ಊಹುಂ, ಇಲ್ಲ ಪರಿಸ್ಥಿತಿ ಹಾಗಿಲ್ಲ. ಕೇರಳದ ಜನರು ಮತ್ತೊಂದು ಇತಿಹಾಸ ಸೃಷ್ಟಿಸುವಂತೆ ಕಾಣುತ್ತದೆ. ಎಡರಂಗ ವಿರೋಧಿಗಳು ಬಯಸುತ್ತಿರುವಂತೆ ಈಗ ಕೇರಳದಲ್ಲಿ ಅಧಿಕಾರಸ್ಥ ವಿರೋಧದ ಅಲೆಯಂತೂ ಕಾಣುತ್ತಿಲ್ಲ.

ಕೇರಳದ ಜನ ಒಮ್ಮೆ ಚುನಾಯಿಸಿದ ಸರ್ಕಾರವನ್ನು ಅದರ ಹಿಂದೆಯೇ ಮತ್ತೆ ಚುನಾಯಿಸಿದ ಉದಾಹರಣೆ ಇಲ್ಲ. ಅಷ್ಟು ಮಾತ್ರವಲ್ಲ. ಇಲ್ಲಿ ಅಧಿಕಾರಕ್ಕೆ ಏರುವವರು ಗಳಿಸುವ ಶೇಕಡಾವಾರು ಮತಗಳಿಗೂ, ಸೋಲುವವರು ಗಳಿಸುವ ಶೇಕಡವಾರು ಮತಗಳಿಗೂ ಅಂತರ ಬಹಳ ಕಡಿಮೆ ಇರುತ್ತದೆ. ಕೆಲವೇ ಶೇಕಡಾ ಮತಗಳ ಅಂತರದಲ್ಲಿ ಗೆಲ್ಲುವ ಸ್ಥಾನಗಳಲ್ಲಿ ಬಾರಿ ಪಲ್ಲಟ.

ಲೋಕಸಭಾ ಚುನಾವಣೆಗಳಲ್ಲಿ ಎಲ್‌ಡಿಎಫ್

2004, 1967 ಈ ಎರಡು ಚುನಾವಣೆಗಳನ್ನು ಬಿಟ್ಟರೆ ಎಡಪಕ್ಷಗಳು ಲೋಕಸಭಾ ಚುನಾವಣೆಯಲ್ಲಿ



ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಿರುವ ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್

ಎಂದೂ ಶೇ.50 ಸ್ಥಾನಗಳನ್ನು ಗಳಿಸಿದ ಇತಿಹಾಸ ಇಲ್ಲ. ಆದರೆ ಈ ಬಾರಿ 1967, 2004 ರಂತೆ ಶೇ.50 ಸ್ಥಾನ ಮೀರಿದ ದೊಡ್ಡ ಗೆಲುವು ಸಾಧಿಸುವ ದೃಢ ವಿಶ್ವಾಸ ಎಲ್‌ಡಿಎಫ್‌ನದು.

ವಿಶ್ವಾಸಕ್ಕೆ ಆಧಾರವೇನು?

ಲೋಕಸಭಾ ಚುನಾವಣೆಗಳಲ್ಲಿ ಇದುವರೆಗೆ ಹೆಚ್ಚಿನ ಸಂದರ್ಭಗಳಲ್ಲಿ ಕಾಂಗ್ರೆಸ್ ನೇತೃತ್ವದ ರಂಗ ಮೇಲುಗೈ ಸಾಧಿಸಲು ಕಾರಣವೇನು? ಪಶ್ಚಿಮ ಬಂಗಾಳ, ತ್ರಿಪುರಾಗಳಂತೆ ಎಡಶಕ್ತಿಗಳಲ್ಲಿ ಅಧಿಕಾರ ನಡೆಸಿದ ನಂತರ ಮತ್ತೆ ಅದನ್ನು ಉಳಿಸಿಕೊಳ್ಳಲು ಸಾಧ್ಯವಾಗದಿರಲು ಕಾರಣವೇನು?

ಅದಕ್ಕೆ ಬಹುಮುಖ್ಯವಾದ ಕಾರಣ ಎಂದರೆ ಎಡಶಕ್ತಿಗಳ ಜನಬೆಂಬಲ ಕೇರಳದಲ್ಲಿ ಶೇ.40 ರಿಂದ 45ರ ನಡುವೆ ಸ್ಥಗಿತಗೊಂಡಿ ದ್ದಾಗಿತ್ತು. ಆದರೆ ಈಗ ಪರಿಸ್ಥಿತಿ ಬದಲಿಸಿದೆ. 2004ರ ಲೋಕಸಭೆ, 2005ರ ಸ್ಥಳೀಯ ಸಂಸ್ಥೆಗಳ ಚುನಾವಣೆ, 2006ರ ವಿಧಾನಸಭಾ ಚುನಾವಣೆಗಳನ್ನು ಗಮನಿಸಿದರೆ ಎಲ್‌ಡಿಎಫ್ ಜನ ಬೆಂಬಲ ಶೇ.50 ರ ಹತ್ತಿರ ಹತ್ತಿರ ಬರುತ್ತಿರುವುದು ಕಂಡು ಬರುತ್ತಿದೆ.

ಎಡಶಕ್ತಿಗಳ ಮತ ಬೆಂಬಲ ಶೇ.45ರಷ್ಟನ್ನು ದಾಟದೇ ಇದ್ದದ್ದಕ್ಕೆ ಪ್ರಮುಖವಾಗಿ ಕಾರಣವಾಗಿದ್ದ ಅಂಶ ರಾಜ್ಯದ ಅಲ್ಪ ಸಂಖ್ಯಾತ ಸಮುದಾಯಗಳಾದ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ನಡುವೆ ವ್ಯಾಪಕ ಜನಬೆಂಬಲ ಗಳಿಸುವಲ್ಲಿ ದೌರ್ಬಲ್ಯಗಳು ಮುಂದುವರಿದು ಕೊಂಡು ಬಂದಿದ್ದು, 2004 ರಲ್ಲಿ ಎಲ್‌ಡಿಎಫ್ ಅಭೂತಪೂರ್ವ ವಿಜಯ ಸಾಧಿಸಿದ್ದರಲ್ಲಿ ಎಲ್‌ಡಿಎಫ್ ದೊಡ್ಡ ಪ್ರಮಾಣದಲ್ಲಿ ಅಲ್ಪಸಂಖ್ಯಾತ ಸಮುದಾಯದ ಜನ ಬೆಂಬಲಗಳಿಸಿದ್ದು ಕೂಡ ಒಂದು ಪ್ರಮುಖ ಕಾರಣ. ಎನ್‌ಡಿಎಯ ಕೋಮುವಾದಿ ನೀತಿ ಹಾಗೂ ಅದನ್ನು ಎದುರಿಸುವ ಚೈತನ್ಯವಿಲ್ಲದ ಕಾಂಗ್ರೆಸ್‌ಗೆ ಪಾಠ ಕಲ್ಪಿಸಿ ಅಲ್ಪಸಂಖ್ಯಾತರು ಎಲ್‌ಡಿಎಫ್ ಅನ್ನು ಬೆಂಬಲಿಸಿದರು.

ಭಾರತವು ಸಾಮ್ರಾಜ್ಯಶಾಹಿ ಅಮೇರಿಕಾದ ಬಾಲಂಗೋಚಿ ಯಾಗು ವಂತಹ, ಹಾಗೂ ಪ್ಯಾಲೆಸ್ತೈನ್‌ನ್ನು ಆಕ್ರಮಿಸಿ ದಮನಕಾಂಡ ನಡೆಸುತ್ತಿರುವ ಇಸ್ರೇಲ್ ಜೊತೆ ಮಿಲಿಟರಿ ಬೆಸೆದುಕೊಳ್ಳುವ ಕೇಂದ್ರ ಯುಪಿಎ ಸರ್ಕಾರದ ನೀತಿಯಿಂದ ರಾಜ್ಯದ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯವು ಕಾಂಗ್ರೆಸ್‌ನಲ್ಲಿ ವಿಶ್ವಾಸ ಕಳೆದುಕೊಂಡಿದೆ. ಕೇರಳದ ಎಷ್ಟೋ ಮುಸ್ಲಿಂ ಸಂಘಟನೆಗಳು, ವ್ಯಕ್ತಿಗಳು ಎಲ್‌ಡಿಎಫ್ ಅನ್ನು ಬೆಂಬಲಿಸುತ್ತಿದ್ದಾರೆ. ಇದರಲ್ಲಿ ಮದನಿಯವರ ಪಿಡಿಪಿ ಪಕ್ಷ ಸಹ ಸೇರಿದೆ.

ಉಗ್ರಗಾಮಿ ಶಕ್ತಿಗಳೊಂದಿಗೆ ಸಂಪರ್ಕವಿದೆ ಎಂಬ ಆರೋಪದ ಮೇಲೆ ಮದನಿಯವರು ಜೈಲುವಾಸದಲ್ಲಿದ್ದಾಗ ಅವರು ನಿರಪರಾಧಿ ಎಂದು ಇನ್ನೂ ಸಾಬೀತಾಗಿಲ್ಲದಿದ್ದಾಗ ಯುಡಿಎಫ್ ಅವರ ಬೆಂಬಲ ಪಡೆದಿತ್ತು.

ಈಗ ಮದನಿಯವರ ಮೇಲಿನ ಆರೋಪ ನಿರಾಧಾರ ಎಂದು ಸಾಬೀತಾಗಿದೆ. ಅವರು ಆರೋಪ ಮುಕ್ತರಾಗಿ ಹೊರಬಂದಿದ್ದಾರೆ. ಪಿಡಿಪಿಯು ಯುಡಿಎಫ್ ಬಗೆಗೆ ಭ್ರಮನಿರಸನಗೊಂಡಿದೆ. ಬೇಷರತ್ತಾಗಿ ಎಲ್‌ಡಿಎಫ್‌ನ್ನು ಬೆಂಬಲಿಸುತ್ತಿದೆ. ಹೀಗಿದ್ದಾಗಲೂ ಹೇಗಾದರೂ ಎಲ್‌ಡಿಎಫ್‌ನ್ನು ಟೀಕಿಸಬೇಕೆನ್ನುವವರು ಮಾತ್ರ ಈ ಕುರಿತು ಕೈ ತೋರುತ್ತಿದ್ದಾರೆ.

ಮುಸ್ಲಿಂ ಸಮುದಾಯದ ನಡುವೆ ಆದ ಬದಲಾವಣೆಯಂತೆ ಕ್ರಿಶ್ಚಿಯನ್ ಸಮುದಾಯದ ನಡುವೆ ಪೂರ್ಣ ಬದಲಾವಣೆ ಇನ್ನೂ ಬಂದಿಲ್ಲ. ಕೇರಳದ ಕ್ರಿಶ್ಚಿಯನ್ ಸಂಸ್ಥೆಗಳು ವ್ಯಾಪಕವಾಗಿ ಶಿಕ್ಷಣ ಸಂಸ್ಥೆಗಳನ್ನು ಹೊಂದಿವೆ. ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು, ಶಿಕ್ಷಣದ ವ್ಯಾಪಾರೀಕರಣ ತಡೆಗಟ್ಟಲು ಕೇರಳದ ಎಲ್‌ಡಿಎಫ್ ಸರ್ಕಾರ ಈ ಶಿಕ್ಷಣ ಸಂಸ್ಥೆಗಳ ಮೇಲೆ ಸಾಮಾಜಿಕ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿರುವುದನ್ನು ಕ್ರಿಶ್ಚಿಯನ್ ಸಮುದಾಯದ ಮೇಲೆ ಪ್ರಭಾವ ಹೊಂದಿರುವ ವಲಯಗಳು ಒಪ್ಪುತ್ತಿಲ್ಲ. ಅವರು ತಮ್ಮದು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಎಂಬ ನೆಲೆಯಲ್ಲಿ ತಮ್ಮ ಹಿತ ರಕ್ಷಿಸಿಕೊಳ್ಳಲು ಯತ್ನಿಸುತ್ತಿದ್ದಾರೆ.

ಇಷ್ಟಾದರೂ, ಜಾಕೋಬೈಟ್ಸ್, ಆರ್ಥೋಡಕ್ಸ್, ಪೆಂಟೆಕೋಸ್ಟಲ್ ಮತ್ತು ಪ್ರಾಟೆಸ್ಟೆಂಟ್ ಮುಂತಾದ ಚರ್ಚ್‌ಗಳು ರಾಜ್ಯದಲ್ಲಿ ನಡೆಸಲಾಗುತ್ತಿರುವ ಕಮ್ಯುನಿಸ್ಟ್ ವಿರೋಧಿ ಪ್ರಚಾರದಲ್ಲಿ ಪಾಲ್ಗೊಳ್ಳಲು ನಿರಾಕರಿಸಿವೆ. ಶಿಕ್ಷಣ ಸಂಸ್ಥೆಗಳ ಸಾಮಾಜಿಕ ನಿಯಂತ್ರಣದ ಸಂಬಂಧ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ವಿ.ಎಸ್.ಅಚ್ಯುತಾ ನಂದನ್ ನೇತೃತ್ವದ ರಾಜ್ಯ ಸರ್ಕಾರ ಶ್ರಮಿಸುತ್ತಿದೆ.

ಆಡಳಿತ ವಿರೋಧಿ ಅಲೆ ಇಲ್ಲ

ರಾಜ್ಯದಲ್ಲಿ ಎಲ್‌ಡಿಎಫ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ವಹಿಸಲಾದ ಹಲವು ಜನಪರ ನೀತಿ, ಕಾರ್ಯಕ್ರಮಗಳು ಸರ್ಕಾರದ ವಿರೋಧಿ ಭಾವನೆಯನ್ನು ನಿವಾರಿಸುವಲ್ಲಿ ಯಶಸ್ವಿಯಾಗಿವೆ.

2 ರೂ ದರದಲ್ಲಿ ಕೆ.ಜಿ. ಅಕ್ಕಿ, 25 ಲಕ್ಷ ಕುಟುಂಬಗಳಿಗೆ ದೊರೆಯುತ್ತಿದೆ. ಕೇಂದ್ರ ಸರ್ಕಾರವು ರಾಜ್ಯದಲ್ಲಿ 11 ಲಕ್ಷ ಕುಟುಂಬಗಳನ್ನು ಮಾತ್ರ ಬಿಪಿಎಲ್ ಕುಟುಂಬಗಳೆಂದು ಗುರುತಿಸಿದೆ. ಅಸಂಘಟಿತ ಕಾರ್ಮಿಕರ ನಿವೃತ್ತಿ ವೇತನವನ್ನು 100 ರೂ.ನಿಂದ 250 ರೂ.ಗೆ ಏರಿಸಲಾಗಿದೆ. 25 ಲಕ್ಷ ಕುಟುಂಬಗಳಿಗೆ ಉಚಿತ ಆರೋಗ್ಯ, ವಿಮೆ ಸೌಲಭ್ಯ ಒದಗಿಸಲಾಗಿದೆ. ದಲಿತರು, ಮೀನುಗಾರರು ಹಾಗೂ ರೈತರ ಸಾಲಮನ್ನಾ, ಬಿಕ್ಕಟ್ಟಿನಲ್ಲಿರುವ ರೈತರಿಗೆ ಖಾಸಗಿ ಸಾಲದಿಂದಲೂ ಮುಕ್ತಿ ನೀಡುವ ಪರಿಹಾರದ ಕ್ರಮಗಳು, ರೈತರಿಂದ ಸಂಗ್ರಹಿಸಲಾಗುವ ಭತ್ತಕ್ಕೆ ಕೇಂದ್ರ ಸರ್ಕಾರವು ಕೆ.ಜಿ.ಗೆ 9 ನಿಗದಿಪಡಿಸಿದ್ದರೂ, ರಾಜ್ಯ ಸರ್ಕಾರದಿಂದ 11 ರೂ ದರದಲ್ಲಿ ಖರೀದಿ, ಪಶು ಆಹಾರಕ್ಕೆ ಸಹಾಯಧನ, ಸ್ತ್ರೀ ಶಕ್ತಿ ಸಂಘಗಳಿಗೆ ಶೇ.4 ಬಡ್ಡಿದರದ ಸಾಲ... ರಾಜ್ಯದಲ್ಲಿ ನಿವೇಶನ ರಹಿತರೇ ಇಲ್ಲದಂತೆ,

ಪುಟ 15ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH